

# ಅಖಿಲ ಭಾರತ ಪತ್ರಿಕೆ

ಜುಲೈ 2022

# ಕಾಯಕವೇ ಕೈಲಾಸ

ಬೆಲೆ : 15/-



ಫೋಟೊ: ಇಮೇಜಿಂಗ್ ಸಾವಿತ್ರಿ

ವಿಧಿಯುಕ್ತವಾಗಿ ಸಂಬದ್ಧಗೊಳಿಸಿ ತನ್ನದೇ ಲೋಕ–ನಿಯಮ
ಆ ಭವ್ಯ–ಭೂಮ–ಸೌಂದರ್ಯಕೀಗ ತೇಜಾಪ್ತ–ದೀಪ್ತಿ–ಧಾಮ,
ಜೀವ–ಜೀವನವು ಅದು ಅವಳ ಸಹಜ ಚೈತನ್ಯ–ರಾಜ್ಯವೆಂದು
ಅವಳೀಗ ತನ್ನ ಸ್ವತ್ವಾಧಿಕಾರ ಘೋಷಿಸುತ ಬೆಳಗಿ ನಿಂದು,

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 185)**

**ಅಖಿಲ ಭಾರತ ಪತ್ರಿಕೆ**
**ಜುಲೈ 2022**

ಸಂಪುಟ: 32 ಸಂಚಿಕೆ: 07

**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com

**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ

**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

# ಪರಿವಿಡಿ

## "ಕಾಯಕವೇ ಕೈಲಾಸ"

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು

**ನೈಜ ಸೇವೆ** 3
ಅನು: ನಾಗಜ್ಯೋತಿ

**ಕರ್ತವ್ಯಗಳ ಮೂಲಕ ಸಾಧನೆ** 4
ಅನು: ನಾಗಜ್ಯೋತಿ

**ಕಾಯಕದ ಇಚ್ಛೆ** 10
ಅನು: ಪ್ರೊ. ವೀರಭದ್ರಪ್ಪ

**ಕರ್ತವ್ಯದ ಉದ್ದೇಶ** 15
ಅನು: ಡಾ॥ ಮಹಾದೇವ ಸಕ್ರಿ

**ದೈವೀ ಕಾರ್ಯಕ್ಕೆ ಅಡೆತಡೆಗಳು** 34
ಅನು: ಶ್ರೀ ಪುಟ್ಟು ಕುಲಕರ್ಣಿ

**ಗುರುಶ್ರೀ ಅರವಿಂದರ ಗುರು ಯಾರು?**
**'ಗುರುವಾದ' ಮತ್ತು ಗುರು ಶ್ರೀ ಅರವಿಂದರು** 39
ಅನು: ಡಾ॥ ಗೌರೀಶ ಕಾಯ್ಕಿಣಿ

**ಶ್ರೀ ಅರವಿಂದರ "ಮಹಾತ್ಮರು"** 49
ಅನು: ಶ್ರೀ ಪುಟ್ಟು ಕುಲಕರ್ಣಿ

**ಯುವಚೇತನಗಳಿಗೆ "ಶ್ರೀ ಅರವಿಂದರು"** 56
ಅನು: ಶ್ರೀ ಪುಟ್ಟು ಕುಲಕರ್ಣಿ

**ಶ್ರೀ ಅರವಿಂದರ ಕಾವ್ಯ "ಈಲಿಯನ್"** 58
ಅನು: ಡಾ॥ ಬಿ.ಆರ್. ಭೀಡ್

**ಮಹರ್ಷಿ ಶ್ರೀ ಅರವಿಂದರ 150ನೇ ಜನ್ಮದಿನದ**
**ವಾರ್ಷಿಕೋತ್ಸವ ಸಮಾರಂಭದ ಆಹ್ವಾನ ಪತ್ರ** 66

**ವಾರ್ತಾಪತ್ರ** 68

## ಸಂಪಾದಕರ ಟಿಪ್ಪಣಿ

ಕರ್ಮ ಅಥವಾ ಕರ್ತವ್ಯ ಎನ್ನುವದು ಶ್ರೀ ಅರವಿಂದರ ಯೋಗದಲ್ಲಿ ಅತ್ಯಂತ ಪ್ರಮುಖವಾಗಿರುವ ಘಟಕವಾಗಿದೆ. ಇಲ್ಲಿ ಇದನ್ನು ಮನುಕುಲದ ಸೇವೆಗಾಗಿ ಎನ್ನುವ ಯಾವದೇ ಒತ್ತಡವಿಲ್ಲದೇ, ಅಥವಾ ಕೆಲವೊಂದು ಬೌದ್ಧಿಕ ಚಿಂತನಗಳಿಂದ ರೂಪಿತಗೊಳ್ಳದೇ, ಅದು ಸಂಪೂರ್ಣವಾಗಿ 'ದೈವತ್ವಕ್ಕೆ ಸೇವೆ ಸಲ್ಲಿಸುವ' ವ್ಯಾಪಕಾರ್ಥದಲ್ಲಿದೆ. ಮಾನವೀಯತೆಯ ಸಲುವಾಗಿ ಕರ್ಮನಿರತನಾಗುತ್ತೇನೆ ಎನ್ನುವದು ಒಂದು ಹಂತದಲ್ಲಿ ರಾಜಸಿಕ ಮನೋಭಾವದಿಂದ ಉತ್ಪನ್ನವಾಗಿ ಹೊದೆಸಲ್ಪಟ್ಟಿರುವ ಗವಸು ಆಗಿರುತ್ತದೆ. ಏಕೆಂದರೆ ಇಲ್ಲಿ ಮತ್ತೊಬ್ಬರಿಗೆ ಉತ್ತಮವಾದುದನ್ನು ಒದಗಿಸುವ ಸಲುವಾಗಿ ಕಾರ್ಯ ಮಾಡುತ್ತಿದ್ದೇನೆ ಎನ್ನುವ ಅಹಂ ಅಥವಾ ಗರ್ವವು ಪ್ರಧಾನವಾಗಿರುತ್ತದೆ. ಇದು ರಾಜಸಿಕ ಅಹಂಕಾರದ ಸ್ವರೂಪವೇ ಎನ್ನುವದು ಸ್ಪಷ್ಟವಾಗಿದೆ. ಅದೂ ಅಲ್ಲದೇ ಮಾನವನ ಹಂತದೊಳಗೆ ಬಂಧಗೊಂಡು ಸಾಗಲು ಇದು 'ಸಾತ್ವಿಕ ಕಲ್ಪನೆ'ಯೂ ಆಗಿದೆ. ಆದರೆ 'ಯೋಗವು' ಮಾತ್ರ ನಮ್ಮ ಮಾನವ–ಸೂತ್ರವನ್ನು ಮೊದಲು ಭಾವಾಭೂತಗೊಳಿಸಿ, ಅದನ್ನು ಆ ದೈವತ್ವವು ಧಾರೆಯುತ್ತಿರುವ ಆ ಸಂಪರ್ಕ–ವ್ಯವಸ್ಥೆಗೆ, ಮತ್ತು ಆ ಮೂಲಕ ಅದು ಈ ಭೂಮಿಗೆ ಪರಮ ಸಮೃದ್ಧಿಯನ್ನು ಅವತರಣಗೊಳಿಸಲು ಸೂಕ್ತವಾಗಿರುವ ಉಪಕರಣವನ್ನಾಗಿಸಿಕೊಳ್ಳಬೇಕಿದೆ. ಹೀಗಾಗಿ ಇಲ್ಲಿ, ನಮ್ಮ ಕರ್ಮವನ್ನು ಅಥವಾ ಕರ್ತವ್ಯವನ್ನು ಉಪಾಸನೆಯ ಹಂತದಲ್ಲಿಯೇ ರೂಪಿಸಿಕೊಳ್ಳಬೇಕು. ಇದನ್ನೇ 'ಕಾಯಕವೇ ಕೈಲಾಸ' ಎಂದು ಕರೆಯಲಾಗಿದೆ. ಇದಕ್ಕಾಗಿ ನಮ್ಮ ಜೀವ–ಜೀವನವು ಸದಾ ಪ್ರಾರ್ಥನೆಯಲ್ಲಿರಬೇಕಾಗಿದೆ. ದೈವತ್ವದ ಸಲುವಾಗಿ ಸೇವೆ ಸಲ್ಲಿಸುವದು ಎಂದರೆ ನಮ್ಮ ಮಾನವ–ಚೇತನವು ಆ ಪ್ರಚಂಡ ದೈವೀ ಚೇತನದ ಸಂಪರ್ಕಕ್ಕೆ ಬರುತ್ತದೆ. ಜೊತೆಗೆ, ಶಕ್ತಿಯ ರೂಪಾಂತರಗಳನ್ನೂ ಕಾಣಿಸುತ್ತದೆ.

ಈ ಸಂಚಿಕೆಯು ಈ 'ಪೂರ್ಣ ಯೋಗ'ದ ಹಿನ್ನೆಲೆಯಲ್ಲಿ ರೂಪಿತಗೊಂಡಿದೆ. [ಎಐಎಮ್]

# ನೈಜ ಸೇವೆ

**– ಅನುವಾದ: ನಾಗಜ್ಯೋತಿ ಮಾನವಿ**

ಈ ಮುಂಜಾನೆ ಆರಂಭವಾಗುತ್ತಿರುವ ತಿಂಗಳಿನತ್ತ ಕಣ್ಣು ಹಾಯಿಸುತ್ತಾ ಮತ್ತು 'ನಿನ್ನನ್ನು' ಉತ್ತಮವಾಗಿ ಹೇಗೆ ಸೇವೆ ಮಾಡಲಿ ಎಂದು ಆಶ್ಚರ್ಯಪಡುತ್ತಿದ್ದೆ. ನಿಶ್ಚಲ ನೀರವತೆಯಲ್ಲಿನ ಮೇಲುನಡಿಯಂತೆ ಸಣ್ಣ ಧ್ವನಿಯನ್ನು ನಾನು ಕೇಳಿಸಿಕೊಂಡೆ, ಮತ್ತು ಅದು ನನಗೆ ಹೀಗೆ ಹೇಳಿತು; 'ನೋಡು ಎಲ್ಲಾ ಬಹಿರಂಗದ ಸಂದರ್ಭಗಳಿಗೆ ಅಷ್ಟೇನು ಮಹತ್ವವಿಲ್ಲ, ನಿನ್ನದೇ ಸ್ವಂತ ಸತ್ಯದ ಪರಿಕಲ್ಪನೆಯನ್ನು ಸಾಕ್ಷಾತ್ಕರಿಸಿಕೊಳ್ಳಲು ಏಕೆ ಹೋರಾಟ ಮತ್ತು ದಣಿವೇಕೆ? ಬಹಳ ನಮ್ರತೆ, ಬಹಳ ನಂಬಿಕಾರ್ಹವಾಗಿ ಇರು, ಯಾವುದರಿಂದಲೂ ತೊಂದರೆಗೊಳಗಾಗಲಾರದೆ ಇರುವುದೊಂದೇ ನಮ್ಮ ಕರ್ತವ್ಯ. ತಮಗೆ ತಾವೇ ಹಿಂಸೆ ಪಟ್ಟುಕೊಂಡು ಒಳ್ಳೆಯದನ್ನು ಮಾಡುವುದು ಸಹ ಕೆಟ್ಟ ಸಂಕಲ್ಪದಷ್ಟೇ ಹೆಚ್ಚು ಕೆಡುಕು ಮಾಡುತ್ತದೆ. ಆಳವಾದ ನಿಂತ ನೀರಿನಂತಿರುವ ನಿಶ್ಚಲತೆಯನ್ನು ಹೊಂದಿದರೆ ಮಾತ್ರ 'ನಿಜವಾದ ಸೇವೆ'ಯು ಸಾಧ್ಯವಾಗುತ್ತದೆ.

ಮತ್ತು ಈ ಪ್ರತ್ಯುತ್ತರವು ಬಹಳ ಪ್ರಕಾಶಮಾನ ಮತ್ತು ಪರಿಶುದ್ಧವಾಗಿತ್ತು. ಅದು ತನ್ನೊಳಗೆ ತಾನೇ ಎಷ್ಟು ಗಮನಾರ್ಹ ನೈಜತೆಯೊಂದಿಗೆ ನಡೆತೆಂದರೆ ಅದು ವಿವರಿಸಿದ ಸ್ಥಿತಿ ಯಾವುದೇ ಕಷ್ಟವಿಲ್ಲದೇ ಸಂವಹರಿಸಿತು, ನನಗೆ ಅರ್ಥವಾಯಿತು; ನಾನು ಯಾವ ಅತ್ಯುತ್ತಮ ಮನೋಭಾವ ತೆಗೆದುಕೊಳ್ಳಬೇಕೆಂಬುದನ್ನು ಸ್ಪಷ್ಟವಾಗಿ ನೋಡಿದೆ; ಮತ್ತು ಈಗ ಕೇವಲ 'ನಿನ್ನನ್ನು' ಮಾತ್ರ ಕೇಳಬೇಕಾಗಿದೆ, ಓ ಭವ್ಯವಾದ ಪ್ರಭುವೇ, ನನ್ನ ಪರಾತ್ಪರ ಗುರುವೇ, ನೀನು ನನಗೆ ಶಕ್ತಿ ಕೊಡಬೇಕೆಂದರೆ ನಾನು ಸತತವಾಗಿ ಈ ಸ್ಥಿತಿಯಲ್ಲಿರಬೇಕಾಗುತ್ತದೆ.

"ನಿನ್ನನ್ನು ನೀನು ಹಿಂಸಿಸಿಕೊಳ್ಳಬೇಡ, ಮಗುವೇ ನಿಶ್ಚಲ ನೀರವತೆ, ಶಾಂತಿ, ಶಾಂತಿ..".

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 1/26**

ಗೀತೆಯಲ್ಲಿ ಸೂಚಿಸಿರುವಂತೆ ನೀವು ಕರ್ಮ ಯೋಗದ ಮನೋಭಾವವನ್ನು ತೆಗೆದುಕೊಂಡರೆ ನಿಮ್ಮನ್ನು ಮತ್ತು ನಿಮ್ಮ ಕಷ್ಟಗಳನ್ನು ಅಭೀಪ್ಸೆಯ ವಿಶಾಲ

ಪ್ರಜ್ಞೆಯಲ್ಲಿ ಮರೆತುಬಿಡಿ, ಜಗತ್ತಿನಲ್ಲಿ ಉನ್ನತವಾದ 'ಶಕ್ತಿ' ಕೆಲಸ ಮಾಡುತ್ತಿರುವುದನ್ನು ಅನುಭವಿಸಿ ಮತ್ತು ಆ ಕೆಲಸ ಚಿಕ್ಕದಾಗಿರಲಿ ನಿಮ್ಮನ್ನು ನೀವು ಮಾಡಬೇಕಾಗಿರುವ ಕೆಲಸದ ಉಪಕರಣವನ್ನಾಗಿ ಮಾಡಿಕೊಳ್ಳಿ, ಆದರೆ, ಮಾರ್ಗ ಯಾವುದೇ ಆಗಿರಲಿ, ನೀವು ಸಂಪೂರ್ಣವಾಗಿ ಸ್ವೀಕರಿಸಿಲೇಬೇಕು ಮತ್ತು ನಿಮ್ಮ ಇಡೀ ಸಂಕಲ್ಪವನ್ನು ಅದರೊಳಗೆ ಹಾಕಬೇಕು. ಜೀವನದಲ್ಲೇ ಆಗಲಿ ಅಥವಾ ಯೋಗದಲ್ಲೇ ಆಗಲಿ ದ್ವಂದ್ವ ಮತ್ತು ಕದಡಿದ ಸಂಕಲ್ಪದಿಂದ ಯಶಸ್ವಿಗಾಗಿ ಭರವಸೆ ಪಡಲು ಸಾಧ್ಯವಿಲ್ಲ.

*

ಗೀತೆಯ ಭಾವವನ್ನಿಟ್ಟುಕೊಂಡು ಯಾವುದೇ ಕೆಲಸವನ್ನು ಕರ್ಮ ಕ್ಷೇತ್ರವನ್ನಾಗಿಸಿಕೊಳ್ಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/237–38**

## ಕರ್ತವ್ಯಗಳ ಮೂಲಕ ಸಾಧನೆ

**– ಅನುವಾದ: ನಾಗಜ್ಯೋತಿ ಮಾನವಿ**

**ಮೊದಲ ನಿಯಮ: ನಿಷ್ಕಾಮ ಕರ್ಮ**

ಕ್ರಿಯೆಯ ಕ್ಷೇತ್ರದಲ್ಲಿ ಆಸೆಯು ಬಹಳ ರೂಪವನ್ನು ತೆಗೆದುಕೊಳ್ಳುತ್ತದೆ, ಆದರೆ ಎಲ್ಲಕ್ಕಿಂತಲೂ ಶಕ್ತಿಶಾಲಿಯಾದುದೆಂದರೆ ಪ್ರಾಣದ ಕಡುಬಯಕೆ ಅಥವಾ ಕೆಲಸದ ನಂತರದ ಫಲಾಪೇಕ್ಷೆಯನ್ನು ಹುಡುಕುವುದು, ಈ ಫಲದ ಆಪೇಕ್ಷೆಯು ಆಂತರಿಕ ಸುಖವಾಗಿರಬಹುದು ಅಥವಾ ಕೆಲವು ಇಷ್ಟವಾದ ಸಂಕಲ್ಪವಾಗಿರಬಹುದು ಅಥವಾ ಅಹಂಕಾರಯುತ ಸಂವೇದನೆಗಳ ತೃಪ್ತಿಪಡಿಸಿಕೊಳ್ಳುವಿಕೆ ಅಥವಾ ನಮ್ಮ ಉನ್ನತ ಭರವಸೆಗಳ ಮತ್ತು ಮಹತ್ವಾಂಕ್ಷೆಗಳ ಯಶಸ್ಸಿನ ಬಗೆಗಿನ ಗರ್ವವಾಗಿರಬಹುದು ಅಥವಾ ಈ ಫಲಾಪೇಕ್ಷೆ ಬಾಹ್ಯ ಬಹುಮಾನವಾಗಿರಬಹುದು. ಭೌತಿಕ ಕ್ರಿಯೆಗೆ ತಕ್ಕ ಪ್ರತಿಫಲವಾಗಿರಬಹುದು. ಅವೆಂದರೆ ಸಂಪತ್ತು, ಸ್ಥಾನ, ಮಾನ, ಯಶಸ್ಸು, ಒಳ್ಳೆಯ ಅದೃಷ್ಟ ಅಥವಾ ಬೇರೆ ಯಾವುದೋ ಪ್ರಾಣಿಕ ಅಥವಾ ದೈಹಿಕ ಆಸೆಯ ಈಡೇರುವಿಕೆ ಆಗಿರಬಹುದು. ಇವೆಲ್ಲವುಗಳು ನಮ್ಮನ್ನು ಅಹಂಕಾರದ ಬಲೆಯಲ್ಲಿ ಸಿಲುಕಿಸುತ್ತವೆ. ಯಾವಾಗಲೂ ಈ ತರಹದ ತೃಪ್ತಿಗಳು ನಾವು ಪ್ರಭುತ್ವವನ್ನು

ಅಥವಾ ಸ್ವತಂತ್ರವನ್ನು ಸಾಧಿಸಿದ್ದೇವೆ ಎಂಬ ಭ್ರಮೆಯನ್ನು ಸೃಷ್ಟಿಸುತ್ತವೆ; ಆದರೆ ಇಡೀ ಜಗತ್ತನ್ನು ಆಳುವ ಈ ಕುರುಡು 'ಆಸೆಯ' ಅಂಶಗಳೇ ಆಗಿವೆ; ಅವು ಶ್ರೇಷ್ಠ ಅಥವಾ ಹೀನ, ಸ್ಥೂಲ ಅಥವಾ ಸೂಕ್ಷ್ಮ ರೀತಿಯ ಆಸೆಗಳಿಂದಲೇ ನಾವು ಮಾಗದರ್ಶಿಸಲ್ಪಡುತ್ತೇವೆ. ಅಥವಾ ಹೊಡತೆಕ್ಕೆ ಒಳಗಾಗುತ್ತೇವೆ. ಆದ್ದರಿಂದ ಭಗವದ್ಗೀತೆಯ ಕರ್ಮ ಯೋಗದ ಮೊದಲ ನಿಯಮವೇನೆಂದರೆ ಫಲಾಪೇಕ್ಷೆ ಇರಲಾರದೆ ಕರ್ಮ ಮಾಡುವುದು ಅದೇ ನಿಷ್ಕಾಮ ಕರ್ಮ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/102**

**ಸಮತೆ: ಕರ್ಮ ಯೋಗದ ಪರೀಕ್ಷೆ**

ಕರ್ಮ ಯೋಗದ ಪರೀಕ್ಷೆ ಏನೆಂದರೆ; ಎಲ್ಲಾ ಫಲಿತಾಂಶಗಳಿಗೆ, ಎಲ್ಲಾ ಪ್ರತಿಕ್ರಿಯೆಗಳಿಗೆ, ಎಲ್ಲಾ ಹಾಗೂ ಹೋಗುವಿಕೆಗಳಿಗೆ ಮನದ ಮತ್ತು ಹೃದಯದ ಸಂಪೂರ್ಣ ಸಮತೆಯನ್ನು ಸಾಧಿಸುವುದು. ಅದೃಷ್ಟ ಮತ್ತು ದುರಾದೃಷ್ಟ, ಗೌರವ ಮತ್ತು ಅಪಮಾನ, ಖ್ಯಾತಿ ಮತ್ತು ಅಪಕೀರ್ತಿ, ಯಶಸ್ಸು ಅಥವಾ ಸೋಲು, ಹಿತಕರ ಘಟನೆ ಮತ್ತು ದುಃಖಕರ ಘಟನೆಗಳಿಂದ ವಿಚಲಿತರಾಗದೆ ಇರುವುದಷ್ಟೇ ಅಲ್ಲದೆ, ಆಸ್ಪರ್ಶಿಯಾಗಿರಬೇಕು, ಸಂವೇದನೆಗಳಿಂದ ನರಗಳ ಪ್ರತಿಕ್ರಿಯೆಗಳಿಂದ ಮುಕ್ತರಾಗಿರಬೇಕು, ಮಾನಸಿಕ ನೋಟದಲ್ಲಿ ಮುಕ್ತರಾಗಿರಬೇಕು, ಪ್ರಕೃತಿಯಲ್ಲಿ ಯಾವುದೇ ಸಣ್ಣ ವಿಚಲಿತತೆಯಿಂದ ಪ್ರತಿಕ್ರಿಯಿಸಬಾರದು ಅಥವಾ ಪ್ರಕೃತಿಯ ಯಾವುದೇ ಜಾಗದಲ್ಲಿಯೂ ಸಹ ಕಂಪನವೂ ಉಂಟಾಗಬಾರದು, ಆಗ ಮಾತ್ರ ನಾವು ಗೀತೆ ಬಯಸುವ ಪರಿಪೂರ್ಣ ಮುಕ್ತತೆ ಪಡೆಯುತ್ತೇವೆ. ಹಾಗಿಲ್ಲದಿದ್ದಲ್ಲಿ ಮುಕ್ತತೆ ಪಡೆಯಲು ಸಾಧ್ಯವಿಲ್ಲ, ಒಂದು ಚಿಕ್ಕ ಪ್ರತಿಕ್ರಿಯೆಯು ಸಾಧಕವು ಅಪರಿಪೂರ್ಣನಾಗಿದ್ದಾನೆ ಎಂಬುದಕ್ಕೆ ಸಾಕ್ಷಿಯಾಗುತ್ತದೆ ಮತ್ತು ಬಂಧನವನ್ನು ತನ್ನ ನಿಯಮವಾಗಿ ಸ್ವೀಕರಿಸುತ್ತದೆ ಮತ್ತು ಹಳೆಯ ಪ್ರಕೃತಿಗೆ ಇನ್ನೂ ಅಂಟಿಕೊಂಡಿರುತ್ತದೆ. ನಮ್ಮ ಸ್ವ–ಯಶಸ್ಸು ಕೇವಲ ಭಾಗಶಃ ಸಾಧಿಸಿದಂತೆ; ನಮ್ಮ ಪ್ರಕೃತಿಯ ತಳದಲ್ಲಿಯ ಇನ್ನೂ ಏನೋ ಅಪರಿಪೂರ್ಣ ಅಥವಾ ನೈಜತೆಯಲ್ಲದ ಎಳೆತ ಅಥವಾ ಬಾಗದ ಅಂಶವು ಇನ್ನೂ ಇರುತ್ತದೆ. ಆ ಸಣ್ಣ ಆ ಪರಿಪೂರ್ಣತೆಯ ಇಡೀ ಯೋಗಸಿದ್ಧಿಯನ್ನೇ ವಿನಾಶಗೊಳಿಸಬಹುದು!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/103**

## ಮೊದಲ ದೈವೀ ಮಾರ್ಗಗಳು

ಆದರೆ (ಆಸೆಯಿಲ್ಲದೆ) ನಾವು ಯಾವುದೇ ಕ್ರಿಯೆಯಲ್ಲಿ ಮುಂದುವರೆಸಲು ಹೇಗೆ ಸಾಧ್ಯ? ಸಾಮಾನ್ಯ ಮಾನವ ತನ್ನಲ್ಲಿ ಆಸೆ ಇದೆ ಎಂದು ಅಥವಾ ಮಾನಸಿಕ, ಪ್ರಾಣಿಕ, ದೈಹಿಕ ಬಯಕೆ ಅಥವಾ ಅವಶ್ಯಕತೆಗಾಗಿ ಕ್ರಿಯೆ ಮಾಡುತ್ತಾನೆ; ಆತನು ದೇಹದ ಅವಶ್ಯಕತೆಗಳಿಂದ ಅಥವಾ ಅಧಿಕಾರ ಅಥವಾ ಸುಖದ ಕಡುಬಯಕೆಗಳಿಂದ ನಡೆಸಲ್ಪಟ್ಟಿರುತ್ತಾನೆ. ಅಥವಾ ಆತನು ನೈತಿಕ ಅವಶ್ಯಕತೆಗಳಿಂದ ಆವರಿಸಲ್ಪಟ್ಟಿರುತ್ತಾನೆ ಮತ್ತು ಒತ್ತಾಯಿಸಲ್ಪಟ್ಟಿರುತ್ತಾನೆ, ಕೊನೆ ಪಕ್ಷ ತನ್ನ ವಿಚಾರಗಳು ಅಥವಾ ತನ್ನ ಆದರ್ಶಗಳು ಅಥವಾ ತನ್ನ ಸಂಕಲ್ಪ ಅಥವಾ ತನ್ನ ಪಕ್ಷ ಅಥವಾ ತನ್ನ ದೇಶ ಅಥವಾ ತನ್ನ ದೇವತೆಗಳು ಈ ಜಗತ್ತಿನಲ್ಲಿ ಮೇಲುಗೈ ಸಾಧಿಸಬೇಕೆಂಬ ಅವಶ್ಯಕತೆ ಅಥವಾ ಬೇರಾವೂ ನಮ್ಮ ಕ್ರಿಯೆಗೆ ನೀರೆರೆಯದಿದ್ದರೆ, ಎಲ್ಲಾ ಪ್ರೋತ್ಸಾಹಕ ಅಥವಾ ಪ್ರೇರಣಾಶಕ್ತಿ ತೆಗೆದುಹಾಕಿದಂತಾಗುತ್ತದೆ. ಮತ್ತು ಕ್ರಿಯೆ ತನ್ನಷ್ಟಕ್ಕೆ ತಾನೇ ಅತ್ಯವಶ್ಯಕವಾಗಿ ನಿಲ್ಲುತ್ತದೆ. ಗೀತೆಯು ತನ್ನ ಮೂರನೆಯ ಶ್ರೇಷ್ಟವಾದ ರಹಸ್ಯದೊಂದಿಗೆ ದೈವೀ ಜೀವನದ ಬಗ್ಗೆ ಪ್ರತ್ಯುತ್ತರಿಸುತ್ತದೆ. ಎಲ್ಲಾ ಕ್ರಿಯೆಯನ್ನು ಹೆಚ್ಚು ಹೆಚ್ಚು ದೇವರ ಕಡೆಗೆ ಮಾಡಲೇಬೇಕು ಮತ್ತು ಅಂತಿಮವಾಗಿ ಪ್ರಜ್ಞೆಯು ದೇವರ ಅಧೀನವಾಗಿರಬೇಕು; ನಮ್ಮ ಕೆಲಸವು ದೈವತ್ವಕ್ಕೆ ಸಲ್ಲಿಸುವ ಅರ್ಪಣೆಯಾಗಬೇಕು ಮತ್ತು ಕೊನೆಯಲ್ಲಿ ನಮ್ಮ ಎಲ್ಲಾ ಅಸ್ತಿತ್ವ, ಮನ, ಸಂಕಲ್ಪ, ಹೃದಯ, ಇಂದ್ರಿಯ, ಜೀವ ಮತ್ತು ದೇಹ, ಪರಮಾತ್ಮನಿಗೆ ಮಾಡುವ ಸಮರ್ಪಣೆಯು ಅದು ದೈವೀ–ಪ್ರೀತಿ ಮತ್ತು ದೈವೀ–ಸೇವೆ, ನಮ್ಮ ಏಕೈಕ ಉದ್ದೇಶವಾಗಿ ಉಳಿಯಬೇಕು. ಪ್ರೇರಣಾಶಕ್ತಿಯ ಈ ರೂಪಾಂತರ ಮತ್ತು ಕರ್ಮದ ಪ್ರತೀ ಸ್ವಭಾವವು ಅವಶ್ಯಕವಾಗಿ ಇದರ ಅತ್ಯುನ್ನತ ವಿಚಾರವಾಗಿದೆ; ಇದು ಕರ್ಮ, ಭಕ್ತಿ, ಜ್ಞಾನದ ಏಕೈಕ ಸಮನ್ವಯ ತಳಹದಿಯಾಗಿದೆ. ಕೊನೆಯಲ್ಲಿ, ಆಸೆಯಲ್ಲ, ಆದರೆ ಪ್ರಜ್ಞಾಪೂರ್ವಕವಾಗಿ ಅನುಭವಿಸಿದ 'ಶಾಶ್ವತ'ನ ಸಂಕಲ್ಪ ನಮ್ಮ ಕ್ರಿಯೆಯ ಮುಖ್ಯ ಚಾಲಕನಾಗಿ ಮತ್ತು ಅದರ ಪ್ರಾರಂಭದ ಮುಖ್ಯ ಜನಕನಾಗಿರುತ್ತದೆ.

ಸಮತೆ ಕರ್ಮ ಫಲಾಪೇಕ್ಷೆಯ ಆಸೆಯನ್ನು ತ್ಯಜಿಸುವುದು ಕರ್ಮವನ್ನು ನಮ್ಮ ಮತ್ತು ಎಲ್ಲಾ ಪ್ರಕೃತಿಯ ಪರಾತ್ಪರ 'ಪ್ರಭು'ವಿಗೆ ಅರ್ಪಿಸಬೇಕು. ಗೀತೆಯ ರೀತಿಯ ಕರ್ಮ ಯೋಗದಲ್ಲಿ ಇವು ದೇವರೆಡೆಗಿನ ಮೂರು ಮೊದಲ ಮಾರ್ಗಗಳಾಗಿವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 23/104–05 – ಶ್ರೀ ಅರವಿಂದರು**

## ಪ್ರಾಣದ ಪರಿವರ್ತನೆ

ಪ್ರಾಣದ ಪರಿವರ್ತನೆಯ ಮತ್ತೊಂದು ಗಮನಾರ್ಹವಾದ ಅಂಶವೆಂದರೆ, ಅಗ್ನಿದೇವನ ಪ್ರಭಾವದಿಂದಾಗಿ, ಅಂದರೆ ನೀವು ನಿಮ್ಮ ಕಷ್ಟಗಳನ್ನು ಮತ್ತು ಅಡೆತಡೆಗಳನ್ನು ಮುಗುಳ್ನಗೆಯೊಂದಿಗೆ ಎದುರಿಸುತ್ತೀರಿ. ನಿಮ್ಮ ತಪ್ಪುಗಳ ಬಗ್ಗೆ ಅಳುತ್ತಾ ಮತ್ತು ಅತ್ಯಂತ ನಿರಾಸೆಗೊಂಡ ಭಾವದಲ್ಲಿ ದುಃಖಿತನಾಗಿ ನಾನು ಅಯೋಗ್ಯನೆಂದು ಅಳುತ್ತಾ ಕೂಡುವುದಿಲ್ಲ. ಸರಳವಾಗಿ ಮುಗುಳ್ನಗೆಯೊಂದಿಗೆ ಖಿನ್ನತೆಯನ್ನು ಓಡಿಸುತ್ತೀರಿ. ನೂರು ತಪ್ಪುಗಳು ನಿಮಗೆ ಗಣ್ಯವಾದವು ಎನಿಸುವುದಿಲ್ಲ: ನೀವು ತಪ್ಪು ಮಾಡಿರುವುದನ್ನು ಮುಗುಳ್ನಗೆಯೊಂದಿಗೆ ಗುರುತಿಸುತ್ತೀರಿ. ಮತ್ತು ಈ ಮೂರ್ಖತನವನ್ನು ಭವಿಷ್ಯದಲ್ಲಿ ಮರುಕಳಿಸುವುದಿಲ್ಲ ಎಂದು ಮುಗುಳ್ನಗೆಯಿಂದ ನಿರ್ಧರಿಸುತ್ತಿರಿ. ಎಲ್ಲಾ ಖಿನ್ನತೆ ಮತ್ತು ಕತ್ತಲೆ ಆಸುರೀ ಶಕ್ತಿಗಳಿಂದ ಸೃಷ್ಟಿಸಲ್ಪಟ್ಟಿದೆ, ನಿಮ್ಮ ಮೇಲೆ ಖಿನ್ನ ಸ್ವಭಾವದ ಮನಃಸ್ಥಿತಿಯನ್ನು ನಿರ್ದಯೆಯಿಂದ ಎಸೆಯುತ್ತವೆ. ದೀನಭಾವ ಒಂದು ವಿಷಯವಾದರೆ ಖಿನ್ನತೆಯೇ ಬೇರೊಂದು ವಿಷಯ; ಮೊದಲನೆಯದು ದೈವೀ ಚಲನವಲನವಾದರೆ, ಎರಡನೆಯದು ಅಸುರೀ ಶಕ್ತಿಗಳ ಒರಟು ರೀತಿಯ ವ್ಯಕ್ತಪಡಿಸುವಿಕೆಯಾಗಿದೆ. ಆದ್ದರಿಂದ ನಿಮ್ಮ ತೊಂದರೆಗಳನ್ನು ಉಲ್ಲಾಸದಿಂದ ಎದುರಿಸಿ ರೂಪಾಂತರಕ್ಕೆ ಮಾರ್ಗವನ್ನು ಆವರಿಸುವ ಅಡೆತಡೆಗಳನ್ನು, ಬದಲಾಗದ ಉತ್ಸಾಹದೊಂದಿಗೆ ವಿರೋಧಿಸಿ. ಶತ್ರುವನ್ನು ಸೋಲಿಸುವ ಅತ್ಯುತ್ತಮ ಮಾರ್ಗವೆಂದರೆ ಅದರ ಮುಖದೆದುರು ನಗುವುದು! ನೀವು ಹಲವು ದಿನಗಳ ಕಾಲ ಜಗಳವಾಡಬಹುದು ಮತ್ತು ಸೆಣಸಾಡಬಹುದು ಮತ್ತು ಅವನು ಇನ್ನೂ ದೊಡ್ಡದಾದ ಶಕ್ತಿವಂತಿಕೆ ತೋರಿಸಬಹುದು; ಆದರೆ ಕೇವಲ ಒಮ್ಮೆ ಅವನೆಡೆಗೆ ನಗಿ ಮತ್ತು ನೋಡಿ! ಅವನು ಓಡಿಹೋಗುತ್ತಾನೆ. ಆತ್ಮವಿಶ್ವಾಸದಿಂದ ಕೂಡಿದ ನಗು ಮತ್ತು ಪರಮಾತ್ಮನಲ್ಲಿ ನಂಬಿಕೆ, ಶ್ರದ್ಧೆಯನ್ನು ಹೊಂದಿದ ನಗುವು ಸಾಧ್ಯವಿರುವ ಹೆಚ್ಚು ಧ್ವಂಸ ಮಾಡುವ ಸಾಮಾರ್ಥ್ಯ ಹೊಂದಿದೆ – ಇದು ಶತ್ರುವಿನ ನೇರತೆಯನ್ನು ಭಂಗಮಾಡಿ, ಆತನ ಮಟ್ಟದಲ್ಲಿ ಅನಾಹುತಿಯನ್ನು ಹರಡುತ್ತದೆ ಮತ್ತು ನಿಮ್ಮನ್ನು ವಿಜಯೋತ್ಸಾಹದಿಂದ ಮುನ್ನಡೆಸುತ್ತದೆ.

ಪರಿವರ್ತನೆಯಾದ ಪ್ರಾಣವೂ ಸಹ ಸಾಕ್ಷಾತ್ಕಾರದ ಪ್ರಕ್ರಿಯೆಯಲ್ಲಿ ಸಂತೋಷಪಡುತ್ತದೆ. ಆ ಪ್ರಕ್ರಿಯೆಯಲ್ಲಿ ಸೂಚಿಸಲಾದ ಎಲ್ಲಾ ಕಷ್ಟಗಳನ್ನು ಇದು

ಉತ್ಸಾಹದಿಂದ ಸ್ವೀಕರಿಸುತ್ತದೆ. ಅದಕ್ಕೆ 'ಸತ್ಯ'ವು ಕಾಣಿಸಿದಾಗ ಮತ್ತು ಅದರ ಕೆಳ ಪ್ರಕೃತಿಯಲ್ಲಿನ ಅಸತ್ಯದ ಆಟವನ್ನು ಬಹಿರಂಗಪಡಿಸಿದಾಗ ಅನುಭವಿಸಿದಷ್ಟು ಸಂತೋಷವನ್ನು ಬೇರೆಂದೂ ಅನುಭವಿಸಲಾರದು. ಪರಿವರ್ತನೆಯಾದ ಪ್ರಾಣವು ಯೋಗವನ್ನು ತನ್ನ ಹೆಗಲ ಮೇಲೆ ಭಾರವನ್ನು ಹೊತ್ತುಕೊಂಡಂತೆ ಮಾಡುವುದಿಲ್ಲ. ಆದರೆ ತನಗೆ ಅತಿ ಪ್ರಿಯವಾದ ವೃತ್ತಿಯಂತೆ ಮಾಡುತ್ತದೆ. ರೂಪಾಂತರದ ಸ್ಥಿತಿಯಾಗಿದ್ದರೆ ಅತಿಯಾದ ತೊಂದರೆಯನ್ನೂ ಸಹಿಸಿಕೊಳ್ಳಲು ಬಯಸುತ್ತದೆ. ಯಾವುದೇ ದೂಷಣೆ, ಗೊಣಗಾಟವಿಲ್ಲದೆ, ಇದು ಸಂತೋಷದಿಂದ ಸಹಿಸಿಕೊಳ್ಳುತ್ತದೆ. ಏಕೆಂದರೆ ಇದು 'ಪರಮಾತ್ಮ'ನಿಗಾಗಿ ಮಾಡುತ್ತದೆ. ಶ್ರೀ ಅರವಿಂದರು ಕೈಗೆತ್ತಿಕೊಂಡ ಈ 'ಬದಲಾವಣೆ'ಯ ದೈತ್ಯ ಕೆಲಸವು ಯಶಸ್ವಿ ಆಗೇ ಆಗುತ್ತದೆ ಎಂಬ ನಂಬಿಕೆಯಲ್ಲಿ ಎಂದೂ ಒಂದು ಕ್ಷಣವೂ ಅಲುಗಾಡುವುದಿಲ್ಲ. ಇದು ನಿಜವಾಗಿಯೂ ಸತ್ಯವಾದ ಸಂಗತಿ; ನಾವು ಕೈಗತ್ತಿಕೊಂಡ ಈ ಕಾರ್ಯದ ಮೇಲೆ ಸಂಶಯದ ನರಳೂ ಸಹ ಇಲ್ಲ. ಈ ಕಾರ್ಯವು ಕೇವಲ ಪ್ರಯೋಗವಲ್ಲ. ಆದರೆ ಅತಿಮಾನಸದ ಆಗಲೇಬೇಕಾದ ಪ್ರಕಟಣೆಯಾಗಿದೆ. ಪರಿವರ್ತನೆಗೊಂಡ ಪ್ರಾಣದಲ್ಲಿ ಯಶಸ್ವಿ ಬಗ್ಗೆ ಪೂರ್ವ ಜ್ಞಾನವಿರುತ್ತದೆ, ಪ್ರಗತಿಯೆಡೆಗೆ ಇರುವ ತನ್ನ ಸಂಕಲ್ಪಕ್ಕೆ ಎಂದೂ ಬೆನ್ನು ತೋರುವುದಿಲ್ಲ, ದೈವತ್ವದ ವಿಜಯ ಬಗ್ಗೆ ಇರುವ ಭರವಸೆಯಿಂದಾಗಿ ಪ್ರಾಣವು ಚೈತನ್ಯದಿಂದ ತುಂಬಿರುತ್ತದೆ. ಏನು ಅವಶ್ಯಕತೆಯಿರುತ್ತದೆಯೋ ಅದೆಲ್ಲವನ್ನೂ ತನ್ನಲ್ಲಿರುವ ದೈವತ್ವವು ಮೂಡುತ್ತದೆ ಎಂಬ ಅರಿವಿರುತ್ತದೆ ಹಾಗೂ ಆ ದೈವತ್ವವು ತನಗೆ ಎಂದು ಅಲುಗಾಡದ ಶಕ್ತಿಯನ್ನು ಕೊಡುತ್ತದೆ. ಅದರಿಂದ ತನ್ನ ವೈರಿಗಳನ್ನು ಪ್ರತಿರೋಧ ಮಾಡಿ ಕೊನೆಗೆ ಜಯಶೀಲವಾಗಲು ಸಹಾಯ ಮಾಡುತ್ತದೆ. ಹಾಗಿದ್ದಾಗ ಪ್ರಾಣವು ನಿರಾಸೆ ಪಡುವುದು ಅಥವಾ ದೂರು ನೀಡುವುದು ಹೇಗೆ ಸಾಧ್ಯ? ರೂಪಾಂತರವು ಆಗೇ ಆಗುತ್ತದೆ; ಯಾವುದರಿಂದಲೂ ಅದನ್ನು ತಡೆಯಲು ಸಾಧ್ಯವಿಲ್ಲ. ಆ 'ಸರ್ವಶಕ್ತ' ನಿರ್ಧಾರವನ್ನು ಯಾರೂ ಹತಾಶೆಗೊಳಿಸಲು ಸಾಧ್ಯವಿಲ್ಲ. ಆದ್ದರಿಂದ ಅಧೈರ್ಯ ಮತ್ತು ಅಶಕ್ತತೆಯನ್ನು ಕಿತ್ತೆಸೆಯಿರಿ, ಮತ್ತು ಒಂದು ದೀರ್ಘ ಕಾಲದ ಹೋರಾಟದ ನಂತರ ಬರುವ ಶಾಶ್ವತ ಜಯದ ಶ್ರೇಷ್ಠತನಕ್ಕಾಗಿ ನಾವು ನಮ್ಮ ಸಹನೆಯಿಂದ ಕೂಡಿದ ವೀರತ್ವದಿಂದಿರುತ್ತೇವೆ ಎಂದು ಸಂಕಲ್ಪವನ್ನು ಮಾಡಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/138–140**

## ಪ್ರಾಣವು ಪರಿವರ್ತನೆಯಾದ ಲಕ್ಷಣಗಳು

ಪ್ರಾಣವು ತನ್ನನ್ನು ತಾನು ಕ್ರಿಯೆಗೆ ಅರ್ಪಣೆ ಮಾಡಿಕೊಂಡ ಕೆಲ ಕೆಲ ಲಕ್ಷಣಗಳು ಈ ಕೆಳಗಿನಂತಿವೆ.

ಇಡೀ ಜೀವನ ಮತ್ತು ಕರ್ಮ ಎಲ್ಲವೂ ಶ್ರೀಮಾತೆಯವು ಅನ್ನುವ ಭಾವನೆ (ಇದು ಕೇವಲ ವಿಚಾರ ಅಥವಾ ಅಭೀಪ್ಸೆಯಾಗಿರದೆ) ಮತ್ತು ಈ ಸಮರ್ಪಣೆ ಮತ್ತು ಅರ್ಪಣೆಯಲ್ಲಿ ಪ್ರಾಣದ ಪ್ರಕೃತಿಯಲ್ಲಿ ಅತೀವವಾದ ಸಂತೋಷ ಇರುತ್ತದೆ. ಇದರ ಪರಿಣಾಮವಾಗಿ ನಿಶ್ಚಲವಾದ ಸಂತೃಪ್ತಿಯ ಸ್ಥಾಪನೆಯಾಗಿ ಮತ್ತು ಎಲ್ಲಾ ಕರ್ಮ ಮತ್ತು ಕರ್ಮ ಫಲಗಳ ಮೇಲಿರುವ ಅಹಂಕಾರದಿಂದ ಕೂಡಿದ ಮೋಹವು ನಾಶವಾಗಿರುತ್ತದೆ. ಆದರೆ ಅದೇ ಸಮಯದಲ್ಲಿ ಕರ್ಮದಲ್ಲಿ ಮತ್ತು ತನ್ನ ಸಾಮರ್ಥ್ಯ ದೈವೀ ಉದ್ದೇಶಕ್ಕಾಗಿ ಉಪಯೋಗವಾಗುತ್ತಿರುವುದರಲ್ಲಿ ಅತ್ಯುನ್ನತ ಆನಂದವಿರುತ್ತದೆ.

ದೈವೀ ಶಕ್ತಿಯು ತನ್ನೆಲ್ಲಾ ಕಾರ್ಯಗಳ ಹಿಂದಿದೆ ಮತ್ತು ಅದು ಪ್ರತೀ ಕ್ಷಣದಲ್ಲಿ ನಮ್ಮನ್ನು ನಡೆಸುತ್ತಿದೆ ಎಂಬ ಭಾವನೆ ಇರುತ್ತದೆ.

ಯಾವುದೇ ಘಟನೆ ಅಥವಾ ವಾತಾವರಣವು ಈ ಸತತವಾಗಿರುವ ಶ್ರದ್ಧೆಯನ್ನು ಮುರಿಯಲು ಸಾಧ್ಯವಿಲ್ಲ ಎಂದು ಅನಿಸುತ್ತದೆ.

ತೊಂದರೆಗಳು ಬಂದಾಗ, ಅವು ಮನಸ್ಸಿನಲ್ಲಿ ಸಂಶಯ ಸೃಷ್ಟಿಸುವುದಿಲ್ಲ ಅಥವಾ ತಪಸ್ಸಿಗೆ ಶರಣಾಗುವುದಿಲ್ಲ; ಆದರೆ ಪ್ರಾಮಾಣಿಕ ಸಮರ್ಪಣೆಯಿಂದ ದೈವೀ ಶಕ್ತಿಯು ಎಲ್ಲಾ ತೊಂದರೆಗಳನ್ನು ನಿವಾರಿಸುತ್ತದೆ ಎಂಬ ದೃಢ ನಂಬಿಕೆಯಿಂದ ಶ್ರೀಮಾತೆಯ ಮೇಲೆ ಹೆಚ್ಚಿನ ರೀತಿಯಲ್ಲಿ ಮುಖಮಾಡಿ ಆಕೆಯ ಮೇಲೆಯೇ ಹೆಚ್ಚಿನ ಅವಲಂಬನೆಗಾಗಿ ಹಂಬಲಿಸುತ್ತೇವೆ. ಯಾವಾಗ ಸಂಪೂರ್ಣ ಶ್ರದ್ಧೆ ಮತ್ತು ಸಮರ್ಪಣೆ ಇರುತ್ತದೆಯೋ ಆಗ ಆ ಶಕ್ತಿಯನ್ನು ಸ್ವೀಕರಿಸುವ ಸಾಮರ್ಥ್ಯವು ಹೆಚ್ಚುತ್ತದೆ. ಆಗ ನಾವು ಸರಿಯಾದುದನ್ನು ಮತ್ತು ಸರಿಯಾದ ರೀತಿಯಲ್ಲಿ ಮಾಡಲು ಸಾಧ್ಯವಾಗುತ್ತದೆ ಮತ್ತು ಆಗ ಪರಿಸರವು ತನ್ನಷ್ಟಕ್ಕೆ ತಾನೇ ಹೊಂದಾಣಿಕೆಯಾಗುವುದನ್ನು ಮತ್ತು ಪರಿಣಾಮವನ್ನು ನೋಡಬಹುದು.

ಇಂತಹ ಸ್ಥಿತಿಗೆ ತಲುಪಲು ಅವಶ್ಯಕವಾಗಿ ಬೇಕಾದ ಅಂಶಗಳೆಂದರೆ; ಸತತವಾದ ಅಭೀಪ್ಸೆ, ಕರೆ ಮತ್ತು ಆತ್ಮ ಸಮರ್ಪಣೆ ಹಾಗೂ ಯಾವುದು ನಮ್ಮಲ್ಲಿ

ಮತ್ತು ನಮ್ಮ ಸುತ್ತಮುತ್ತ ಅಡ್ಡವಾಗಿರುವುದೋ ಅದನ್ನು ಸತತವಾಗಿ ತಿರಸ್ಕರಿಸುವ ಸಂಕಲ್ಪ ಮಾಡುವುದು. ತೊಂದರೆಗಳು ಪ್ರಾರಂಭದಲ್ಲಿ ಇರುವುದು ಸಹಜ ಹಾಗೂ ಬಹುಕಾಲದವರೆಗೆ ಕೂಡಾ ನಮ್ಮ ಬದಲಾವಣೆಯ ಅನಶ್ಯಕತೆಗಾಗಿ ಇರುತ್ತವೆ. ಆದರೆ ಆ ತೊಂದರೆಗಳನ್ನು ನಾವು ನಿಶ್ಚಲವಾದ ಶ್ರದ್ಧೆ, ಸಂಕಲ್ಪ ಹಾಗೂ ತಾಳ್ಮೆಯಿಂದ ಎದುರಿಸಿದಾಗ ಎಲ್ಲಾ ತೊಂದರೆಗಳು ನಿವಾರಣೆಯಾಗಲೇ ಬೇಕಾಗುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 29/233–34**

## ಕಾಯಕದ ಇಚ್ಛೆ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

**ಆದ್ಯತೆ ಇಲ್ಲದೆ ಆಯ್ಕೆ ಮಾಡಿ, ಆಸೆ ಇಲ್ಲದೆ ಕಾರ್ಯಗತಗೊಳಿಸಿ**

ಸ್ವಯಂ ನಿಯಂತ್ರಣ ಮತ್ತು ನಿಜವಾದ ಪ್ರಜ್ಞೆಯ ಬೆಳವಣಿಗೆಗೆ ಆದ್ಯತೆ ಇಲ್ಲದೆ ಆಯ್ದುಕೊಂಡು ಆಸೆ ಇಲ್ಲದೆ ಕಾರ್ಯಗತಗೊಳಿಸಬೇಕು. ಈ ಅರ್ಥದಲ್ಲಿ ಆಯ್ಕೆ ಮಾಡುವುದೆಂದರೆ ಯಾವುದು ಸತ್ಯವಿದೆ ಎಂದು ನೋಡಿ ಅದನ್ನು ಅಸ್ತಿತ್ವಕ್ಕೆ ತರಬೇಕು; ಮತ್ತು ಈ ರೀತಿ ಆಯ್ಕೆ ಮಾಡುವಾಗ ಯಾವುದೇ ವ್ಯಕ್ತಿಗೆ ಯಾವುದೇ ಕ್ರಿಯೆಗೆ ಪರಿಸ್ಥಿತಿಗೆ ಪಕ್ಷಪಾತದಿಂದ ಇರಬಾರದು. ಇದು ಮಾನವ ಜೀವಿಗೆ ಬಹಳ ಕಷ್ಟಕರವಾದದ್ದು. ಆದರೂ ಎಲ್ಲರೂ ಯಾವುದೇ ಆದ್ಯತೆ ಇಲ್ಲದೆ ಕ್ರಿಯೆ ಮಾಡಬೇಕು ಯಾವುದೇ ಆಕರ್ಷಣೆಗೆ ಮತ್ತು ಬಯಕೆಗೆ ಒಳಗಾಗದೆ ನಾವು ನಮ್ಮನ್ನು ನಿರ್ದೇಶನ ಮಾಡುವ ಸತ್ಯದೊಂದಿಗೆ ನಿಂತಿರಬೇಕು. ಆ ರೀತಿಯಾದ ಸತ್ಯದ ಆಯ್ಕೆ ಮಾಡಿ ಅವಶ್ಯಕವಾದ ಕರ್ಮಗಳನ್ನು ಯಾವುದೇ ಆಸೆ ಇಲ್ಲದೆ ಮಾಡಬೇಕು.

ನಿಮ್ಮನ್ನು ನೀವು ಎಚ್ಚರಿಕೆಯಿಂದ ನೋಡಿದ್ದೆ ಆದರೆ ನೀವು ಏನೇ ಕ್ರಿಯೆ ಮಾಡಿದರು ಅದರ ಹಿಂದೆ ಅಂತರಂಗದಲ್ಲಿ ಒಂದು ತುಡಿತ ಇರುತ್ತದೆ ಯಾವುದು ನಿಮ್ಮನ್ನು ಒತ್ತಾಯಿಸುತ್ತದೆ. ಸಾಮಾನ್ಯ ಮನುಷ್ಯನಲ್ಲಿ ಇದು ಸಾಮಾನ್ಯವಾಗಿ ಆಸೆಯಾಗಿರುತ್ತದೆ. ಈ ಆಸೆಯನ್ನು ನಾವು ಸ್ಪಷ್ಟವಾಗಿ ನಿಖರವಾಗಿ ಸತತ ಸತ್ಯದ ದರ್ಶನದೊಂದಿಗೆ ಬದಲಾಯಿಸಬೇಕು.

ಕೆಲವರು ಇದನ್ನು ದೇವರ ಧ್ವನಿ ಅಥವಾ ದೈವ ಸಂಕಲ್ಪ ಎಂದು ಕರೆಯುವರು. ಈ ಶಬ್ದಗಳ ನಿಜವಾದ ಅರ್ಥವನ್ನು ತಪ್ಪಾಗಿ ಅರ್ಥೈಸಲಾಗಿದೆ. ಕಾರಣ ನಾನು "ಆ ಸತ್ಯ"ದ ಬಗ್ಗೆ ಮಾತನಾಡಲು ಬಯಸುತ್ತೇನೆ. ಅದನ್ನು ನಾವು ಹೆಸರಿಸಲಾಗುವುದಿಲ್ಲ. ಆದರೆ ಎಲ್ಲಾ ಅಸ್ತಿತ್ವದ ಗುರಿ ಮತ್ತು ಮೂಲ ಅದೇ ಆಗಿದೆ. ನಾನು ಬೇಕು ಅಂತಲೇ ದೇವರು ಎಂಬ ಶಬ್ದ ಉಪಯೋಗಿಸುತ್ತಿಲ್ಲ. ಏಕೆಂದರೆ ಧರ್ಮಗಳೆಲ್ಲ ದೇವರೆಂದರೆ ಆತನು ಸೃಷ್ಟಿ ಮತ್ತು ಅದನ್ನು ಮೀರಿದ ಬಹಳ ಶಕ್ತಿಶಾಲಿ ಎಂದು ಅನ್ನುತ್ತವೆ. ಇದು ತಪ್ಪಾದ ಅರ್ಥ ಆಗಿದೆ.

ಆದರೂ ಭೌತಿಕ ಸ್ತರದಲ್ಲಿ ವ್ಯತ್ಯಾಸ ಸ್ಪಷ್ಟ. ನಾವು ಏನೆಲ್ಲ ಆಗಿದ್ದೇವು ಅದನ್ನು ಇನ್ನೂ ಆಗದಿರಲು ಬಯಸುವುದಿಲ್ಲ ಮತ್ತು ಎಲ್ಲವೂ ಅವನೇ ಅವನಾಗಲು ಬಯಸುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/1–2**

## ಸಂಕಲ್ಪವನ್ನು ದೃಢವಾಗಿ ಇಟ್ಟುಕೊಳ್ಳಿ

ಸಂಕಲ್ಪವನ್ನು ದೃಢವಾಗಿಡಿ, ನಿಮ್ಮಲ್ಲಿನ ಪ್ರತಿಭಟಿಸುವ ಅಂಶಗಳನ್ನು ಅವಿಧೇಯ ಮಕ್ಕಳೆಂದು ನಡೆಸಿಕೊಳ್ಳಿ, ಅವುಗಳ ಮೇಲೆ ಸತತವಾಗಿ ಮತ್ತು ಸಂಯಮದಿಂದ ಅವುಗಳ ತಪ್ಪುಗಳನ್ನು ಮನವರಿಕೆ ಮಾಡಿಕೊಡಿ.

ನಿಮ್ಮ ಪ್ರಜ್ಞೆ ಆಳದಲ್ಲಿದೆ, ನಿಮ್ಮ ಅಂತರಾತ್ಮನ ಸತ್ತೆ ನಿಮ್ಮಲ್ಲಿನ ದೈವದ ಗುಡಿ. ಈ ಕೇಂದ್ರದ ಸುತ್ತ ನಿಮ್ಮಲ್ಲಿನ ಭಿನ್ನತೆಯ ಭಾಗಗಳು ಒಂದಾಗಬೇಕು. ಈ ಎಲ್ಲ ವ್ಯತಿರಿಕ್ತಗಳು ನಿಮ್ಮ ಸತ್ತೆಯ ಚಲನೆಗಳು ಒಂದಾಗಬೇಕು. ಒಂದು ಸಲ ನಿಮ್ಮ ಅಂತರಾತ್ಮದ ಪ್ರಜ್ಞೆ ಮತ್ತು ಅದರ ಅಭಿಪ್ಸೆ, ಸಂದೇಹಗಳನ್ನು ಮತ್ತು ಕಷ್ಟಗಳನ್ನು ನಾಶಮಾಡಬಹುದು. ಅದು ಸ್ವಲ್ಪ ಹೆಚ್ಚು ಕಡಿಮೆ ಸಮಯ ತೆಗೆದುಕೊಳ್ಳುತ್ತದೆ. ಆದರೆ ಕೊನೆಗೆ ನೀವು ಫಲಪ್ರದರಾಗುತ್ತಿರಿ. ಒಂದು ಸಲ ನೀವು ದೈವದೆಡೆಗೆ ತಿರುಗಿ ಹೇಳಿದಾಗ "ನಾನು ನಿನ್ನವನಾಗಬೇಕು" ದೈವ ಹೇಳುತ್ತದೆ "ಆಗಲಿ". ಇಡೀ ಜಗತ್ತು ಇದರಿಂದ ನಿನ್ನನ್ನು ತಡೆಯಲು ಸಾಧ್ಯವಿಲ್ಲ. ಯಾವಾಗ ಪರಮ ಸತ್ಯಕ್ಕೆ ತನ್ನನ್ನು ಶರಣಾಗತಿ ಮಾಡಿಕೊಂಡಾಗ ಪ್ರಮುಖ ತೊಡಕುಗಳು ಕಣ್ಮರೆಯಾಗುತ್ತವೆ. ನಮ್ಮ ಬಹಿರಂಗದ ಸತ್ಯ ಒಂದು ತರಹದ ಚಿಪ್ಪು ಸಾಮಾನ್ಯ ಜನರಲ್ಲಿ ಈ ಹೊರಮ್ಮೈ ಚಿಪ್ಪು ಎಷ್ಟು ಗಟ್ಟಿ ಮತ್ತು ದಪ್ಪ ಇರುತ್ತದೆ ಎಂದರೆ,

ಒಳಗಿರುವ ದೈವದ ಅರಿವಾಗುವುದಿಲ್ಲ. ಒಂದು ಸಲ ಒಂದು ಕ್ಷಣವಾದರೂ ಅಂತರಂಗದ ಸತ್ಯ ನಾನು ಇಲ್ಲಿದ್ದೇನೆ ಮತ್ತು ನಾನು ನಿನ್ನವನು ಅಂತ ಹೇಳಿದರೆ, ಒಂದು ತರಹದ ಸೇತುವೆ ನಿರ್ಮಾಣವಾಗಿ ಮತ್ತು ಹೊರಮೈ ಚಿಪ್ಪು ಸಣ್ಣದಾಗುತ್ತ ಹೋಗಿ, ಬಹಿರಂಗ ಮತ್ತು ಅಂತರಂಗ ಕೂಡಿ ಒಂದಾಗುತ್ತವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/7**

## ದೈವೀ ಸಂಕಲ್ಪವನ್ನು ತಿಳಿಯುವುದು

*ದೈವಿ ಸಂಕಲ್ಪವೇನೆಂದು ನಾವು ಹೇಗೆ ತಿಳಿಯುವುದು?*

ಅದು ತಿಳಿಯುವುದಿಲ್ಲ, ಅದನ್ನು ಸಂವೇದಿಸಬೇಕು. ಅದನ್ನು ಸಂವೇದಿಸಿಕೊಳ್ಳ–ಬೇಕೆಂದರೆ ಬಹಳ ಉತ್ಕಟತೆಯಿಂದ ತುಂಬಾ ವಿಧೇಯತೆಯಿಂದ ಸಂಕಲ್ಪ ಮಾಡಿದಾಗ ಮಾತ್ರ ಆ ಅಡೆತಡೆಗಳು ಕರಗುತ್ತವೆ. ಎಲ್ಲಿಯ ತನಕ ನಿಮ್ಮಲ್ಲಿ ಒಂದು ಆದ್ಯತೆ, ಒಂದು ಆಸೆ, ಒಂದು ಆಕರ್ಷಣೆ, ಒಂದು ಇಚ್ಛೆ ... ಇವೆಲ್ಲವೂ ನಿಮ್ಮನ್ನು ಸತ್ಯದಿಂದ ಮರೆಮಾಚುತ್ತವೆ. ಆದುದರಿಂದ ಮೊದಲನೆಯದಾಗಿ ನಿಮ್ಮ ಪ್ರಜ್ಞೆಯ ಚಲನೆಗಳ ಮೇಲೆ ಪ್ರಭುತ್ವ ಹೊಂದುವ ನಿರ್ಣಯವನ್ನು ಸೂಕ್ತಗೊಳಿಸಿ–ಕೊಳ್ಳುವಂತೆ ಮಾಡಬೇಕು ಮತ್ತು ಯಾವುದು ಬದಲಾವಣೆಯಾಗುವುದಿಲ್ಲವೋ ಅವನ್ನು ಕಿತ್ತೆಸೆಯಬೇಕು. ಎಲ್ಲಿಯತನಕ ಎಲ್ಲವೂ ಪರಿಪೂರ್ಣ ಮತ್ತು ಶಾಶ್ವತ ಸತ್ಯತೆಯ ಅಭಿವ್ಯಕ್ತಿ ಎನಿಸುವುದಿಲ್ಲವೋ ಅಲ್ಲಿಯ ತನಕ.

ಇದನ್ನು ಬರೀ ಸಂಕಲ್ಪಿಸುವುದರಿಂದ ಸಾಕಾಗುವುದಿಲ್ಲ. ಏಕೆಂದರೆ ಬಹಳ ಸಲ ಸಂಕಲ್ಪಿಸುವುದನ್ನು ಮರೆತುಬಿಡುತ್ತೇವೆ.

ನಮ್ಮಲ್ಲಿ ಒಂದು ಅಭೀಪ್ಸೆಯು ನಮ್ಮ ಅಂತರಂಗದಲ್ಲಿ ಸತತವಾಗಿ ಜ್ವಾಲೆಯ ತರಹ ಉರಿಯಬೇಕು ಮತ್ತು ನಿಮಗೆ ಯಾವಾಗ ಆಸೆ ಆದ್ಯತೆ ಒಂದು ಆಕರ್ಷಣೆ ಆಗುತ್ತದೆಯೋ, ಆಗ ಅವನ್ನೆಲ್ಲ ಜೊತೆಯಲ್ಲಿ ಹಾಕಬೇಕು. ಇದನ್ನು ನೀವು ಸತತವಾಗಿ ಸಾಧನೆ ಮಾಡುತ್ತಿದ್ದರೆ ನಿಮ್ಮ ಸಾಮಾನ್ಯ ಪ್ರಜ್ಞೆಯಲ್ಲಿ ಸ್ವಲ್ಪ ನಿಜವಾದ ಪ್ರಜ್ಞೆಯ ಬೆಳಕು ನಿಮಗೆ ಕಾಣಿಸುತ್ತದೆ. ಮೊದಮೊದಲು ಆಸೆಗಳು ಆದ್ಯತೆಗಳು ಆಕರ್ಷಣೆಗಳಿಂದ ದೂರದಾಚೆ ಒಂದು ಸಣ್ಣ ಬೆಳಕು ಕಾಣಿಸುತ್ತದೆ. ಆದರೆ ನೀವು ಈ ಎಲ್ಲವುಗಳಿಂದಾಚೆ ಇರುವ ಆ ನಿಜವಾದ ಪ್ರಜ್ಞೆ ನಿಶ್ಚಲ ನೀರವವು ತುಂಬಾ ಮೌನ ಇರುವುದನ್ನು ಕಂಡುಕೊಳ್ಳುವಿರಿ.

ಯಾರು ನೈಜ ಪ್ರಜ್ಞೆಯ ಜೊತೆ ಸಂಪರ್ಕದಲ್ಲಿದ್ದಾರೋ ಅವರಿಗೆ ಒಂದೇ ಸಮಯಕ್ಕೆ ಎಲ್ಲಾ ಸಾಧ್ಯತೆಗಳು ಕಾಣಸಿಗುತ್ತವೆ ಮತ್ತು ಅವಶ್ಯಕತೆ ಎನಿಸಿದರೆ ಬೇಕಂತಲೇ ತುಂಬಾ ಪ್ರತಿಕೂಲವಾದದ್ದನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಆದರೆ ಈ ಹಂತ ತಲುಪಬೇಕಾದರೆ ನೀವು ಸಾಕಷ್ಟು ದೂರ ಕ್ರಮಿಸಬೇಕು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/2–3**

## ದೈವೀ ಸಂಕಲ್ಪವನ್ನು ಗುರುತಿಸುವುದು

ನಾವು ಹೇಗೆ ತಿಳಿದುಕೊಳ್ಳಬೇಕೆಂದು ನೀವು ಕೇಳುತ್ತಿದ್ದೀರಿ. ಯಾವಾಗ ದೈವೀ ಸಂಕಲ್ಪ ಕ್ರಿಯೆ ಮಾಡಲು ಪ್ರೇರೇಪಿಸುತ್ತದೆ? ದೈವೀ ಸಂಕಲ್ಪವನ್ನು ಗುರುತಿಸುವುದು ಕಷ್ಟವೇನಲ್ಲ. ಇಲ್ಲಿ ತಪ್ಪು ಭಾವಿಸಲು ಸಾಧ್ಯವೇ ಇಲ್ಲ. ಅದನ್ನು ತಿಳಿಯಲು ಈ ಮಾರ್ಗದಲ್ಲಿ ಬಹಳ ದೂರ ಸಾಗಬೇಕಿಲ್ಲ. ನೀವು ಅದರ ಧ್ವನಿಯನ್ನು ಮಾತ್ರ ಕೇಳಬೇಕು. ಒಂದು ಚಿಕ್ಕ ಧ್ವನಿ ಈ ನಿಮ್ಮ ಹೃದಯದಲ್ಲಿ ಒಂದು ಸಲ ಕೇಳಲು ಅಭ್ಯಾಸ ಮಾಡಿಕೊಂಡುಬಿಟ್ಟರೆ, ದೈವೀ ಸಂಕಲ್ಪಕ್ಕೆ ಏನು ನೀವು ಮಾಡಿದರು ನಿಮಗೆ ಒಂದು ತರಹದ ಸಂತಪ್ತ ಭಾವದಲ್ಲಿ ಸಂವೇದಿಸುತ್ತಿರಿ. ನೀವು ಕೆಟ್ಟ ಹಾದಿಯ ಮೇಲೆ ಪಟ್ಟುಹಿಡಿದು ನಡೆದರೆ, ನಿಮ್ಮಲ್ಲಿ ಬಹಳ ಗೊಂದಲವಾಗುತ್ತದೆ. ಆದಾಗ್ಯೂ ನೀವು ಗೊಂದಲಕ್ಕೆ ಬೇರೆ ಕಾರಣಗಳನ್ನು ಕೊಟ್ಟಿದ್ದೆ ಆದರೆ ಮತ್ತು ಅದೇ ಹಾದಿಯಲ್ಲಿ ಮುಂದುವರೆದರೆ, ನಿಮಗೆ ಕ್ರಮೇಣ ಧ್ವನಿಯನ್ನು ಕೇಳುವ ಸಾಮರ್ಥ್ಯ ಕ್ಷೀಣಿಸುವುದು ಮತ್ತು ಕೊನೆಗೆ ನೀವು ಎಲ್ಲಾ ತಪ್ಪುಗಳನ್ನು ಮಾಡಿದರು ನಿಮಗೆ ಯಾವುದೇ ಕಸಿವಿಸಿ ಆಗುವುದಿಲ್ಲ. ಆದರೆ ನಿಮಗೆ ಕಡಿಮೆ ಗೊಂದಲವಾದಾಗ ನೀವು ನಿಂತು, ನಿಮ್ಮ ಅಂತರಂಗದ ಆತ್ಮಕ್ಕೆ ಹೀಗೆ ಕೇಳಿಕೊಂಡರೆ “ಇದಕ್ಕೆ ಕಾರಣ ಏನು?” ಆಗ ನಿಮಗೆ ನಿಜ ಉತ್ತರ ಸಿಗುತ್ತದೆ ಮತ್ತು ಎಲ್ಲಾ ಸಂಗತಿಗಳು ತುಂಬಾ ಸ್ಪಷ್ಟವಾಗುತ್ತದೆ. ನಿಮಗೆ ಯಾವಾಗ ಸ್ವಲ್ಪ ಕಸಿವಿಸಿಯಾಗುತ್ತದೆಯೋ, ಆವಾಗ ನೀವು ಯಾವುದೇ ವಸ್ತು ಸಂಗತಿಗಳ ಕಾರಣ ಕೊಡಲು ಪ್ರಯತ್ನ ಪಡಬೇಡಿ. ನೀವು ಆಗ ನಿಂತು ಕಾರಣಗಳನ್ನು ಕಾಣಲು ಪ್ರಯತ್ನಿಸಿ. ನೀವು ಕೇವಲ ನೇರ ಮತ್ತು ವಿಧೇಯರಾಗಿರಿ. ಮೊದಮೊದಲಿಗೆ ನಿಮ್ಮ ಮನಸ್ಸು ಒಂದು ಸುಂದರವಾದ ವಿವರಣೆಯನ್ನು ಕಟ್ಟುತ್ತದೆ. ಅದನ್ನು ನೀವು ಒಪ್ಪದಿರಿ. ಅದರಾಚೆ ನೋಡಿ ಹೇಳಿಕೊಳ್ಳಿ “ಈ ಕ್ರಿಯೆಯ ಹಿಂದೆ ಇರುವುದೇನು?

ನಾನು ಹೀಗೇಕೆ ಮಾಡುತ್ತಿರುವೆ?" ಒಂದು ಮೂಲೆಯಲ್ಲಿ ಅಡಗಿರುವ ಒಂದು ಸಣ್ಣ ಅಲ್ಲೇ – ಒಂದು ಸ್ವಲ್ಪ ತಪ್ಪು ತಿರುಗು ಅಥವಾ ನಿಮ್ಮ ನಿಲುವಿನಲ್ಲಿ ಯಾವುದು ನಿಮಗೆ ಕಷ್ಟ ಅಥವಾ ತೊಂದರೆ ಕೊಡುತ್ತದೆ ಎಂದು ಕೊನೆಗೆ ನೀವು ಕಂಡುಕೊಳ್ಳುತ್ತೀರಿ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/8–9**

**ಪ್ರೇರಣೆಯ ಬದಲಾವಣೆ.**

ಮಾನವರು ಸಾಮಾನ್ಯವಾಗಿ ಸಾಮಾನ್ಯ ಪ್ರಾಣಿಕ ಅಸ್ತಿತ್ವದಿಂದಾದ, – ಪ್ರೇರಣೆಯಾದ – ಅವಶ್ಯಕತೆ, ಶ್ರೀಮಂತಿಕೆ, ಆಸೆ ಅಥವಾ ಯಶಸ್ಸು ಅಥವಾ ಸ್ಥಾನ ಅಥವಾ ಅಧಿಕಾರ ಅಥವಾ ಹೆಸರು ಅಥವಾ ಇಂಥವುಗಳಿಂದ ಕಾರ್ಯ ಚಟುವಟಿಕೆ ಆರಂಭಿಸಿ ತಮ್ಮ ಕೆಲಸ ಕಾರ್ಯಗಳನ್ನು ಮಾಡುತ್ತಾ ತಮ್ಮ ಸಾಮರ್ಥ್ಯವನ್ನು ಪ್ರಕಟಪಡಿಸುತ್ತಾರೆ. ಇದರಲ್ಲಿ ತಮ್ಮ ಸಾಮರ್ಥ್ಯಕ್ಕನುಗುಣವಾಗಿ ಯಶಸ್ಸು ಅಥವಾ ಸೋಲನ್ನು ಕಾಣುತ್ತಾರೆ. ಕೆಲಸದ ಕ್ಷಮತೆ ಒಳ್ಳೆಯ ಅಥವಾ ಕೆಟ್ಟ ಫಲಗಳು ಅವರ ಸ್ವಭಾವ ಮತ್ತು ಕರ್ಮಗಳಿಗನುಗುಣವಾಗಿ ಅವರಿಗೆ ಸಿಗುತ್ತವೆ. ಯಾವಾಗ ನಾವು ಈ ಯೋಗ ಮಾರ್ಗದಲ್ಲಿ ನಡೆಯುತ್ತಿವೆಯೋ ಮತ್ತು ದೈವಕ್ಕಾಗಿ ನಮ್ಮ ಜೀವನವನ್ನು ಸಮರ್ಪಿಸುತ್ತೇವೆಯೋ ಆಗ ಈ ಸಾಮಾನ್ಯವಾದ ಪ್ರಾಣಿಕ ಸತ್ತೆಯ ಪ್ರೇರಣೆಗಳು ಮುಕ್ತವಾಗಿ ಪೂರ್ಣವಾಗಿ ಆಟವಾಡಲಾರವು; ಅವುಗಳನ್ನು ಬೇರೆಯದೊಂದು ಶಕ್ತಿಯು ಬದಲಾಯಿಸಬೇಕಾಗುತ್ತದೆ, ಮುಖ್ಯವಾಗಿ ಅಂತರಾತ್ಮ ಮತ್ತು ಆಧ್ಯಾತ್ಮ ಪ್ರೇರಣೆ, ಅದು ಸಾಧಕವಾಗಿ, ನಿನ್ನ ಮೊದಲಿನ ಹಾಗೆ ಶಕ್ತಿ ಉಪಯೋಗಿಸಿಕೊಂಡು ಕೆಲಸ ಮಾಡಲು ಪ್ರೇರೇಪಿಸುತ್ತದೆ, ಆದರೆ ಸ್ವಂತಕ್ಕಲ್ಲ ಎನ್ನುವದನ್ನು ಗಮನಿಸಿ. ಅದು ದೇವರಿಗಾಗಿ. ಸಾಮಾನ್ಯ ಪ್ರಾಣಿಕ ಪ್ರೇರಣೆ ಅಥವಾ ಪ್ರಾಣಿಕ ಶಕ್ತಿ ಇನ್ನು ಮುಕ್ತವಾಗಿ ಕೆಲಸ ಮಾಡುತ್ತಿಲ್ಲ ಮತ್ತು ಆದಾಗ್ಯೂ ಬೇರೆಯವರಿಗೆ ಬದಲಾಯಿಸಲಾಗಲ್ಲ. ಹಾಗಾದರೆ ಕೆಲಸ ಮಾಡಲು ಪ್ರೇರೇಪಿಸುವ ಶಕ್ತಿ ಕಡಿಮೆಯಾಗುತ್ತದೆ ಅಥವಾ ಯಶಸ್ಸಿಗಾಗಿ ಕೆಲಸ ಮಾಡುವ ಶಕ್ತಿ ಅಲ್ಲಿ ಉಳಿಯುವುದಿಲ್ಲ. ಪ್ರಾಮಾಣಿಕನಾಗಿರುವ ಸಾಧಕನಿಗೆ ಕಷ್ಟಗಳು ತಾತ್ಕಾಲಿಕ, ಆದರೆ ಅವರು ತಮ್ಮ ಸಮರ್ಪಣೆಯಲ್ಲಿ ರೂಪಣೆಗೊಳ್ಳುವ ದೋಷಗಳನ್ನು ಗಮನಿಸಬೇಕು ಅಥವಾ ತಮ್ಮ ನಿಲುವನ್ನು ಮತ್ತು ಅದನ್ನು ತೆಗೆದು ಹಾಕಬೇಕು. ಆಗ ದೈವೀ ಶಕ್ತಿ ಸಾಧಕನ ಮೂಲಕ ಕೆಲಸ ಮಾಡುತ್ತದೆ ಮತ್ತು ಅವನ ಸಾಮರ್ಥ್ಯ ಮತ್ತು ಪ್ರಾಣಿಕ

ಶಕ್ತಿಗಳನ್ನು ಗುರಿಮುಟ್ಟಲು ಉಪಯೋಗಿಸುತ್ತದೆ. ನಿನ್ನ ಸಂದರ್ಭದಲ್ಲಿ ಅಂತರಾತ್ಮ ಮತ್ತು ಮನಸ್ಸಿನ ಆಂಶಿಕ ಭಾಗವು ನಿನ್ನನ್ನು ಯೋಗಕ್ಕೆ ಕರೆ ತಂದಿದೆ. ಇವು ಈಗಾಗಲೇ ನಿರ್ಧಾರ ತಳೆದಿದ್ದವು. ಆದರೆ ಪ್ರಾಣ ಪ್ರಕೃತಿ ಅಥವಾ ತನ್ನ ಬಹು ಭಾಗವನ್ನು ಅಂತರಾತ್ಮದ ಚಲನವಲನಗಳಲ್ಲಿ ಇನ್ನೂ ಭಾಗಿಯಾಗಿರುವದಿಲ್ಲ. ಕ್ರಿಯಾತ್ಮಕ ಪ್ರಾಣ ಸ್ವಭಾವದ ಸಂಪೂರ್ಣ ಮತ್ತು ಭಿನ್ನವಿರದ ಸಮರ್ಪಣೆ ಅದರಿಂದ ಇನ್ನು ಆಗಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/233 – ಶ್ರೀ ಅರವಿಂದರು**

ದೈವಕ್ಕಾಗಿ ಮಾಡಿದ ಎಲ್ಲಾ ಕೆಲಸಗಳು ದೈವವೇ; ತಮ್ಮ ಸ್ವಂತ ಬೆಳವಣಿಗೆಗಾಗಿ, ಹೆಸರಿಗಾಗಿ ಅಥವಾ ಮಾನಸಿಕ ತೃಪ್ತಿಗಾಗಿ ಮಾಡುವ ಮಾನಸಿಕ ಸಂಸ್ಕೃತಿಗಿಂತ ದೈವಕ್ಕಾಗಿ ಮಾಡಿದ ದೈಹಿಕ ಶ್ರಮವು ಶ್ರೇಷ್ಠವಾದದ್ದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/247– ಶ್ರೀ ಅರವಿಂದರು**

## ಕರ್ತವ್ಯದ ಉದ್ದೇಶ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

ಕಾಯಕ ಮಾತ್ರವೇ ಗುರಿಯಲ್ಲ; ಕಾಯಕವು ಸಾಧನೆಯ ಒಂದು ಮಾರ್ಗವಾಗಿದೆ.

*

ಖಚಿತವಾಗಿ; ಸರಿಯಾದ ಮಾರ್ಗದಲ್ಲಿ ಮಾಡಿದ ಮತ್ತು ಪ್ರಭಾವಕ್ಕೆ ತೆರೆದುಕೊಂಡ ಪ್ರಜ್ಞೆಯಿಂದ ಮಾಡಿದ ಕಾಯಕವು ಸಾಧನೆಯಾಗಿದೆ.

*

ಸಾಧನೆ ಇಲ್ಲದೆ ಯೋಗದ ಉದ್ದೇಶವನ್ನು ಗಳಿಸಲಾಗದು. ಕಾಯಕವನ್ನು ಸಾಧನೆಯ ಭಾಗವನ್ನಾಗಿ ತೆಗೆದುಕೊಳ್ಳಬೇಕು. ಆದರೆ, ಸ್ವಾಭಾವಿಕವಾಗಿ ನೀವು ಕಾರ್ಯ ಮಾಡುತ್ತಿರಬೇಕಾದರೆ, ನೀವು ಕಾಯಕದ ಬಗ್ಗೆ ಚಿಂತನೆಯನ್ನು ಯೋಗ

ಪ್ರಜ್ಞೆಯಿಂದ ಒಂದು ಸಾಧನವನ್ನಾಗಿ ಮತ್ತು ದೈವೀ ಸ್ಮೃತಿಯಿಂದ ಮಾಡುವುದನ್ನು ಕಲಿತುಕೊಳ್ಳುವಿರಿ.

*

## ಆಧ್ಯಾತ್ಮಿಕ ಶುದ್ಧೀಕರಣ

ಕಾಯಕದ ಸಲುವಾಗಿ ಮಾಡುವ ಕಾಯಕ ಅಥವಾ ಇನ್ನೊಬ್ಬರ ಸಲುವಾಗಿ ಯಾವುದೇ ಫಲಾಪೇಕ್ಷೆ ಇಲ್ಲದೆ ಅಥವಾ ವೈಯಕ್ತಿಕ ಲಾಭ ಅಥವಾ ನಷ್ಟ ಪರಿಹಾರವನ್ನು ಕೇಳದೆ ಮಾಡುವ ಕಾಯಕವನ್ನು ಸಾಮಾನ್ಯವಾಗಿ ನಿರಾಸಕ್ತಿಯ ಕಾಯಕವೆನ್ನುತ್ತಾರೆ; ಆದರೆ ಯೋಗದಲ್ಲಿ ಯಾವುದೇ ಷರತ್ತಿಲ್ಲದೆ ಅಥವಾ ಅಧಿಕಾರವಿಲ್ಲದೆ ದೇವರಿಗಾಗಿ ಸಮರ್ಪಣೆ ಮಾಡಿದ ಕಾಮನಾರಹಿತ ಕಾಯಕವನ್ನು ನಿರಾಸಕ್ತಿದಾಯಕ ಕಾಯಕವೆಂದು ಕರೆಯುತ್ತಾರೆ.

*

ನಿಮ್ಮ ಸ್ವಂತ ಆಂತರಿಕ ಪ್ರಗತಿಗಾಗಿ ಮತ್ತು ಪರಿಪೂರ್ಣತೆಗಾಗಿ ಮಾತ್ರ ಕಾಯಕವನ್ನು ಮಾಡುವುದಲ್ಲದೆ ದೇವರಿಗಾಗಿಯೂ ಸಹ ಕಾಯಕವನ್ನು ಮಾಡುವುದು ನಿಮ್ಮ ಉದ್ದೇಶವಾಗಿರಬೇಕು.

*

ಯಾವುದೇ ವೈಯಕ್ತಿಕ ಕಾರಣಗಳಿಲ್ಲದೆ, ಖ್ಯಾತಿಯ ಬಯಕೆಗಾಗಿ ಅಥವಾ ಜನಪ್ರಿಯತೆಗಾಗಿ ಅಥವಾ ದೊಡ್ಡಸ್ತಿಕೆಗಾಗಿ ಅಥವಾ ಪ್ರಾಣಿಕ ಆಮಿಷಗಳಗೆ ಹಾಗೂ ಬಯಕೆಗಳಗೆ ಅಥವಾ ಭೌತಿಕ ಇಷ್ಟಗಳಗೆ ಪಟ್ಟು ಹಿಡಿಯದೆ, ಪ್ರತಿಷ್ಠೆ ಅಥವಾ ಆತ್ಮ ಪ್ರತಿಷ್ಠೆ ಅಥವಾ ಸ್ಥಾನಮಾನದ ಹಕ್ಕೊತ್ತಾಯ ಇಲ್ಲದೆಯೆ, ದೈವದ ಆದೇಶದ ಮೇರೆಗೆ ದೈವಕ್ಕಾಗಿ ಮಾಡಿದ ಕಾಯಾಕವು ಮಾತ್ರ ಆಧ್ಯಾತ್ಮಿಕವಾಗಿ ಶುದ್ಧಿಗೊಳಿಸುತ್ತದೆ. ಸ್ವ–ಪ್ರತಿಷ್ಠೆಯಲ್ಲಿ, ಅಜ್ಞಾನ ಪ್ರಪಂಚದಲ್ಲಿರುವ ಜನರಿಗಾಗಿ ಮಾಡಿದ ಕಾಯಕ ಎಷ್ಟೇ ಉತ್ತಮವಾಗಿದ್ದರೂ ಅದರಿಂದ ಯೋಗಾನ್ವೇಷಕನಿಗೆ ಸಹಾಯವಾಗಲಾರದು.

*

ಸ್ಫೂರ್ತಿಯಲ್ಲಿ ಮತ್ತು ಪ್ರಜ್ಞೆಯಲ್ಲಿ ಮಾಡಿದಂಥ ಆ ಒಂದು ಕ್ರಿಯೆಯನ್ನು ಯೋಗಮಯವನ್ನಾಗಿ ಮಾಡುವುದೇ ಹೊರತು ಸ್ವತಃ ಆ ಕ್ರಿಯೆ ಅಲ್ಲ.

*

ಒಂದು ಪ್ರತಿಫಲಕ್ಕಾಗಿ ಮಾಡುವ ಯಾವುದೇ ಕಾರ್ಯವು ಯೋಗದ ನಿಯಮಕ್ಕೆ ವಿರುದ್ಧವಾಗಿದೆ. ಒಂದು ಸಂಗತಿಯನ್ನು ಮಾಡುವುದಾದರೆ, ಅದು ಸರಿಯಾಗಿರಬೇಕು ಇಲ್ಲವೆ ಅದು ದೇವರಿಗಾಗಿ ಮಾಡಬೇಕು, ಆದರೆ ಪ್ರತಿಫಲಕ್ಕಾಗಿ ಅಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/231–33**

**ಕಾಯಕದ ಉಪಯುಕ್ತತೆ**

ಕಾಯಕವನ್ನು ಮುಂದುವರೆಸಿಕೊಂಡು ಹೋಗುವುದರಿಂದ ಆಂತರಿಕ ಅನುಭವ ಮತ್ತು ಬಾಹ್ಯ ಪ್ರಗತಿಯ ಮಧ್ಯೆ ಸಮತೋಲನವನ್ನು ಮುಂದುವರೆಸಿಕೊಂಡು ಹೋಗಲು ಸಹಾಯಕವಾಗುತ್ತದೆ; ಇಲ್ಲದಿದ್ದರೆ, ಏಕಪಕ್ಷೀಯತೆ ಮತ್ತು ಮಾಪನ ಹಾಗೂ ಸಮತೋಲನ ಮಾಡುವ ಬೇಡಿಕೆ ಬೆಳೆಯಬಹುದು. ಮೇಲಾಗಿ, ದೇವರಿಗಾಗಿ ಸಾಧನೆಯ ಕಾರ್ಯವನ್ನು ಮುಂದುವರೆಸುವುದು ಅವಶ್ಯಕವಾಗುತ್ತದೆ. ಯಾಕೆಂದರೆ, ಕೊನೆಯಲ್ಲಿ, ಆಂತರಿಕ ಪ್ರಗತಿಯನ್ನು ಬಾಹ್ಯ ಪ್ರಕೃತಿಯಲ್ಲಿ ಮತ್ತು ಜೀವನದಲ್ಲಿ ಹೊರತರಲು ಸಾಧಕನಿಗೆ ಮತ್ತು ಸಾಧನೆಯ ಸಮಗ್ರತೆಗೆ ಸಹಾಯ ಮಾಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/240**

**ದೈವೀ ಕಾರ್ಯಕ್ಕಾಗಿ ಒಂದು ತರಬೇತಿ**

ಇಲ್ಲಿಯ ಕಾರ್ಯ ಮತ್ತು ಪ್ರಪಂಚದಲ್ಲಿ ಮಾಡಿದ ಕಾರ್ಯ ಎರಡೂ ಒಂದೇ ಸಂಗತಿಗಳಲ್ಲ. ಅಲ್ಲಿನ ಕಾರ್ಯ ಯಾವುದೇ ರೀತಿಯಲ್ಲೂ ಒಂದು ವಿಶೇಷ ದೈವೀ ಕಾರ್ಯವಲ್ಲ – ಪ್ರಪಂಚದಲ್ಲಿ ಅದು ಸಾಧಾರಣ ಕಾರ್ಯವಾಗಿದೆ. ಆದರೂ ಅದನ್ನು ಒಂದು ತರಬೇತಿಯನ್ನಾಗಿ ಪರಿಗಣಿಸಿ ಅದನ್ನು ಕರ್ಮ ಯೋಗದ ಸ್ಫೂರ್ತಿಯಲ್ಲಿ ಮಾಡಬೇಕು – ಅಲ್ಲಿ ಗಮನಾರ್ಹವಾಗುವುದು ಸ್ವಯಂ ಕಾರ್ಯದ ಸ್ವಭಾವವಲ್ಲ, ಆದರೆ ಎಷ್ಟು ಸ್ಫೂರ್ತಿಯಿಂದ ಮಾಡಲಾಗಿದೆ ಎಂಬುದು ಗಮನಾರ್ಹ. ಅದು ಗೀತೆಯ ಚೈತನ್ಯವಾಗಿರಬೇಕು, ಬಯಕೆ ಇಲ್ಲದೆ, ಅನಾಸಕ್ತಿಯಿಂದ, ಜಿಗುಪ್ಸೆ ಇಲ್ಲದೆ, ಸಾಧ್ಯವಾದಷ್ಟು ಪರಿಪೂರ್ಣವಾಗಿರಬೇಕು, ಕುಟುಂಬಕ್ಕಾಗಿ ಅಥವಾ ಪ್ರೋತ್ಸಾಹಕ್ಕಾಗಿ ಮಾಡುವುದಲ್ಲ, ಅಥವಾ ವರಿಷ್ಠರನ್ನು ಮೆಚ್ಚಿಸಲು ಮಾಡುವುದಲ್ಲ, ಅದನ್ನು ಮಾಡಲು ನಮ್ಮ ಕೈಗೆ ಕೊಟ್ಟಂಥ ಒಂದು

ಸಂಗತಿಯಾಗಿದೆ. ಅದು ಆಂತರಿಕ ತರಬೇತಿ ಕ್ಷೇತ್ರವೇ ಹೊರತು ಮತ್ತೇನೂ ಅಲ್ಲ. ಅದರಲ್ಲಿ ನಾವು ಮೂರು ಸಂಗತಿಗಳನ್ನು ಕಲಿತುಕೊಳ್ಳಬೇಕು, ಸಮಾನತೆ, ನಿಷ್ಕಾಮ, ಸಮರ್ಪಣೆ. ತನ್ನ ಸ್ವಂತದ ಸಲುವಾಗಿ ಮಾಡಿದ ಕಾರ್ಯ ಇದಲ್ಲ, ನಾವು ಸಮರ್ಪಣೆಯ ಭಾವದಿಂದ ಅದನ್ನು ಮಾಡಬೇಕು. ಆ ಸ್ಫೂರ್ತಿಯಿಂದ ಮಾಡಿದಾಗ, ಆ ಕಾರ್ಯವು ಅಪ್ರಸ್ತುತವಾಗುತ್ತದೆ. ಆ ತೆರನಾಗಿ ನಮ್ಮನ್ನು ನಾವು ತರಬೇತುಗೊಳಿಸಿಕೊಂಡರೆ, ಅದಾವುದೇ ವಿಶೇಷ ಕಾರ್ಯವಿರಲಿ (ಆಶ್ರಮದ ಕಾರ್ಯದ ಹಾಗೆ), ನೇರವಾಗಿ ಅದನ್ನು ದೇವರಿಗಾಗಿ ನೈಜವಾಗಿ ಮಾಡಬಹುದು.

*

ಹೌದು, ಸಷ್ಟವಾಗಿ, ಅದೊಂದು ಲಕ್ಷಣವನ್ನು (ಕಾರ್ಯದ) ಪರೀಕ್ಷಿಸುವ ಮತ್ತು ಸಾಧಕನನ್ನು ಅವನ ಬಾಹ್ಯ ಇರುವಿಕೆಯ ದೋಷಗಳ ಮುಂದೆ ಇರಿಸುವ (ಇಲ್ಲದಿದ್ದರೆ ಇವುಗಳು ಸಾಧಕನಿಂದ ಪಾರಾಗಬಹುದು) ಕಾರ್ಯದ ಶ್ರೇಷ್ಠ ಉಪಯುಕ್ತತೆಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/240–41**

## ನಮ್ಮ ಸ್ವಭಾವದ ದೋಷಗಳಿಂದ ಮುಕ್ತಿಯನ್ನು ಪಡೆದುಕೊಳ್ಳುವುದು

ಕಾರ್ಯವನ್ನು ಮಾಡದೇ ಇರುವುದಕ್ಕೆ ದೋಷಗಳು ಕಾರಣಗಳೆಂದು ಒಪ್ಪಿಕೊಳ್ಳುವುದಕ್ಕಿಂತ, ದೋಷಗಳಿಂದ ಮುಕ್ತಿ ಪಡೆಯುವ ಸಾಧನವೆಂದು ತಿಳಿದು ಕಾರ್ಯವನ್ನು ಮಾಡುವುದು ಉತ್ತಮ. ನಿಮ್ಮ ಸ್ವಭಾವದ ಬದಲಿಸಲಾಗದ ನಿಯಮವೆಂಬಂತೆ ಈ ಪ್ರತಿಕ್ರಿಯೆಗಳನ್ನು ಸ್ವೀಕರಿಸುವ ಬದಲು, ಅವುಗಳು ಎಂದಿಗೂ ಬರದ ಹಾಗೆ ನಿಮ್ಮ ಮನಸ್ಸನ್ನು ತಯಾರಿ ಮಾಡಿಕೊಳ್ಳಬೇಕು – ಪ್ರಾಣವನ್ನು ಶುದ್ಧಗೊಳಿಸಲು ಮತ್ತು ಅವುಗಳನ್ನು ಪೂರ್ಣವಾಗಿ ಇಲ್ಲವಾಗಿಸಲು ಶ್ರೀಮಾತೆಯವರ ಶಕ್ತಿಯನ್ನು ಸಹಾಯಕ್ಕಾಗಿ ಯಾಚಿಸಬೇಕು. ದೇಹದಲ್ಲಿ ತೊಂದರೆ ಬರಲೇಬೇಕೆಂದು ನಂಬಿದರೆ, ಸ್ವಾಭಾವಿಕವಾಗಿ ಅದು ಬರುತ್ತದೆ; ಅದರ ಬದಲಿಗೆ, ಅದು ಬರಲೇಬಾರದು ಮತ್ತು ಬರುವುದಿಲ್ಲವೆಂದು ಎನ್ನುವ ಕಲ್ಪನೆಯನ್ನು ನಿಮ್ಮ ಮನಸ್ಸಿನಲ್ಲಿ ಗಟ್ಟಿಗೊಳಿಸಬೇಕು. ಒಂದೊಮ್ಮೆ ಅದು ಬರಲು ಪ್ರಯತ್ನಿಸಿದರೆ, ಅದನ್ನು ತಿರಸ್ಕರಿಸಿರಿ ಮತ್ತು ನಿಮ್ಮಿಂದ ದೂರ ಎಸೆಯಿರಿ.

*

ಸಾಧಕನಿಗೆ ಬಾಹ್ಯ ಪ್ರಯಾಸಗಳು, ತೊಂದರೆಗಳು, ಅನಾಹುತಗಳು ಅಹಂಕಾರವನ್ನು ಮತ್ತು ರಾಜಸಿಕ ಬಯಕೆಗಳನ್ನು ಗೆಲ್ಲಲು ಮತ್ತು ಪೂರ್ಣ ಶರಣಾಗತಿ ಪಡೆಯಲು ಇರುವ ಸಾಧನಗಳು ಮಾತ್ರ. ಎಲ್ಲಿಯವರೆಗೆ ನಾವು ಯಶಸ್ಸಿಗಾಗಿ ಪಟ್ಟು ಬಿಡಲಾರೆವೊ, ನಾವು ಅಹಂಕಾರಕ್ಕಾಗಿ ಭಾಗಶಃ ಕಾರ್ಯವನ್ನು ಮಾಡುತ್ತಿರುತ್ತೇವೆ; ಕಷ್ಟಗಳು ಮತ್ತು ಬಾಹ್ಯ ಸೋಲುಗಳು ನಮಗೆ ಎಚ್ಚರಿಕೆಯನ್ನು ಕೊಡಲು ಮತ್ತು ಪೂರ್ಣ ಸಮಾನತೆಯನ್ನು ತರಲು ಬರುತ್ತವೆ. ಇದರ ಅರ್ಥ, ಜಯದ ಪ್ರಭಾವವನ್ನು ಹೊಂದದೆ ಇರುವುದಲ್ಲ; ಆದರೆ ತಕ್ಷಣದ ಕಾರ್ಯದಲ್ಲಿ ಯಶಸ್ಸೂ ಪ್ರಮುಖವಾದ ವಿಷಯವಲ್ಲ; ಅಭಿವೃದ್ಧಿಯಾಗಬೇಕಾದ ಅತಿ ಶ್ರೇಷ್ಠ ಧ್ಯೇಯೋದ್ದೇಶ ಮತ್ತು ಆಂತರಿಕ ಬಲವನ್ನು ಸ್ವೀಕರಿಸುವ ಮತ್ತು ರವಾನಿಸುವ ಸತ್ವ ಇದಾಗಿದೆ ಮತ್ತು ಇದನ್ನು ಅತ್ಯಂತ ಶಾಂತವಾಗಿ ಹಾಗೂ ತಾಳ್ಮೆಯಿಂದ, ತಕ್ಷಣದ ಜಯದಿಂದ ಅಥವಾ ಸೋಲಿನಿಂದ ಉಬ್ಬದೆ ಅಥವಾ ವ್ಯಾಕುಲಗೊಳ್ಳದೆ ಮಾಡಬೇಕು.

**ಕಾಯಕದಲ್ಲಿ ಸರಿಯಾದ ನಿಲುವು**

ಕಾಯಕದ ಆಧ್ಯಾತ್ಮಿಕ ಸಫಲತೆಯು ಆಂತರಿಕ ನಿಲುವಿನ ಅಥವಾ ಮನೋಭಾವದ ಮೇಲೆ ಅವಲಂಬಿಸಿದೆ. ನಿವೇದನೆಯ ಸ್ಫೂರ್ತಿಯನ್ನು ಕಾಯಕದಲ್ಲಿರಿಸುವುದು ಮಹತ್ವದ್ದಾಗಿದೆ. ಇದರ ಜೊತೆಗೆ ಕಾಯಕದಲ್ಲಿ ಶ್ರೀಮಾತೆಯವರನ್ನು ಸ್ಮರಿಸಿದರೆ ಅಥವಾ ಶ್ರೀಮಾತೆಯವರ ಇರುವಿಕೆಯನ್ನು ಅಥವಾ ಪುಷ್ಟಿಕೊಡುತ್ತಿರುವ ಶಕ್ತಿಯನ್ನು ಅಥವಾ ಕಾರ್ಯವೆಸಗುವುದನ್ನು ಒಂದು ಏಕಾಗ್ರತೆಯ ಮೂಲಕ ಅನುಭವಿಸಿದರೆ ಅದು ಆಧ್ಯಾತ್ಮಿಕ ಸಫಲತೆಯನ್ನು ಇನ್ನೂ ಮುಂದೊಯ್ಯುತ್ತದೆ. ಮ್ಲಾನತೆಯ, ಖಿನ್ನತೆಯ ಅಥವಾ ಪ್ರಯಾಸದ ಕ್ಷಣಗಳಲ್ಲಿ ಸಂಗತಿಗಳನ್ನು ಮಾಡದಿದ್ದರೂ ಹಿಂಬದಿಯಲ್ಲಿ ಕಾಯಕದ ಮೂಲ ಪ್ರಚೋದನೆಯಾಗಿದ್ದ ಒಂದು ಪ್ರೇಮ ಅಥವಾ ಭಕ್ತಿ ಇರುತ್ತದೆ. ಅದು ಮೋಡದ ಹಿಂದೆ ಇದ್ದು, ಕತ್ತಲ ಘಳಿಗೆಯ ನಂತರ ಸೂರ್ಯನಂತೆ ಮತ್ತೆ ಹೊರಬರುತ್ತದೆ. ಎಲ್ಲ ಸಾಧನೆಯು ಆ ರೀತಿ ಇರುವುದರಿಂದ ಕಷ್ಟದ ಕ್ಷಣಗಳಲ್ಲಿ ನಾವು ಎದೆಗುಂದಬಾರದು. ಮೂಲ ಪ್ರೇರಣೆ ಇರುತ್ತದೆ ಎನ್ನುವುದನ್ನು ಅರಿತುಕೊಳ್ಳಬೇಕು. ಆದ್ದರಿಂದ ಕತ್ತಲೆಯ ಕ್ಷಣಗಳು ಉನ್ನತ ಪ್ರಗತಿಯ ಯಾತ್ರೆಯಲ್ಲಿ ಒಂದು ಘಟನೆ ಮಾತ್ರ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/241–42**

## ಸ್ವ–ಪ್ರತಿಷ್ಠೆಯಿಂದ ಮುಕ್ತಿ ಹೊಂದುವುದು

ಅ–ವೈಯಕ್ತಿಕವಾಗಿರಬೇಕಾದರೆ, ಸಾಮಾನ್ಯವಾಗಿ, ಅದು ಸ್ವ–ಪ್ರತಿಷ್ಠೆಯಿಂದ ಇರುವುದಲ್ಲ, ಅವುಗಳು ನಮ್ಮನ್ನು ಹೇಗೆ ಬಾಧಿಸಬಹುದು ಎಂಬ ದೃಷ್ಟಿಯಿಂದ ಸಂಗತಿಗಳಗನ್ನು ಪರಿಗಣಿಸಬಾರದು – ಆದರೆ ಅವುಗಳಲ್ಲಿ ಏನು ಸಂಗತಿಗಳಿವೆ ಎನ್ನುವುದನ್ನು ನೋಡುವುದಾಗಿದೆ, ನಿಷ್ಪಕ್ಷವಾಗಿ ವಿಮರ್ಶಿಸುವುದಾಗಿದೆ, ಸಂಗತಿಗಳ ಉದ್ದೇಶದ ಬೇಡಿಕೆಯಿಂದ ಅಥವಾ ಸಂಗತಿಗಳ ಯಜಮಾನನ ಬಯಕೆಯಿಂದ ಕಾರ್ಯ ಮಾಡುವುದಾಗಿದೆ – ನಮ್ಮ ಸ್ವಾರ್ಥಪರ ಒಲವಿನಿಂದ ಅಥವಾ ವೈಯಕ್ತಿಕ ದೃಷ್ಟಿಕೋನದಿಂದ ಕಾರ್ಯವನ್ನು ಮಾಡಬಾರದು. ಕಾರ್ಯಕ್ಕಾಗಿ ಏನು ಅತ್ಯುತ್ತಮ ಅದನ್ನು ಕಾರ್ಯದಲ್ಲಿ ಮಾಡುವುದಾಗಿದೆ. ಸ್ವ–ಪ್ರತಿಷ್ಠೆಗೆ ಅಥವಾ ಅನುಕೂಲಕ್ಕೆ ಮನ್ನಣೆಯನ್ನು ಕೊಡದೆ ಕಾರ್ಯವನ್ನು ಮಾಡಬೇಕು. ಕಾರ್ಯವನ್ನು ಶ್ರೀಮಾತೆಯ–ವರದೆಂದು ಪರಿಗಣಿಸಿ ಶಿಸ್ತಿನಿಂದ, ನಿಯಮಬದ್ಧವಾಗಿ ಮತ್ತು ಅ–ವೈಯಕ್ತಿಕ ವ್ಯವಸ್ಥೆಯಿಂದ ಮಾಡಬೇಕು. ಸಂಗತಿಗಳು ಅನುಕೂಲಕರವಾಗಿಲ್ಲದಿದ್ದರೂ, ಉತ್ತಮ ಪರಿಸ್ಥಿತಿಗನುಗುಣವಾಗಿ ಕಾರ್ಯಮಾಡಬೇಕು. ಅ–ವೈಯಕ್ತಿಕ ಸಾಧಕನು ತನ್ನ ಅತ್ಯುತ್ತಮ ಸಾಮರ್ಥ್ಯವನ್ನು, ಉತ್ಸಾಹವನ್ನು, ದುಡಿತವನ್ನು ಕಾರ್ಯದಲ್ಲಿ ಉಪಯೋಗಿಸುತ್ತಾನೆ. ಆದರೆ, ಅವನ ವೈಯಕ್ತಿಕ ಆಕಾಂಕ್ಷೆಗಳನ್ನು, ಪ್ರತಿಷ್ಠೆಯನ್ನು, ಉದ್ವೇಗವನ್ನು ಕಾರ್ಯದಲ್ಲಿ ಉಪಯೋಗಿಸುವುದಿಲ್ಲ. ತನ್ನ ಚಿಕ್ಕ ವ್ಯಕ್ತಿತ್ವಗಿಂತ ಮಹತ್ತರವಾದುದೊಂದು ಅವನಲ್ಲಿರುತ್ತದೆ ಮತ್ತು ಅದಕ್ಕೆ ಅವನ ಭಕ್ತಿಯು ಅಥವಾ ವಿಧೇಯತೆಯು ಅವನ ವರ್ತನೆಯನ್ನು ನಿರ್ದೇಶಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/244–45**

ನಿಮ್ಮ ಕಾಯಕದಲ್ಲಿನ ತೊಂದರೆ ಏನೆಂದರೆ, ಅದನ್ನು ನಿಮ್ಮ ಕಾಯಕವೆಂದು ಮತ್ತು ನಿಮ್ಮ ವೈಯಕ್ತಿಕ ದೃಷ್ಟಿಕೋನದಿಂದ ಅತಿಯಾಗಿ ಮನ್ನಣೆಯನ್ನು ಕೊಡುವುದಾಗಿದೆ. ಆದ್ದರಿಂದ, ವೈಯಕ್ತಿಕ ಅನುಕೂಲದ ಕಲ್ಪನೆಗಳ ಸಂಗತಿಗಳನ್ನು ಮಾಡುವ ವಿಧಾನಗಳ, ಪ್ರತಿಷ್ಠೆಯ, ಬೇಡಿಕೆಗಳ ಪ್ರಶ್ನೆಗಳು ಉನ್ನತ ಸ್ಥಾನವನ್ನು ತೆಗೆದುಕೊಳ್ಳುತ್ತವೆ – ಇದರ ಪರಿಣಾಮವೇನೆಂದರೆ, ಕಲಹಗಳು. ನೀವು ಅ–ವೈಯಕ್ತಿಕವಾಗಿರುವುದನ್ನು ಕಲಿತುಕೊಳ್ಳಬೇಕು. ಅದಿಲ್ಲದಿದ್ದರೆ ಈ ಪ್ರಪಂಚದಲ್ಲಿಯೂ ಸಹ ಕಾಯಕವನ್ನು ಉತ್ತಮವಾಗಿ ಮಾಡಲಾಗದು. ಒಬ್ಬ ಯೋಗ ಸಾಧಕನಿಗೆ ಇದು ಬಹಳೇ ಅವಶ್ಯಕ!

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/245**

## ಸಮಚಿತ್ತತೆಯ ಆಚರಣೆ

ತೊಂದರೆಗಳ ಅಸಹಾಯಕ ಅಂಗೀಕಾರವು ಕರ್ಮ ಯೋಗದ ಭಾಗವಲ್ಲ – ಅವಶ್ಯವಾಗಿ ಬೇಕಾಗಿದ್ದು ಏನೆಂದರೆ, ಅನುಕೂಲ ಹಾಗೂ ಪ್ರತಿಕೂಲ ಪರಿಸ್ಥಿತಿಗಳಲ್ಲಿ, ಅದೃಷ್ಟಕರ ಅಥವಾ ದುರದೃಷ್ಟಕರ ಘಟನೆಗಳಲ್ಲಿ, ಉತ್ತಮ ಅಥವಾ ಕೆಟ್ಟ ಅದೃಷ್ಟಗಳಲ್ಲಿ, ಪ್ರಯತ್ನದ ಜಯ ಅಥವಾ ಸೋಲುಗಳಲ್ಲಿ ಸ್ಥಿರವಾದ ಸಮಚಿತ್ತತೆ. ಅಳುಕಿಲ್ಲದೆ, ತೊಂದರೆ ಇಲ್ಲದೆ, ರಾಜಸಿಕ ಆನಂದ ಅಥವಾ ದುಃಖವಿಲ್ಲದೆ ಸಹಿಸುವುದನ್ನು ಕಲಿತುಕೊಳ್ಳಬೇಕು, ತೊಂದರೆಗಳು ಅಥವಾ ಸೋಲುಗಳು ಬಂದಾಗ ನಿರುತ್ಸಾಹವಿಲ್ಲದೆ ಅವಶ್ಯಕವೆನಿಸುವ ಎಲ್ಲವನ್ನೂ ಮಾಡಬೇಕು, ಜೀವನದ ಒತ್ತಡದಿಂದ ಕುಗ್ಗದೆ ಮಾಡಬೇಕಾದುದನ್ನು ಮಾಡುತ್ತ ಹೋಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/243**

## ದೇವರ ಸೇವೆ

ಪ್ರಭಾವದಂತ್ಯಲ್ಲಿ ದಣಿವು ಇರಬಾರದು, ಮಹದಾಶೆ ಇರಬಾರದು, ಬಲದ ಅಹಂಭಾವ ಇರಬಾರದು. ಬರುವ ಪ್ರಭಾವ ಅಥವಾ ಪ್ರಭಾವಗಳನ್ನು ನಮ್ಮ ಸ್ವಂತದ್ದೆಂದು ತಿಳಿಯದೆ ದೇವರ ಕಾರ್ಯಕ್ಕಾಗಿ ದೇವರ ಕಾಣಿಕೆ ಎಂದು ತಿಳಿಯಬೇಕು. ಮಹತ್ವಾಕಾಂಕ್ಷೆ ಅಥವಾ ಸ್ವಾರ್ಥದ ದುರ್ಬಳಕೆ, ಹೆಮ್ಮೆ ಅಥವಾ ಪ್ರತಿಷ್ಠೆ, ಹಿರಿತನದ ಅರಿವು, ಹಕ್ಕೊತ್ತಾಯ, ಅಹಂಭಾವ ಇಲ್ಲದಿರುವಿಕೆಯ ಬಗ್ಗೆ ಎಚ್ಚರವಹಿಸಬೇಕು. ದೇವರ ಸೇವೆಗೆ ಸಹಾಯಕವಾಗುವಂಥ ಸರಳ ಮತ್ತು ಶುದ್ಧ ಚೈತ್ಯ ಸಾಧನವಾಗಬೇಕು.

*

ದೋಷರಹಿತ ಸೇವಕನಾಗಲು ಬೇಕಾದ ನಿಯಮವೇನೆಂದರೆ – ಎಲ್ಲ ಸಂಗತಿಗಳಲ್ಲಿ ಜಾಗೃತನಾಗಿರುವುದು, ಎಲ್ಲ ಅಹಂಭಾವದ ಪ್ರಚೋದನೆಯಿಂದ ಮುಕ್ತವಾಗಿರುವುದು, ಸ್ವ–ಇಚ್ಛೆ ಮತ್ತು ಸ್ವ–ಪ್ರತಿಪಾದನೆಯ ಶೂನ್ಯಭಾವ ಹೊಂದುವುದು.

*

ಮನಸ್ಸನ್ನು ತಯಾರಿಗೊಳಿಸಲು ಓದುವಿಕೆ ಮತ್ತು ಅಭ್ಯಾಸಗಳು ಸಹಾಯಕವಾಗ–ಬಹುದಾದರೂ ಅವುಗಳು ಯೋಗಾಭ್ಯಾಸ ಪ್ರವೇಶಕ್ಕೆ ಉತ್ತಮವಾದ ಸಾಧನಗಳಲ್ಲ.

ಆಂತರಿಕ ಸ್ವ–ಸಮರ್ಪಣೆಯು ಒಂದು ಉತ್ತಮ ಸಾಧನ. ಶ್ರೀಮಾತೆಯವರ ಪ್ರಜ್ಞೆಯೊಂದಿಗೆ ನೀವು ಒಂದಾಗಬೇಕು. ಮನಸ್ಸಿನಲ್ಲಿ ಮತ್ತು ಹೃದಯದಲ್ಲಿ ಒಂದು ಪ್ರಾಮಾಣಿಕ ಸ್ವ–ಮುಡುಪು ಮತ್ತು ದೃಢ ನಿಶ್ಚಯ ಅದಕ್ಕೆ ಒಂದು ಸಾಧನ. ಶ್ರೀಮಾತೆಯವರಿಂದ ಕೊಡಲ್ಪಟ್ಟ ಕಾರ್ಯವು ಯಾವಾಗಲೂ ಆ ಸ್ವಯಂ ಮುಡುಪಿನ ಉದ್ದೇಶಕ್ಕೆ ಇರುತ್ತದೆ. ಅದನ್ನು ಶ್ರೀಮಾತೆಯವರಿಗೆ ಒಂದು ಅರ್ಪಣೆ ಎಂದು ತಿಳಿದು ಮಾಡಬೇಕು. ಈ ಸ್ವ–ಅರ್ಪಣೆಯಿಂದ ಅವರ ಬಲವನ್ನು ಮತ್ತು ಇರುವಿಕೆಯನ್ನು ನೀವು ಅನುಭವಿಸಬಹುದು.

*

ನೀವು ಹಿಮಾಲಯಕ್ಕೆ ಹೋಗಿದ್ದೇ ಆದರೆ ನಿಮ್ಮನ್ನು ನೀವು ನಿಷ್ಕ್ರಿಯವಾದ ಧ್ಯಾನಕ್ಕೆ ಯೋಗ್ಯರನ್ನಾಗಿ ಮತ್ತು ಜೀವನಕ್ಕೆ ಹಾಗೂ ಶ್ರೀಮಾತೆಯವರ ಸೇವೆಗೆ ಅಯೋಗ್ಯರನ್ನಾಗಿ ಮಾಡಿಕೊಳ್ಳುವಿರಿ. ಆದ್ದರಿಂದ, ಮುಂದಿನ ಜನ್ಮದಲ್ಲಿ ನಿಮ್ಮ ಪಾತ್ರ ಹಾಗೆಯೇ ಇರುತ್ತದೆ. ಇದು ಹೀಗಾಗಲಿಕ್ಕೆ ಯೋಗದಲ್ಲಿ ಉಪಯುಕ್ತವಾಗದ ಹಳೆಯ ಕಲ್ಪನೆಯ ಪ್ರಭಾವಗಳು ಕಾರಣ. ಇಲ್ಲಿ, ಶ್ರೀಮಾತೆಯವರ ಸಾಮಿಪ್ಯದ ಜೀವನದಲ್ಲಿ, ಕಾರ್ಯದಲ್ಲಿ ನಾವು ಶ್ರೀಮಾತೆಯವರ ಪರಿಪಕ್ವ ಉಪಕರಣವಾಗಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/245–46**

**ಸ್ವಯಂ ಸಮರ್ಪಣೆ**

ಸ್ವಯಂ ಸಮರ್ಪಣೆ ಎನ್ನುವುದು ನೀವು ಮಾಡುವ ನಿರ್ದಿಷ್ಟ ಕಾರ್ಯದ ಮೇಲೆ ಅವಲಂಬಿಸಿಲ್ಲ, ಆದರೆ ಅದು ಅವಲಂಬಿಸಿದ್ದು ನೀವು ಮಾಡುವ ಕೆಲಸದ (ಯಾವುದೇ ತೆರನಾದ ಕೆಲಸವಿರಲಿ) ಸ್ಫೂರ್ತಿಯ ಮೇಲೆ. ಸರಿಯಾಗಿ ಮತ್ತು ಕಾಳಜಿಯಿಂದ ದೇವರಿಗೆ ಸಮರ್ಪಣೆಯಾಗಿ, ಬಯಕೆ ಅಥವಾ ಅಹಂಭಾವವಿಲ್ಲದೆ, ಮನಸ್ಸಿನ ನಿಶ್ಚಲ ಶಾಂತಿ ಹಾಗೂ ಸಮಾನತೆಯೊಂದಿಗೆ (ಒಳ್ಳೆಯ ಅಥವಾ ಕೆಟ್ಟ ಅದೃಷ್ಟದಲ್ಲಿ) ದೇವರಿಗಾಗಿ, ಸ್ವ–ಲಾಭಕ್ಕಾಗಿ, ಫಲಿತಾಂಶಕ್ಕಾಗಿ ಅಥವಾ ಬಹುಮಾನಕ್ಕಾಗಿ ಮಾಡದೆ, ಎಲ್ಲ ಕಾರ್ಯವೂ ದೈವಕ್ಕೆ ಸಂಬಂದಿಸಿದ ದೈವೀ ಪ್ರಭಾವದ ಪ್ರಜ್ಞೆಯೊಂದಿಗೆ ಮಾಡಿದ ಯಾವುದೇ ಕಾರ್ಯವು ಕರ್ಮದ ಮುಖಾಂತರ ಸ್ವ–ಸಮರ್ಪಣೆಯ ಒಂದು ಸಾಧನವಾಗಿದೆ.

*

ದೊಡ್ಡತನದ ಅಥವಾ ಸಣ್ಣತನದ ಕಲ್ಪನೆಯು ಆಧ್ಯಾತ್ಮದ ಮಾರ್ಗಕ್ಕೆ ತೀರ ಪರಕೀಯವಾಗಿರುತ್ತದೆ. ಆಧ್ಯಾತ್ಮಿಕವಾಗಿ ಅಲ್ಲಿ ಯಾವುದೂ ದೊಡ್ಡದಲ್ಲ, ಯಾವುದೂ ಚಿಕ್ಕದಲ್ಲ. ಇದು ಹೇಗೆಂದರೆ, ಕವಿತೆಗಳನ್ನು ಬರೆಯುವುದು ದೊಡ್ಡ ಕೆಲಸ ಮತ್ತು ಚಪ್ಪಲಿ ಕೆಲಸ ಅಥವಾ ಅಡುಗೆ ಮಾಡುವುದು ಕೀಳು ಮತ್ತು ಸಣ್ಣ ಕೆಲಸವೆಂದು ಭಾವಿಸುವ ಜನರ ಕಲ್ಪನೆಗಳಂತೆ. ಆದರೆ, ಚೇತನದ ದೃಷ್ಟಿಯಲ್ಲಿ ಎಲ್ಲವೂ ಸಮಾನ – ಅದನ್ನು ಯಾವ ಸ್ಫೂರ್ತಿಯಲ್ಲಿ ಮಾಡಲಾಗಿದೆ ಎಂಬುದು ಮುಖ್ಯ. ಇದು ಒಂದು ನಿರ್ದಿಷ್ಟವಾದ ಕಾರ್ಯಕ್ಕೂ ಅನ್ವಯಿಸುತ್ತದೆ, ಯಾವ ಕಾರ್ಯವೂ ದೊಡ್ಡದಲ್ಲ ಅಥವಾ ಸಣ್ಣದಲ್ಲ.

*

ನೀವು ಪ್ರೀತಿಸದೆ ಇರುವ ಕೆಲಸವನ್ನು ಮಾಡುವ ಅವಶ್ಯಕತೆಯಿಲ್ಲ, ಆದರೆ ಪ್ರೀತಿಸದೆ ಇರುವುದನ್ನು ನಿಲ್ಲಿಸಬೇಕು. ನೀವು ಇಷ್ಟಪಡುವುದನ್ನೇ ಮಾತ್ರ ಮಾಡಬೇಕಾದರೆ, ಪ್ರಾಣವನ್ನು ತಣಿಸಬೇಕು ಮತ್ತು ಸ್ವಭಾವದ ಮೇಲೆ ಅದರ ಪ್ರಾಬಲ್ಯವನ್ನು ಕಾಪಾಡಬೇಕು – ಅದು ಅ–ಪರಿವರ್ತಿತ ಸ್ವಭಾವದ (ಅದರ ಪ್ರೀತಿ ಮತ್ತು ದ್ವೇಷಗಳಿಂದ ನಿಯಂತ್ರಿಸಿದ) ವಾಸ್ತವ ತತ್ವವಾಗಿದೆ. ಯಾವುದೇ ಕಾರ್ಯವನ್ನು ಸಮಚಿತ್ತದಿಂದ ಮಾಡಲು ಸಾಧ್ಯವಾಗುವುದು ಕರ್ಮ ಯೋಗದ ತತ್ವದಿಂದ. ಅದನ್ನು ಆನಂದದಿಂದ ಮಾಡುವುದು ಸಾಧ್ಯವಾಗುವುದು ಅದನ್ನು ಶ್ರೀಮಾತೆಯವರಿಗಾಗಿ ಮಾಡುವುದರಿಂದ. ಈ ಯೋಗದಲ್ಲಿ ಅದು ನೈಜ ಪ್ರಾಣಿಕ ಮತ್ತು ಚೈತ್ಯ ಸ್ಥಿತಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/246–48**

### ಎಲ್ಲವೂ ಮನೋವೃತ್ತಿಯ ಮೇಲೆ ಅವಲಂಬಿಸಿದೆ

ನಾನು ವ್ಯಾಪಾರವನ್ನು ಕೆಟ್ಟದ್ದೆಂದು ಅಥವಾ ದೋಷಪೂರಿತವಾದದ್ದೆಂದು ಪರಿಗಣಿಸುವುದಿಲ್ಲವೆಂದು ಹೇಳಬಹುದು – ಪ್ರಾಚೀನ ಆಧ್ಯಾತ್ಮಿಕ ಭಾರತದಲ್ಲಿ ಹೆಚ್ಚು ಪರಿಗಣಿಸಿದಂತೆ. ನಾನೇನಾದರು ಹಾಗೆ ಮಾಡಿದರೆ, ಯಾರೊಬ್ಬರಿಂದಲೂ ಅಥವಾ ಮುಂಬೈನಲ್ಲಿ ಪೂರ್ವ ಆಫ್ರಿಕಾದೊಂದಿಗೆ ವ್ಯಾಪಾರ ಮಾಡುವ ನಮ್ಮ ಶಿಷ್ಯರಿಂದಲೂ ಹಣವನ್ನು ಪಡೆದುಕೊಳ್ಳಲು ಸಾಧ್ಯವಾಗದು; ಅವರು ತಮ್ಮ ಕೆಲಸ ಮಾಡಿಕೊಂಡು ಹೋಗಲು ಪ್ರೋತ್ಸಾಹಿಸಬಹುದು ಅಥವಾ ಅದೆಲ್ಲವನ್ನೂ ಬಿಟ್ಟು

ತಮ್ಮ ಆಧ್ಯಾತ್ಮಿಕ ಪ್ರಗತಿಯತ್ತ ಮಾತ್ರ ಗಮನ ಕೊಡಲು ಹೇಳಬಹುದು. ಅವನ (X ನ) ಆಧ್ಯಾತ್ಮ ಬೆಳಕಿನ ಹುಡುಕಾಟ ಮತ್ತು ಅವನ ಗಿರಣಿಯನ್ನು ನಡೆಸುವ (ವ್ಯವಹಾರ) ಪ್ರಯತ್ನವನ್ನು ನಾವು ಹೇಗೆ ಸಮನ್ವಯಗೊಳಿಸಬಹುದು? ಅವನು ತನ್ನ ಗಿರಣಿಯನ್ನು ಅದರ ಪಾಡಿಗೆ ಬಿಟ್ಟು ಯಾವುದೋ ಆಶ್ರಮ ಸೇರಿ ಧ್ಯಾನ ಮಾಡು ಎಂದು ನಾನು ಹೇಳಬಾರದಲ್ಲವೆ? ರಾಜಕೀಯ ಮಾಡುವಷ್ಟು ಪಾಂಡಿತ್ಯ ನನ್ನಲ್ಲಿರುವಂತೆ ವ್ಯಾಪಾರ ಮಾಡುವ ಪಾಂಡಿತ್ಯವೂ ಸಹ ಇದ್ದರೆ, ನಾನದನ್ನು ಕನಿಷ್ಟ ಆಧ್ಯಾತ್ಮಿಕ ಅಥವಾ ನೈತಿಕ ಕನಿಕರವಿಲ್ಲದೆ ಮಾಡುತ್ತಿದ್ದೆ. ಎಲ್ಲವೂ ಅವಲಂಬಿತವಾಗಿರುವುದು ಕಾರ್ಯ ಮಾಡುವ ಸ್ಫೂರ್ತಿಯ ಮೇಲೆ, ಅದನ್ನು ಮಾಡುವ ತತ್ವದ ಆಧಾರದ ಮೇಲೆ ಮತ್ತು ಅದನ್ನು ಏತಕ್ಕಾಗಿ ಉಪಯೋಗಿಸುತ್ತಿದ್ದೇವೆ ಎನ್ನುವುದರ ಮೇಲೆ. ನಾನು ರಾಜಕೀಯ ಮಾಡಿದ್ದೇನೆ, ಅತ್ಯಂತ ಹಿಂಸಾತ್ಮಕ ಕ್ರಾಂತಿಕಾರಿ ರಾಜಕೀಯ ಮಾಡಿದ್ದೇನೆ, ಘೋರ ಕರ್ಮ, ನಾನು ಯುದ್ಧವನ್ನು ಬೆಂಬಲಿಸಿದ್ದೆನೆ, ಮತ್ತು ಜನರನ್ನು ಅದಕ್ಕೆ ಕಳುಹಿಸಿದ್ದೇನೆ. ರಾಜಕೀಯವೆನ್ನುವುದು ಯಾವಾಗಲೂ ಒಂದು ಶುದ್ಧ ಉದ್ಯೋಗವಾಗಿಲ್ಲ ಅಥವಾ ಯುದ್ಧವನ್ನು ಆಧ್ಯಾತ್ಮಿಕ ಕ್ರಿಯೆ ಎನ್ನಲಾಗದು. ಶ್ರೀಕೃಷ್ಣನು ಅರ್ಜುನನಿಗೆ ಅತ್ಯಂತ ಘೋರವಾದ ಯುದ್ಧವನ್ನು ಮಾಡಲು ಕರೆ ಕೊಡುತ್ತಾನೆ. ಆ ಉದಾಹರಣೆಯ ಮೇಲೆ ಎಲ್ಲ ರೀತಿಯ ಮಾನವ ಕರ್ಮವನ್ನು (ಸರ್ವ ಕರ್ಮ) ಮಾಡಲು ಜನರನ್ನು ಹುರಿದುಂಬಿಸಬೇಕು. ಶ್ರೀಕೃಷ್ಣನು ಒಬ್ಬ ಧಾರ್ಮಿಕವಲ್ಲದ ಮನುಷ್ಯನಾಗಿದ್ದ ಮತ್ತು ಅರ್ಜುನನಿಗೆ ಅವನು ಮಾಡಿದ ಉಪದೇಶ ತಪ್ಪಾಗಿತ್ತು ಅಥವಾ ತಾತ್ವಿಕವಾಗಿ ಅದು ತಪ್ಪಾಗಿತ್ತು ಎಂದು ಸಾಧಿಸುತ್ತೀರಾ? ಶ್ರೀಕೃಷ್ಣನು ಮುಂದುವರೆದು ಹೀಗೆ ಹೇಳುತ್ತಾನೆ – ಒಬ್ಬ ಮನುಷ್ಯನು ಸರಿಯಾದ ಮಾರ್ಗದಲ್ಲಿ, ಸರಿಯಾದ ಅರ್ಥದಲ್ಲಿ ಅವನ ಮೂಲಸ್ವಭಾವದಿಂದ, ಮನೋಧರ್ಮದಿಂದ ಮತ್ತು ಸಾಮರ್ಥ್ಯದಿಂದ ಆದೇಶಿಸಿದ ಮತ್ತು ಅವನ ಹಾಗೂ ಅದರ ಧರ್ಮಾನುಸಾರ ಕಾರ್ಯವನ್ನು ಮಾಡುವುದರಿಂದ ಅವನು ದೇವರೆಡೆಗೆ ಸಾಗಬಹುದು. ಅವನು ವೈಶ್ಯನ, ಬ್ರಾಹ್ಮಣನ ಮತ್ತು ಕ್ಷತ್ರಿಯನ ಕರ್ತವ್ಯ ಮತ್ತು ಧರ್ಮವನ್ನು ಊರ್ಜಿತಗೊಳಿಸುತ್ತಾನೆ. ಅವನ ದೃಷ್ಟಿಯಲ್ಲಿ ಒಬ್ಬನು ವ್ಯಾಪಾರ ಮಾಡಿ ದುಡ್ಡನ್ನು ಸಂಪಾದಿಸಿ, ಲಾಭವನ್ನು ಮಾಡಿಕೊಂಡರೂ ಅವನು ಧಾರ್ಮಿಕ ಮನುಷ್ಯನಾಗಿರಬಹುದು, ಯೋಗಾಭ್ಯಾಸ ಮಾಡಬಹುದು. ಕರ್ಮಗಳು ಆಧ್ಯಾತ್ಮಿಕ ಮುಕ್ತಿಯ ಸಾಧನವೆಂದು ಗೀತೆಯು ನಿರಂತರವಾಗಿ ಸಮರ್ಥಿಸುತ್ತಲಿದೆ ಮತ್ತು

ಕರ್ಮ ಯೋಗ ಹಾಗೂ ಜ್ಞಾನಂ ಯೋಗಗಳು ಮುಕ್ತಿಯ ಮಾರ್ಗಗಳೆಂದು ಆದೇಶಿಸುತ್ತದೆ. ಕರ್ಮವನ್ನು ಯಾವುದೇ ಹಂಬಲವಿಲ್ಲದೆ, ಯಾವುದೇ ಫಲಾಪೇಕ್ಷೆಗೆ ಅಂಟಿಕೊಳ್ಳದೆ, ಯಾವುದೇ ಸ್ವಾರ್ಥಪರಭಾವನೆ ಅಥವಾ ಪ್ರೇರಣೆ ಇಲ್ಲದೆ ಮಾಡಬೇಕು ಮತ್ತು ಅದು ದೇವರಿಗೆ ಒಂದು ಅರ್ಪಣೆಯಾಗಿರಬೇಕು ಅಥವಾ ತ್ಯಾಗವಾಗಿರಬೇಕು ಎಂದು ಶ್ರೀಕೃಷ್ಣನು ಒಂದು ಉನ್ನತ ನಿಯಮವನ್ನು ಹೇರುತ್ತಾನೆ. ಇದು ಭಾರತೀಯ ಸಾಂಪ್ರದಾಯಿಕ ಭಾವನೆಯಾಗಿದೆ. ಧರ್ಮಾನುಸಾರವಾಗಿ ಅದನ್ನು ಮಾಡಿದರೆ, ಎಲ್ಲ ಕಾರ್ಯಗಳನ್ನು ಮಾಡಬಹುದು ಮತ್ತು ಅದನ್ನು ಸರಿಯಾದ ಮಾರ್ಗದಲ್ಲಿ ಮಾಡಿದರೆ ನಾವು ದೇವರೆಡೆಗೆ ಸಾಗುವುದನ್ನು ಅಥವಾ ಆಧ್ಯಾತ್ಮಿಕ ಜ್ಞಾನದ ಮತ್ತು ಜೀವನದ ಪ್ರವೇಶಕ್ಕೆ ಯಾವುದೂ ಅಡ್ಡಿಮಾಡಲಾರದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/248–49**

**ಆಧ್ಯಾತ್ಮಿಕ ಪರಿಪೂರ್ಣತೆಯ ಕಡೆಗೆ ಒಂದು ಮಾರ್ಗ**

ಬಹಳಷ್ಟು ಜನರಿಗೆ ಅವಶ್ಯವಾಗಿರುವ ಸನ್ಯಾಸತ್ವದ ಆದರ್ಶವೂ ಸಹ ಸಹಜವಾಗಿ ಅಲ್ಲಿದೆ ಮತ್ತು ಅದು ಆಧ್ಯಾತ್ಮಿಕ ಶ್ರೇಣಿಯಲ್ಲಿ ತನ್ನ ಸ್ಥಾನವನ್ನು ಹೊಂದಿದೆ. ವೈರಾಗ್ಯದ ಜೀವನ ಸಾಗಿಸದಿದ್ದರೆ ಅಥವಾ ಒಬ್ಬ ವಿರಕ್ತನ ಜೀವನದಂತೆ ಅತ್ಯಂತ ಅಲ್ಪವಾದ ಜೀವನವನ್ನು ಸಾಗಿಸದಿದ್ದರೆ ಅವನು ಆಧ್ಯಾತ್ಮಿಕವಾಗಿ ಪರಿಪೂರ್ಣನಾದ ವ್ಯಕ್ತಿ ಅಲ್ಲವೆಂದು ನಾನು ಹೇಳುತ್ತೇನೆ. ಸಂಪತ್ತಿನ ಆಸೆ ಮತ್ತು ಹಣ ಮಾಡುವಿಕೆ ಅವನ ಸ್ವಭಾವದಲ್ಲಿ ಇರಬಾರದು, ಈ ಎಲ್ಲ ಸಂಗತಿಗಳನ್ನು ತನ್ನ ಪ್ರಜ್ಞೆಯಿಂದ ತ್ಯಜಿಸಬೇಕು. ಆಧ್ಯಾತ್ಮಿಕ ಅಥವಾ ಅದರ ಹಾಗೆ ಇರುವ ಪರಿಪೂರ್ಣತೆಗೆ ಸನ್ಯಾಸಿ ಮಾರ್ಗದ ಜೀವನವನ್ನು ಅನಿವಾರ್ಯವೆಂದು ನಾನು ಭಾವಿಸುತ್ತೇನೆ. ಆಧ್ಯಾತ್ಮಿಕ ಸ್ವ–ಪಾಂಡಿತ್ಯ ಮತ್ತು ಆಧ್ಯಾತ್ಮಿಕ ಸ್ವ–ಸಮರ್ಪಣೆಯ ಮಾರ್ಗ ಮತ್ತು ದೈವೀ ಅರ್ಪಣೆಯ ಮಾರ್ಗಗಳೂ ಇವೆ. ಯಾವುದೇ ರೀತಿಯ ಕಾರ್ಯ ಅಥವಾ ದೇವರಿಂದ ಅಪೇಕ್ಷಿತ ಕಾರ್ಯ ಮಾಡುವಾಗ ಅಹಂ ಮತ್ತು ಬಯಕೆಯನ್ನು ತ್ಯಜಿಸಬೇಕು. ಅದು ಹಾಗಿಲ್ಲದಿದ್ದರೆ, ಭಾರತದಲ್ಲಿ ವಿದುರ ಅಥವಾ ಜನಕರಂಥ ಶ್ರೇಷ್ಠ ಆಧ್ಯಾತ್ಮಿಕ ಪುರುಷರು ಇರುತ್ತಿರಲಿಲ್ಲ, ಹಾಗೆಯೇ ಕೃಷ್ಣನೂ ಇರುತ್ತಿರಲಿಲ್ಲ ಅಥವಾ ಕೃಷ್ಣನು ಮಥುರೆಯ ಮತ್ತು ದ್ವಾರಕೆಯ ಪ್ರಭು ಅಥವಾ ಕುರುಕ್ಷೇತ್ರದ ರಥಿಕನಾಗುತ್ತಿರಲಿಲ್ಲ. ಆದರೆ ಅವನು ಇನ್ನೊಬ್ಬ ತಪಸ್ವಿ. ಭಾರತದ ಧರ್ಮ ಗ್ರಂಥಗಳು ಮತ್ತು

ಸಂಪ್ರದಾಯಗಳು, ಜೀವನದ ಸನ್ಯಾಸದ ಆಧ್ಯಾತ್ಮಿಕ ಜೀವನಕ್ಕೆ ಮತ್ತು ಕ್ರಿಯೆಯ ಆಧ್ಯಾತ್ಮಿಕ ಜೀವನಕ್ಕೆ ಅವಕಾಶವನ್ನು ಕೊಟ್ಟಿದೆ. ಭಾರತದ ಸಂಪ್ರದಾಯವೇ ಏಕಮಾತ್ರವೆಂದು ಯಾರೂ ಹೇಳಬಾರದು ಮತ್ತು ಎಲ್ಲ ಜೀವನ ಮತ್ತು ಎಲ್ಲ ರೀತಿಯ ಕಾರ್ಯಗಳ (ಸರ್ವ ಕರ್ಮ) ಸ್ವೀಕೃತಿ ಭಾರತೀಯವಲ್ಲವೆಂದು ಹೇಳಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/250**

**ಕಾಯಕದಲ್ಲಿ ದೇವರನ್ನು ಸ್ಮರಿಸುವುದು**

ಮೊದಲಿಗೆ, ಕಾಯಕದಲ್ಲಿ ದೈವೀ ಉಪಸ್ಥಿತಿಯನ್ನು ಸ್ಮರಿಸುವುದು ಅಷ್ಟು ಸುಲಭವಲ್ಲ; ಆದರೆ, ಕಾರ್ಯವಾದ ತಕ್ಷಣ ನಾವು ಆ ದೈವೀ ಉಪಸ್ಥಿತಿಯ ಭಾವನೆಯನ್ನು ಪುನಃಶ್ಚೇತನಗೊಳಿಸಿದರೆ ಸಾಕು. ಕಾಯಕದಲ್ಲಿದ್ದಾಗಲೂ ಆ ಉಪಸ್ಥಿತಿಯ ಭಾವನೆಯು ಯಾಂತ್ರಿಕವಾಗಿಬಿಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/258–59**

ನೀನು ವಿವರಿಸುವ ತೊಂದರೆಗಳು ಬಹಳಷ್ಟು ಜನರಿಗೆ ಅತ್ಯಂತ ಸಾಮಾನ್ಯವಾದ ಸಂಗತಿಗಳು. ತುಲನಾತ್ಮಕವಾಗಿ, ನೆನಪಿನಲ್ಲಿಡುವುದು ಮತ್ತು ಧ್ಯಾನದಲ್ಲಿ ಪ್ರಶಾಂತವಾಗಿ ಕುಳಿತಿದ್ದಾಗ ಜಾಗೃತವಾಗಿರುವುದು ನಮಗೆ ಸುಲಭವಾಗಿದೆ; ಆದರೆ ನಾವು ಕಾರ್ಯದಲ್ಲಿ ಮಗ್ನರಾಗಿದ್ದಾಗ ಅದು ಕಷ್ಟವೆನಿಸುತ್ತದೆ. ಕಾಯಕದಲ್ಲಿ ಸ್ಮರಿಸುವಿಕೆ ಹಾಗೂ ಪ್ರಜ್ಞೆಗಳು ಪ್ರಮಾಣಮಾನದಿಂದ ಬರಬೇಕು, ಅವುಗಳನ್ನು ಒಡನೆಯೆ ಹೊಂದಲು ಆಶಿಸಲೇಬಾರದು; ಅವೆಲ್ಲವನ್ನೂ ಒಡನೆಯೆ ಹೊಂದಲು ಯಾರಿಗೂ ಆಗದು. ಅದು ಎರಡು ವಿಧಗಳಲ್ಲಿ ಬರುತ್ತದೆ – ಮೊದನೆಯದು, ನಾವು ಯಾವುದೇ ಕಾಯಕ ಮಾಡುವಾಗ ಶ್ರೀಮಾತೆಯವರನ್ನು ಸ್ಮರಿಸುವುದನ್ನು ಅಭ್ಯಾಸ ಮಾಡಿಕೊಳ್ಳಬೇಕು. ಹಾಗೆ ಮಾಡುವುದರಿಂದ ನಮ್ಮ ಸ್ವಭಾವಕ್ಕೆ ಅದು ನಿಧಾನವಾಗಿ ಅಭ್ಯಾಸವಾಗುತ್ತದೆ. ಎರಡನೆಯದು – ಧ್ಯಾನ ಮಾಡುವುದರಿಂದ ಅಂತಃಪ್ರಜ್ಞೆಯು ಅಭಿವೃದ್ಧಿ ಹೊಂದಲು ಪ್ರಾರಂಭಿಸುತ್ತದೆ (ಕೆಲ ಸಮಯದ ನಂತರ) ನಂತರ ಹೆಚ್ಚು–ಹೆಚ್ಚು ಯಾಂತ್ರಿಕವಾಗಿ ಶಾಶ್ವತವಾಗುತ್ತದೆ. ನಾವು ಇದನ್ನು ಕಾರ್ಯಗತವಿರುವ ಬಾಹ್ಯ ಪ್ರಜ್ಞೆಯಿಂದ ಒಂದು ಭಿನ್ನವಾದ

ಪ್ರಜ್ಞೆಯೆಂದು ಭಾವಿಸುತ್ತೇವೆ. ಮೊದಲಿಗೆ, ನಾವು ಕಾರ್ಯ ಮಾಡುತ್ತಿದ್ದಾಗ, ಈ ಭಿನ್ನವಾದ ಪ್ರಜ್ಞೆಯು ಅನುಭವಕ್ಕೆ ಬರುವುದಿಲ್ಲ. ಆದರೆ ಕಾರ್ಯವನ್ನು ನಿಲ್ಲಿಸಿದ ತಕ್ಷಣ ಅದು ಹಿಂಬದಿಯಿಂದ ಯಾವಾಗಲೂ ಗಮನಿಸುತ್ತಿರುವುದನ್ನು ನಾವು ಅನುಭವಿಸುತ್ತೇವೆ; ನಂತರ, ನಮ್ಮ ಸ್ವಂತ ಎರಡು ಭಾಗಗಳಿದ್ದಂತೆ ಅದು ಕಾಯಕದಲ್ಲಿಯೇ ಅನುಭವಕ್ಕೆ ಬರಲು ಪ್ರಾರಂಭಿಸುತ್ತದೆ – ಒಂದು, ಹಿಂಬದಿಯಿಂದ ಗಮನಿಸುತ್ತ ಮತ್ತು ಶ್ರೀಮಾತೆಯವರನ್ನು ನೆನೆಯುತ್ತ ಅವರಿಗೆ ಸಮರ್ಪಿಸಿಕೊಳ್ಳುತ್ತ ಇರುತ್ತದೆ ಮತ್ತು ಇನ್ನೊಂದು ಕಾರ್ಯಗತವಾಗಿರುತ್ತದೆ. ಇದು ಸಂಭವಿಸಿದಾಗ, ನೈಜ ಪ್ರಜ್ಞೆಯೊಂದಿಗೆ ಕಾರ್ಯ ಮಾಡುವುದು ಹೆಚ್ಚು-ಹೆಚ್ಚು ಸುಲಭವಾಗುತ್ತದೆ.

ಇದು ಮಿಕ್ಕೆಲ್ಲಕ್ಕೂ ಅನ್ವಯಿಸುತ್ತದೆ. ನಾವು ಮಾತನಾಡುವ ಎಲ್ಲ ಸಂಗತಿಗಳನ್ನು ಅಂತಃಪ್ರಜ್ಞೆಯ ಬೆಳವಣಿಗೆಯಿಂದ ಸರಿಮಾಡಬಹುದು. ಉದಾಹರಣೆಗೆ, ಕಾರ್ಯಕ್ಕಾಗಿ ಉತ್ಸಾಹವಿರುವುದರಿಂದ ಅದು ಆ ಪುರುಷನ ಭಾಗವಾಗಿದೆ, ಇನ್ನೊಬ್ಬನು ಶಾಂತತೆಯ ಒತ್ತಡವನ್ನು ಅನುಭವಿಸುತ್ತಾನೆ ಮತ್ತು ಕೆಲಸದಲ್ಲಿ ಆಸಕ್ತಿ ತೋರುವುದಿಲ್ಲ. ಆ ಸಮಯದಲ್ಲಿ ಯಾವುದು ಬರುತ್ತದೋ ಅದರ ಮೇಲೆ ನಿಮ್ಮ ಮನಃಸ್ಥಿತಿ ಅವಲಂಬಿತವಾಗಿದೆ – ಇದು ಎಲ್ಲ ಜನರಿಗೂ ಅನ್ವಯಿಸುತ್ತದೆ. ಈ ಎರಡನ್ನೂ ಸೇರಿಸುವುದು ಕಷ್ಟಕರ, ಆದರೆ ಅವೆರಡೂ ಸಮನ್ವಯಗೊಳ್ಳುವ ಸಮಯ ಬರುತ್ತದೆ – ಒಂದು ಆಂತರಿಕ ಏಕಾಗ್ರತೆಯ ಸಮಸ್ಥಿತಿಯಲ್ಲಿ ಉಳಿಯುತ್ತದೆ, ಇನ್ನೊಂದು ಅದರ ಕಾರ್ಯದ ಕಡೆಗೆ ನೂಕುವಿಕೆಯಿಂದ ಬೆಂಬಲಿಸಲ್ಪಡುತ್ತದೆ. ಪುರುಷನಲ್ಲಿನ ಈ ಎಲ್ಲ ಹೊಂದಿಕೆಯಾಗದ ಸಂಗತಿಗಳ ಸೌಹಾರ್ದಗೊಳಿಸುವ ಮತ್ತು ಪರಿವರ್ತನೆಯ ಸ್ವಭಾವ ಸಾಧನೆಯ ಕೆಲಸವಾಗಿದೆ. ಆದುದರಿಂದ ನಿಮ್ಮಲ್ಲಿ ಈ ಸಂಗತಿಗಳನ್ನು ಗಮನಿಸಿ, ಎದೆಗುಂದುವ ಕಾರಣವಿಲ್ಲ. ಇವೆಲ್ಲವನ್ನೂ ಸಾಧಕನ ನಿರಂತರ ಒಪ್ಪಿಗೆಯೊಂದಿಗೆ ಮತ್ತು ಕರೆಯೊಂದಿಗೆ ಆಂತರಿಕ ಬಲದ ಕ್ರಿಯೆಯಿಂದ ವ್ಯವಸ್ಥೆ ಮಾಡಬಹುದು. ಅದನ್ನು ಅವನು (ಸಾಧಕನು) ಖುದ್ದಾಗಿ ಮಾಡಲು ಸಾಧ್ಯವಾಗಲಾರದು, ಆದರೆ ಆಂತರ್ಯದಲ್ಲಿ ಕಾರ್ಯ ಮಾಡುತ್ತಿರುವ ದಿವ್ಯಶಕ್ತಿಯಿಂದ ಅದನ್ನು ಮಾಡಬಹುದು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/259–60**

ನಿಯತವಾಗಿರುವುದು ಒಂದು ದೊಡ್ಡ ಬಲ, ಅದರಿಂದ ನಾವು ನಮ್ಮ ಸಮಯದ ಮತ್ತು ನಮ್ಮ ಚಲನಗಳ ಯಜಮಾನರಾಗುತ್ತೇವೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/277 – ಶ್ರೀ ಅರವಿಂದರು**

**ದಿವ್ಯ ಪ್ರಭಾವವನ್ನು ಅಥವಾ ಶಕ್ತಿಯನ್ನು ಪಡೆದುಕೊಳ್ಳುವುದು**

ದಿವ್ಯ ಶಕ್ತಿಯನ್ನು ಪಡೆದುಕೊಳ್ಳಲು ಮತ್ತು ಅದು ನಿಮ್ಮ ಬಾಹ್ಯ ಜಗತ್ತಿನ ಸಂಗತಿಗಳ ಮುಖಾಂತರ ಕಾರ್ಯಗತವಾಗಲು ಸಾಧ್ಯವಾಗಬೇಕಾದರೆ ಮೂರು ಆವಶ್ಯಕ ಷರತ್ತುಗಳಿವೆ:

1. ಶಾಂತತೆ, ಸಮಾನತೆ – ಘಟಿಸುವ ಯಾವುದೇ ಸಂಗತಿಗಳಿಂದ ವಿಚಲಿತರಾಗದೆ ಇರುವುದು, ಮನಸ್ಸನ್ನು ನಿಶ್ಚಲ ಹಾಗೂ ದೃಢವಾಗಿ ಇರಿಸುವುದು, ಶಕ್ತಿಗಳ ಆಟಗಳನ್ನು ನೋಡುತ್ತಿರುವುದು, ಆದರೆ ತಾನು ಮಾತ್ರ ಪ್ರಶಾಂತವಾಗಿರುವುದು.

2. ಸಂಪೂರ್ಣ ನಂಬಿಕೆ – ಒಳ್ಳೆಯದಕ್ಕಾಗಿ ಏನಾಗಬೇಕೊ ಅದು ಸಂಭವಿಸುವುದೆಂಬ ನಂಬಿಕೆ, ಆದರೂ ನಮ್ಮನ್ನು ನಾವು ಒಂದು ಸತ್ಯಸಾಧನವನ್ನಾಗಿಸಿಕೊಂಡರೆ, ಫಲವು ದೈವೀ ಬೆಳಕಿನಿಂದ ನಿರ್ದೇಶಿಸಲ್ಪಡುವ ಒಂದು ಕಾರ್ಯವನ್ನು ಮಾಡಬೇಕೆಂದು ನೋಡುತ್ತದೆ – ಕರ್ತವ್ಯ – ಕರ್ಮ.

3. ಗ್ರಹಣಶಿಲತೆ – ದೈವೀ ಶಕ್ತಿಯನ್ನು ಸ್ವೀಕರಿಸಲು ಮತ್ತು ಅದರ ಇರುವಿಕೆಯನ್ನು ಅನುಭವಿಸಲು ಮತ್ತು ಅದರಲ್ಲಿ ಶ್ರೀಮಾತೆಯವರ ಇರುವಿಕೆಯನ್ನು ಅನುಭವಿಸಲು ಹಾಗೂ ಸದಾ ಕಾರ್ಯಗತವಾಗಲು, ನಮ್ಮ ದೃಷ್ಟಿಯನ್ನು, ಇಚ್ಛೆಯನ್ನು ಮತ್ತು ಕ್ರಿಯೆಯನ್ನು ನಿರ್ದೇಶಿಸಲು ಗ್ರಹಣಶೀಲತೆ ಬೇಕು. ಒಂದು ವೇಳೆ ಈ ಪ್ರಭಾವವನ್ನು ಮತ್ತು ಇರುವಿಕೆಯನ್ನು ಅನುಭವಿಸಿದ್ದೇ ಆದರೆ ಮತ್ತು ಈ ಮೃದುತ್ವವನ್ನು (ಯಾವುದೇ ಪರಕೀಯ ವಸ್ತುವಿಲ್ಲದೆ) ಕ್ರಿಯೆಯಲ್ಲಿರುವ ಪ್ರಜ್ಞೆಯ ಅಭ್ಯಾಸ ಮಾಡಿಕೊಂಡರೆ – ಕೊನೆಯ ಫಲಿತಾಂಶ ನಿಶ್ಚಿತ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/266**

## ನಿಯಮಬದ್ಧತೆ ಮತ್ತು ಲಯಬದ್ಧತೆ

ಒಂದು ನಿಯಮ ಮತ್ತು ಲಯ ಇಲ್ಲದೆ ಭೌತಿಕ ಜೀವನ ಇರಲಾರದು. ಈ ನಿಯಮ ಬದಲಾದಾಗ, ಅದು ಆಂತರಿಕ ಬೆಳವಣಿಗೆಗೆ ವಿಧೇಯವಾಗಿರಬೇಕು. ಆದರೆ, ಬಾಹ್ಯ ಬೆಡಗಿನ ಸಲುವಾಗಿ ಅಲ್ಲ. ಅದು, ತನ್ನ ಸ್ವಂತಕ್ಕಾಗಿ ಬಾಹ್ಯ ಬದಲಾವಣೆಯನ್ನು ಮತ್ತು ನಾವಿನ್ಯತೆಯನ್ನು ಬಯಸುವ ನಿಮ್ನ ಸ್ಥರದ ಪ್ರಾಣಿಕ ಸ್ವಭಾವದ ಮೇಲ್ಮೈನ ಒಂದು ನಿಶ್ಚಿತ ಭಾಗ ಮಾತ್ರ.

ನಿರಂತರವಾದ ಆಂತರಿಕ ಬೆಳವಣಿಗೆಯಿಂದ ಒಂದು ನಿರಂತರವಾದ ಹೊಸತನ್ನು ಮತ್ತು ಜೀವನದಲ್ಲಿ ಆಸಕ್ತಿಯನ್ನು ಕಂಡುಕೊಳ್ಳಬಹುದು. ಇದಕ್ಕಿಂತ ತೃಪ್ತಿಕರವಾದ ಮಾರ್ಗ ಬೇರೊಂದಿಲ್ಲ.

*

ಬಹುತೇಕ ಭೌತಿಕ ಸಂಗತಿಗಳಲ್ಲಿ, ಅವುಗಳೊಡನೆ ವ್ಯವಹರಿಸಲು ನೀವು ಒಂದು ಕಾರ್ಯಕ್ರಮವನ್ನು ಗೊತ್ತುಪಡಿಸಿಕೊಳ್ಳಬೇಕು, ಇಲ್ಲದಿದ್ದರೆ ಎಲ್ಲವೂ ಗೊಂದಲ ಹಾಗೂ ಅಶಿಸ್ತಿನ ಸಾಗರವಾಗಿಬಿಡುತ್ತದೆ. ನಿಯಮಗಳಿಲ್ಲದೆ, ಸರಿಯಾದ ಮಾರ್ಗದಲ್ಲಿ ಪ್ರಾಪಂಚಿಕ ಸಂಗತಿಗಳನ್ನು ನಿಭಾಯಿಸಲು (ಜನರು ಅವುಗಳೊಡನೆ ವ್ಯವಹರಿಸಲು ಸಾಕಷ್ಟು ಬೆಳವಣಿಗೆಯನ್ನು ಹೊಂದದೆ ಇದ್ದಾಗ) ನಿಶ್ಚಿತವಾದ ನಿಯಮಗಳನ್ನು ಮಾಡಿಕೊಳ್ಳಬೇಕಾಗುತ್ತದೆ. ಆದರೆ, ಆಂತರಿಕ ಬೆಳವಣಿಗೆಯ ಮತ್ತು ಸಾಧನೆಯ ವಿಷಯಗಳಲ್ಲಿ ಸಾಕಷ್ಟು ವಿವರವಾದ ಒಂದು ಸ್ಪಷ್ಟವಾದ ಯೋಜನೆಯನ್ನು ತಯಾರಿಸುವುದು ಅಸಾಧ್ಯ. ಹಾಗಿದ್ದಾಗ, "ಪ್ರತಿ ಸಲವೂ ಇಲ್ಲಿ, ಈ ಮಾರ್ಗದಲ್ಲಿ, ಆ ಮಾರ್ಗದಲ್ಲ, ನೀವು ನಿಲ್ಲಬೇಕಾಗುತ್ತದೆ" ಎಂದು ಹೇಳಬೇಕಾಗುತ್ತದೆ. ಸಂಗತಿಗಳು ಎಷ್ಟು ಕಗ್ಗಂಟಾಗುತ್ತವೆ ಮತ್ತು ಕಠಿಣವಾಗುತ್ತವೆ ಎಂದರೆ, ಏನನ್ನೂ ಮಾಡಲು ಸಾಧ್ಯವಾಗುವುದಿಲ್ಲ; ಅಲ್ಲಿ ನೈಜ ಮತ್ತು ಪರಿಣಾಮಕಾರಿ ಚಲನೆ ಇರುವುದಿಲ್ಲ.

*

ಭೌತಿಕ ಸಂಗತಿಗಳಲ್ಲಿ ನಿಯಬದ್ಧತೆ, ಲಯಬದ್ಧತೆ ಮತ್ತು ಸಂಯೋಜನೆಗಳು ದಕ್ಷತೆಯ ಮತ್ತು ಪರಿಪೂರ್ಣತೆಯ ಅವಿಭಾಜ್ಯ ಅಂಗಗಳು ಮತ್ತು ಸಾಧನವನ್ನು ಕೊಟ್ಟಂಥ ಕಾರ್ಯಕ್ಕಾಗಿ ಹೆಚ್ಚು ಯೋಗ್ಯನನ್ನಾಗಿ ಮಾಡುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/276**

[ಶಿಸ್ತು:] ಶಿಸ್ತು ಎಂದರೆ, ಸತ್ಯದ ಮಾನದಂಡಕ್ಕೆ ಅಥವಾ ಒಂದು ನಿಯಮಕ್ಕೆ ಅಥವಾ ಧರ್ಮಕ್ಕೆ ಅಥವಾ ಉನ್ನತ ಅಧಿಕಾರಿಗೆ ವಿಧೇಯನಾಗಿರುವುದಕ್ಕೆ ಅಥವಾ ಬುದ್ಧಿಶಕ್ತಿ ಹಾಗೂ ಚುರುಕು ಸಂಕಲ್ಪಕ್ಕೆ ಅನುಸಾರವಾಗಿ ಕಾರ್ಯ ಮಾಡುವುದು, ಆದರೆ ನಮ್ಮ ಸ್ವಂತ ಇಷ್ಟದಂತೆ, ಪ್ರಾಣಿಕ ಪ್ರೇರಣೆಯಂತೆ ಮತ್ತು ಬಯಕೆಗಳಂತೆ ಕಾರ್ಯ ಮಾಡುವುದಲ್ಲ. ಯೋಗದಲ್ಲಿ, ಗುರುವಿಗೆ ಅಥವಾ ದೈವಕ್ಕೆ ಮತ್ತು ಗುರುವಿನ ಆದೇಶದ ಸತ್ಯದ ನಿಯಮಕ್ಕೆ ವಿಧೇಯನಾಗಿರುವುದು ಶಿಸ್ತಿನ ತಳಪಾಯವಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/278**

## ಅನ್ಯರ ದೃಷ್ಟಿಕೋನ

ಅನ್ಯರ ದೃಷ್ಟಿಕೋನವನ್ನು ನೋಡಲು ಸಾಧ್ಯವಾಗಬೇಕಾದರೆ ಮತ್ತು ಅವರ ಸ್ವಭಾವಕ್ಕೆ ಅವಕಾಶಕೊಡಬೇಕಾದರೆ – ಅತಿ ಕಟುವಾಗಿ, ಅಧಿಕೃತವಾಗಿ ಅಥವಾ ಬಲವಂತವಾಗಿ ಅಲ್ಲದೆಯೂ ಅಥವಾ ತೀರಾ ದುರ್ಬಲವೂ ಹಾಗೂ ಹೊಂದಿಕೊಳ್ಳುವ ಅಥವಾ ತಾಳಿಕೊಳ್ಳುವ ಸ್ವಭಾವ ಇರದೆಯೂ, ಆದರೂ ಸ್ಥಿರವಾಗಿದ್ದಾಗ (ಸ್ಥಿರತೆಯನ್ನು ಜಾಣ್ಮೆ ಹಾಗೂ ಕರುಣೆಯೊಂದಿಗೆ ಸೇರಿಸಿದಾಗ) ಇನ್ನೊಬ್ಬರೊಂದಿಗೆ ಸ್ಥಾನದಲ್ಲಿ ಮತ್ತು ತನ್ನ ಅಧಿಕಾರಕ್ಕೆ ಒಳಗಾದ ತನ್ನ ಕೆಳಗಿನವರಂತೆ ಇರುವುದು ನಮಗೆ ಅತಿ ಅವಶ್ಯಕ. ಸ್ಥಾನಪಲ್ಲಟವಾದಾಗ ಅನಾವಶ್ಯಕವಾಗಿ ಅಲ್ಲಿ ಉನ್ನತ ಅಧಿಕಾರಿಗಳೊಂದಿಗೆ ಘರ್ಷಣೆ ಅಥವಾ ತಿಕ್ಕಾಟ ಬೇಕಾಗಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/282**

## ಸಾಮರಸ್ಯ

ಯಾವುದೇ ಬಯಕೆಯ ಸಾಮರಸ್ಯವನ್ನು ಅಥವಾ ಕಾರ್ಯದಲ್ಲಿ ವಿರೋಧವನ್ನು ಅಥವಾ ಯಾವುದೇ ಅಹಿತಕರ ಘಟನೆಯನ್ನು ಪ್ರಭಲವಾಗಿ ಅನುಭವಿಸುವ ಪ್ರಾಣಿಕ ಸ್ವಭಾವದಲ್ಲಿ ತೊಂದರೆ ಹೆಚ್ಚಾಗುವುದು ಅಧಿಕವಾದ ಸಂವೇದನಾಶೀಲತೆಯಿಂದ. ಅದು ಬಂದಿತೆಂದರೆ, ಅದನ್ನು ಒಂದು ಸ್ವಂತ ವಿರೋಧವೆಂಬಂತೆ ಅನುಭವಿಸಲು

ನಾವು ಕುಶಲರಾಗುತ್ತೇವೆ ಮತ್ತು ಇನ್ನೊಂದೆಡೆ ಇಂತಹದೆ ಅನುಭವವೂ ಸಹ ಉದ್ಭವಿಸುತ್ತದೆ. ಆದ್ದರಿಂದ ತೊಂದರೆಯು ವೃದ್ಧಿಸುತ್ತದೆ ಮತ್ತು ವಿವಾದಕ್ಕೆ ಎಡೆಮಾಡಿಕೊಡುತ್ತದೆ. ವಾಸ್ತವವಾಗಿ, ತೊಂದರೆಯು ಸನ್ನಿವೇಶಗಳಿಂದ ಉದ್ಭವಿಸುತ್ತವೆ. ಉದಾಹರಣೆಗೆ, B.S. (Building Service) ತನ್ನ ಅತಿ ಕಡಿಮೆಯಾದ ಸಿಬ್ಬಂದಿಯೊಂದಿಗೆ ಮತ್ತು ಕೆಲಸದ ಅವಸರವಿದ್ದಾಗ ತನ್ನ ಎಲ್ಲ ಸಿಬ್ಬಂದಿಯನ್ನು ಉಪಯೋಗಿಸಿಕೊಳ್ಳುವಾಗ ನಿನಗೆ ಅಲ್ಲಿ ಅವಕಾಶ ಕಲ್ಪಿಸಿಕೊಡುವುದು ಮೊದಲಿಗಿಂತ ತೊಂದರೆಯಾಗಿ ಕಾಣಬಹುದು. ಅಥವಾ ನಿನ್ನ ದೃಷ್ಟಿಕೋನದೊಂದಿಗೆ ಒಪ್ಪಂದವಾಗದ, ಇನ್ನೊಬ್ಬರ ದೃಷ್ಟಿಕೋನದ ಅನುಸಾರವಾಗಿ ನಡೆದುಕೊಳ್ಳುವ ಜನರಿಂದ ತೊಂದರೆಯು ಬರಬಹುದು. ಅಥವಾ, ಒಬ್ಬ ವ್ಯಕ್ತಿಯು ತನ್ನ ಸ್ವಂತ ಯೋಚನೆಗಳನ್ನು ಬೆನ್ನು ಹತ್ತುವುದರಿಂದ ತೊಂದರೆ ಬರಬಹುದು. ಅಲ್ಲಿಯ ಎಲ್ಲದರಲ್ಲೂ ವೈಯಕ್ತಿಕ ಅನುಭವ ಇರಲಾರದು ಮತ್ತು ಆ ದೃಷ್ಟಿಕೋನವನ್ನು (ನಮ್ಮ ಸ್ವಂತ ಅಥವಾ ಇನ್ನೊಬ್ಬರ ನಿಲುವಿನಿಂದ ಹೊಂದುವುದು) ಅವಶ್ಯಕವಾಗಿದೆ. ಈ ವಿಶಾಲ ದೃಷ್ಟಿಕೋನ, ಸ್ಥಿರ ಹಾಗೂ ಅವೈಯಕ್ತಿಕತೆ ಯೋಗ ಪ್ರಜ್ಞೆಯಲ್ಲಿ ಬೇಕಾಗುತ್ತದೆ. ಇದನ್ನು ಹೊಂದಿದ ಮೇಲೆ, ಯಾವುದಕ್ಕೆ ಪಟ್ಟು ಹಿಡಿಯಬೇಕೊ ಅದಕ್ಕಾಗಿ ಸ್ಥೈರ್ಯದಿಂದ ಪಟ್ಟು ಹಿಡಿಯಬೇಕು. ಹೀಗೆ ಮಾಡುವಾಗ, ವೈಯಕ್ತಿಕ ಅನುಭವದ ಯಾವುದೇ ವಿವಾದ, ಅವಕಾಶವನ್ನು ತೆಗೆಯುವಂಥ ಇನ್ನೊಂದರ ಪರಿಗಣನೆ ಹಾಗೂ ತಿಳುವಳಿಕೆ ಇರಬೇಕು. ಸ್ವಾಭಾವಿಕವಾಗಿ, ಇನ್ನೊಬ್ಬರು ಸೂಕ್ತವಲ್ಲದಿದ್ದಾಗಲೂ ಕೋಪಗೊಳ್ಳಬಾರದು. ಆಗ ಅದು ಪೂರ್ತಿಯಾಗಿ ಅವನ ತಪ್ಪಾಗುತ್ತದೆ ಮತ್ತು ಅದು ಅವನ ಮೇಲೆ ತಿರುಗಿ ಬೀಳುತ್ತದೆ. ಇಲ್ಲಿ ನಾವು ಒಂದು ಅವಶ್ಯಕವಾದ ಬದಲಾವಣೆಯನ್ನು ಗಮನಿಸುತ್ತೇವೆ. ನಿಯತ್ತು, ಪ್ರಮಾಣಿಕತೆ, ಇಚ್ಛಾಶಕ್ತಿ ಮತ್ತು ಕಾರ್ಯದಲ್ಲಿನ ಗುಣಗಳು ನಿಮ್ಮಲ್ಲಿ ಹೇರಳವಾಗಿದೆ – ಅಂತಃಪುರುಷನಲ್ಲಿ ಆಗಲೇ ನೆಲೆಸಿರುವಂಥ ಒಂದು ಪೂರ್ಣ ಸ್ತಬ್ಧವಾದ ಮತ್ತು ಸಮಾನತೆ ಮಾತ್ರವಲ್ಲದೆ, ಬಾಹ್ಯ ನರನಾಡಿಗಳಲ್ಲೂ ಇರುವಂಥ ಸಂಗತಿಯನ್ನು ನೀವು ಪೂರ್ತಿಯಾಗಿ ಪಡೆದುಕೊಳ್ಳಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/278–79**

**ಕಾರ್ಯದ ಬಗ್ಗೆ ಯೋಚಿಸುತ್ತಿರುವುದು**

ಕಾರ್ಯವನ್ನು ಮಾಡುವಾಗ ಅದರ ಬಗ್ಗೆ ಮಾತ್ರ ಯೋಚಿಸಿ, ಅದಕ್ಕೂ ಮುಂಚೆಯೂ ಅಲ್ಲ, ನಂತರವೂ ಅಲ್ಲ.

ಮುಕ್ತಾಯಗೊಳಿಸಿದ ಕಾರ್ಯದ ಹಿಂದೆ ಮನಸ್ಸನ್ನು ಹೋಗಲು ಬಿಡಬೇಡಿ. ಅದು ಭೂತಕಾಲಕ್ಕೆ ಸಂಬಂಧಿಸಿದ್ದಾಗಿದೆ ಮತ್ತು ಅದರ ಬಗ್ಗೆ ಯೋಚಿಸುವುದು ಸಫಲತೆಯ ನಷ್ಟ. ಮುಂದೆ ಮಾಡಬೇಕಾಗಿರುವ ಕೆಲಸದ ಬಗ್ಗೆ ನಿಮ್ಮ ಮನಸ್ಸು ಶ್ರಮ ತೆಗೆದುಕೊಳ್ಳಲು ಬಿಡಬೇಡಿ. ನಿಮ್ಮಲ್ಲಿ ಕಾರ್ಯಗತವಿರುವ ಪ್ರಭಾವವು ಅದನ್ನು ಸಮಯ ಬಂದಾಗ ಗಮನಿಸುತ್ತದೆ.

ಮನಸ್ಸಿನ ಈ ಎರಡೂ ಅಭ್ಯಾಸಗಳು ಭೂತಕಾಲದ ಪರಿವರ್ತನೆಯ ಶಕ್ತಿಯನ್ನು ತೆಗೆಯಲು ಬಲವಂತ ಮಾಡುತ್ತಿರುವ ಒಂದು ಕಾರ್ಯಕ್ಕೆ ಸಂಬಂಧಿಸಿದೆ. ಅವುಗಳಲ್ಲಿಯ ಭೌತಿಕ ಮನಸ್ಸಿನ ಜಿಗುಟುತನವು ನಿಮ್ಮ ದಣಿವಿಗೆ ಹಾಗೂ ಆಯಾಸಕ್ಕೆ ಕಾರಣವಾಗಿದೆ. ನೀವು ನಿಮ್ಮ ಮನಸ್ಸನ್ನು ಅದರ ಚಟುವಟುಕೆಗೆ ಬೇಕಾದಾಗ ಮಾತ್ರ ಕಾರ್ಯ ಮಾಡಲು ಬಿಟ್ಟರೆ, ದಣಿವು ಕಡಿಮೆಯಾಗುತ್ತದೆ ಮತ್ತು ಮಾಯವಾಗುತ್ತದೆ. ಇದು ಅತಿಮಾನಸ ಕ್ರಿಯೆಯ ಭೌತಿಕ ಮನಸ್ಸನ್ನು ಸ್ವಾಧೀನಪಡಿಸಿಕೊಳ್ಳುವಾಗಿನ ಪರಿವರ್ತನಾ ಚಲನೆಯಾಗಿದೆ ಮತ್ತು ಅದರಲ್ಲಿ ಬೆಳಕಿನ ಸಹಜವಾದ ಕ್ರಿಯೆಯನ್ನು ತರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/287**

**ಭೌತಿಕ ಸಂಗತಿಗಳೊಡನೆ ವ್ಯವಹರಿಸುವುದು**

ಪ್ರಾಪಂಚಿಕ ಸಂಗತಿಗಳನ್ನು ಉಪೇಕ್ಷಿಸಬಾರದು – ಅವುಗಳಿಲ್ಲದೆ ಭೌತಿಕ ಜಗತ್ತಿನಲ್ಲಿ ಅಭಿವ್ಯಕ್ತಿಯಾಗಲಾರದು.

*

ಭೌತಿಕ ಸಂಗತಿಗಳಿಗೆ ಜೀವವಿದೆ ಮತ್ತು ಮೌಲ್ಯದ ಮೇಲೆ ಅವಲಂಬಿಸಿರುವಂಥ ಅವುಗಳ ಸ್ವಂತ ಬೆಲೆಯಿದೆ. ಭೌತಿಕ ಸಂಗತಿಗಳನ್ನು ಗೌರವಿಸುವುದು ಮತ್ತು ಅವುಗಳ ಜಾಗೃತ ಹಾಗೂ ಕಟ್ಟುನಿಟ್ಟಿನ ಬಳಕೆಯು ಯೋಗದ ಭಾಗವಾಗಿದೆ. ಅದಿಲ್ಲದಿದ್ದರೆ ಭೌತ ಸಂಗತಿಗಳ ಮೇಲೆ ಪ್ರಭುತ್ವ ಬರಲಾರದು.

*

ಭೌತಿಕ ಸಂಗತಿಗಳ ಬಗ್ಗೆ ನೀವು ಏನನ್ನು ಅನುಭವಿಸುತ್ತೀರೊ, ಅದು ನಿಜ – ಅವುಗಳಲ್ಲಿ ಪ್ರಜ್ಞೆ ಇದೆ, ನಮಗೆ ಗೊತ್ತಿರುವ ಮನುಷ್ಯನ ಹಾಗೂ ಪ್ರಾಣಿಯ ಜೀವನ ಮತ್ತು ಭೌತಿಕ ಸಂಗತಿಗಳನ್ನು ನಾವು ಗೌರವಿಸಬೇಕು ಮತ್ತು ಸರಿಯಾಗಿ ಬಳಸಬೇಕು. ಅವುಗಳನ್ನು ದುರುಪಯೋಗ ಮತ್ತು ವ್ಯರ್ಥ ಮಾಡಬಾರದು, ಕೆಟ್ಟದಾಗಿ ನಡೆಸಿಕೊಳ್ಳಬಾರದು ಅಥವಾ ಒರಟುತನದಿಂದ ಉಪಯೋಗಿಸಬಾರದು. ಜಾಗೃತವಾಗಿರುವ ಅಥವಾ ಜೀವಿತವಾಗಿರುವ ಈ ಎಲ್ಲ ಇರುವಿಕೆಯ ಅನುಭವವು ಬರುವುದು – ನಮ್ಮ ಸ್ವಂತ ಭೌತಿಕ ಪ್ರಜ್ಞೆ – ಮನಸ್ಸು ಮಾತ್ರವಲ್ಲ – ತನ್ನ ಅಸ್ಪಷ್ಟತೆಯಿಂದ ಎಚ್ಚರಗೊಂಡಾಗ ಮತ್ತು ಎಲ್ಲ ಸಂಗತಿಗಳಲ್ಲೂ ಏಕತೆಯ (ಎಲ್ಲೆಡೆಯೂ ದೈವೀ ಉಪಸ್ಥಿತಿಯ) ವಿವೇಕ ಬಂದಾಗ.

*

ಯಾವುದೇ ಚಟುವಟಿಕೆಯನ್ನು ಸಾಧನೆಯ ಭಾಗವೆಂದು ಪರಿಗಣಿಸಿದಾಗ ಮತ್ತು ಅದನ್ನು ದೇವರಿಗೆ ಅರ್ಪಿಸಿದಾಗ ಅಥವಾ ಪ್ರಜ್ಞೆಯಿಂದ ಅಥವಾ ನಂಬಿಕೆಯಿಂದ ಮಾಡಿದಾಗ ಅದು ದೈವೀ ಪ್ರಭಾವದಿಂದ ಮಾಡಲ್ಪಡುತ್ತದೆ. ಅದು ಅತಿ ಮಹತ್ವದ ಅಂಶ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/287–90 – ಶ್ರೀ ಅರವಿಂದರು**

**ಪ್ರಜ್ಞೆಯ ವಿಕಸನಗೊಳಿಸುವುದು**

ಪ್ರಜ್ಞೆಯು ವಿಕಾಸವಾಗುವುದು, ಮಾಡಿದ ಕಾರ್ಯವನ್ನು ದೇವರಿಗೆ ಅರ್ಪಿಸುವ ಮುಖಾಂತರ.

ಸೋಮಾರಿತನ ಮತ್ತು ನಿಷ್ಕ್ರೀಯತೆ ತಾಮಸದಲ್ಲಿ ಕೊನೆಗೊಳ್ಳುತ್ತವೆ: ಅದು ಪ್ರಜ್ಞಾಹೀನತೆಯಲ್ಲಿ ಕುಸಿಯುತ್ತದೆ; ಅದು ಪ್ರಗತಿಗೆ ಹಾಗೂ ಬೆಳಕಿಗೆ ವಿರುದ್ಧವಾಗಿದೆ.

ನಾವು ನಮ್ಮ ಅಹಂಕಾರವನ್ನು ಗೆಲ್ಲುವುದು, ದೇವರ ಸೇವೆಗಾಗಿ ಮಾತ್ರ ಬದುಕಿರುವುದು – ಅದು ನಿಜವಾದ ಪ್ರಜ್ಞೆಯನ್ನು ಪಡೆದುಕೊಳ್ಳಲು ಇರುವಂಥ ಸೂಕ್ತ ಹಾಗೂ ಅಲ್ಪಾವಧಿಯ ಮಾರ್ಗವಾಗಿದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 14/297 – ಶ್ರೀಮಾತೆ**

ಅದನ್ನು ವೈಯಕ್ತಿಕ ಕಾರ್ಯವೆಂದು ತೆಗೆದುಕೊಳ್ಳಬೇಡ. ಅ–ಸಾಮರಸ್ಯ ಹಾಗೂ ಗೊಂದಲಗಳು ಪ್ರಪಂಚದ ತುಂಬ ಹರಡಿವೆ; ಯಾಕೆಂದರೆ, ಸತ್ಯದ ಕ್ರಿಯೆಗೆ ಮಿಥ್ಯೆಯ ಪ್ರತಿರೋಧವಿದೆ. ಇಲ್ಲಿ, ಸತ್ಯದ ಕ್ರಿಯೆ ಹೆಚ್ಚು ಜಾಗೃತ ಹಾಗೂ ಕೇಂದ್ರೀಕೃತವಾಗದಂತೆ, ಪ್ರತಿರೋಧವು ತೀವ್ರಗೊಳ್ಳುತ್ತದೆ. ಈ ರೀತಿಯ ದೊಡ್ಡ ಪ್ರಕ್ಷುಬ್ಧತೆಯಲ್ಲಿ ಬಹಳಷ್ಟು ವ್ಯಕ್ತಿಗಳು ತಿಕ್ಕಾಟದ ಶಕ್ತಿಗಳಿಂದ ಗೊಂಬೆಗಳಂತೆ ಪ್ರೇರೆಪಿಸಲ್ಪಡುತ್ತಾರೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/157**

ತಮ್ಮ ಇರುವಿಕೆಗೆ, ನಿಮ್ಮ ಮೇಲೆ ಅವಲಂಬಿಸಿದವರೊಂದಿಗೆ ನೀವು ಬಹಳೇ ಸಭ್ಯರಾಗಿರಬೇಕು. ನೀವು ಅವರೊಂದಿಗೆ ಕೆಟ್ಟದಾಗಿ ನಡೆದುಕೊಂಡರೆ ಅವರು ನೊಂದುಕೊಳ್ಳುತ್ತಾರೆ, ಆದರೆ ಅವರು ಕೆಲಸ ಕಳೆದುಕೊಳ್ಳುವ ಭೀತಿಯಿಂದ ಮನುಷ್ಯ ಮನುಷ್ಯನಿಗೆ ಉತ್ತರ ಕೊಡುವಂತೆ ಕೊಡುವುದಿಲ್ಲ.

ನಿಮ್ಮ ವರಿಷ್ಠರೊಂದಿಗೆ ಅಹಿತವಾಗಿರುವಲ್ಲಿ ಸ್ವಲ್ಪ ಪ್ರತಿಷ್ಟೆ ಇರಬಹುದು. ಆದರೆ ನಿಮ್ಮ ಮೇಲೆ ಅವಲಂಬಿಸಿದವರೊಂದಿಗೆ ನಿಜವಾದ ಪ್ರತಿಷ್ಠೆ ಇರುವುದು ನೀವು ವಿನಯಶೀಲರಾಗಿದ್ದಾಗ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 13/169 – ಶ್ರೀಮಾತೆ**

## ದೈವೀ ಕಾರ್ಯಕ್ಕೆ ಅಡೆತಡೆಗಳು

**– ಅನುವಾದ: ಪುಟ್ಟು ಕುಲಕರ್ಣಿ**

### ಮಾನವೀಯತೆಗಾಗಿ ಸೇವೆಯ ಅವಧಾರಣ

ಮಾನವೀಯತೆಗಾಗಿಯೇ ಸೇವೆಯನ್ನು ಸಲ್ಲಿಸುವ ಸಂಗತಿಯೇ ಸಾಮಾನ್ಯವಾಗಿ ಪ್ರಮುಖ ಸ್ಥಾನದಲ್ಲಿರಬೇಕಾದ ಸಂಗತಿಯಾಗಿದೆ. ಇದೇ ಗುರಿಯೂ ಆಗಬೇಕಾಗಿದೆ. ಈ ರೀತಿಯ ಸೇವೆಗಾಗಿ ಅಥವಾ ಕರ್ತವ್ಯಗಳಿಗಾಗಿ ಸಮಸ್ತವನ್ನೂ ಸಮರ್ಪಿಸುವದೇ ವ್ಯಕ್ತಿಗತ ಮಹತ್ವಾಕಾಂಕ್ಷೆಯ ಸಂಕೇತವಗಿರುತ್ತದೆ. ಪ್ರತಿಯೊಬ್ಬ ಗುರುವೂ ತನ್ನಲ್ಲಿ ಒಂದು ಮಹತ್–ಸತ್ಯವನ್ನು ಹೊಂದಿದ್ದೇನೆ ಎನ್ನುವ ಭಾವದಲ್ಲಿ ಇರುತ್ತಾನೆ. ಈ ರೀತಿಯ ವಿಶ್ವಾಸವನ್ನೂ ಹೊಂದಿರುತ್ತಾನೆ. ಅದೂ ಇಂತಹ ಸತ್ಯವು

ಮಾನವೀಯತೆಗಾಗಿಯೇ ಇರುವದಲ್ಲದೇ, ಇದನ್ನು ಶಿಷ್ಯರಿಗೆ ಬೋಧಿಸಬೇಕೆಂಬ ಅಭೀಪ್ಸೆಯಲ್ಲಿ ಹಲವಾರು ಶಿಷ್ಯರನ್ನು ಅಪೇಕ್ಷಿಸುತ್ತಾನೆ. ಆದರೆ ಶಿಷ್ಯರಾದವರು ಇದನ್ನೂ ಮೀರಿ ಹೋದಲ್ಲಿ, ಆಗ ಗುರುವು ಕಸಿವಿಸಿಗೊಳ್ಳುತ್ತಾನೆ. ಅಥವಾ ಶಿಷ್ಯರಾದವರು ತಮ್ಮದೇ ಗುರಿಯನ್ನು ಸಾಧಿಸುವ ಸಲುವಾಗಿ ಈ ಗುರುವನ್ನು ಅರಸಿ ಆಗಮಿಸಿದ ಸಂದರ್ಭಗಳಿರುವಲ್ಲಿ, ಇಂತಹ ಶಿಷ್ಯರನ್ನು ತಡೆಯುವದೂ ಇಲ್ಲಿ ಅಂತಹದೇ ಸಂದರ್ಭವನ್ನು ಸೃಷ್ಟಿಸುತ್ತದೆ. ನೀವು ಇದಕ್ಕೆ ಸಮರ್ಥ–ಶೀಲರಾಗಬೇಕಾಗಿದೆ. ಒಂದು ವೇಳೆ ನೀವು ಆ ದಿವ್ಯತ್ವದ ಆಜ್ಞೆಯನ್ನು ಅನುಸರಿಸುವದಾದರೆ, ನಿಮಗೆ ವಹಿಸಲ್ಪಟ್ಟಿರುವ ಯಾವುದೇ ಕರ್ತವ್ಯವನ್ನೂ ನಿಭಾಯಿಸಲು ಸಿದ್ಧವಿದ್ದರೆ, ಒಂದು ವೇಳೆ ಅದು ಅತ್ಯದ್ಭುತವಾದ ಕಾರ್ಯವೇ ಆಗಿದ್ದರೂ, ಅದನ್ನೂ ಮುಂದಿನ ಕ್ಷಣದಲ್ಲಿ ಬಿಟ್ಟುಕೊಡುವ ಪ್ರಸಂಗ ಬಂದರೂ, ಅದೇ ಶಾಂತ ಮನೋಭಾವದಲ್ಲಿಯೇ – ಅಂದರೆ ಅದನ್ನು ಸ್ವೀಕರಿಸದಾಗ ಇದ್ದ ಪ್ರಶಾಂತ ಮನೋಭಾವದಲ್ಲಿಯೇ – ಬಿಟ್ಟುಕೊಡಬೇಕು. ಇಲ್ಲಿ ನಿಮ್ಮ ಯಾವುದೇ ಹೊಣೆಗಾರಿಕೆ ಇರುವದಿಲ್ಲ. ಇಲ್ಲಿ ಅದರ ಕುರಿತು ಯಾವುದೇ ರೀತಿಯ ಮಮಕಾರವಾಗಲಿ ಅಥವಾ ಬಂಧವಾಗಲೀ ರೂಪಣೆಯಾಗಬಾರದು.

ಯಾವುದೇ ಉದ್ದೇಶಕ್ಕಾಗಲೀ ಅಥವಾ ಜೀವನದ ಯಾವುದೇ ವಿಧಾನಕ್ಕಾಗಲೀ, ನೀವು ಯಾವಾಗಲೂ ಸಂಪೂರ್ಣವಾಗಿಯೇ ಮುಕ್ತರಾಗಿರಬೇಕು. ಒಂದು ವೇಳೆ ನೀವು ನಿಜವಾದ ಯೌಗಿಕ ಸ್ವಭಾವವನ್ನು ಅಪೇಕ್ಷಿಸುತ್ತಿದ್ದಲ್ಲಿ, ಏನೇ ಬಂದರೂ, ಯಾವುದೇ ಪ್ರಸಂಗದಲ್ಲಿಯೂ, ಯಾವುದೇ ಸ್ವರೂಪದಲ್ಲಿ ಬಂದರೂ, ಅದನ್ನು ಸ್ವೀಕರಿಸುವ ಮನೋಭಾವ ಇರಬೇಕು. ಏಕೆಂದರೆ ಇದೆಲ್ಲವೂ ಆ ದಿವ್ಯದಿಂದಲೇ ಆಗಮಿಸಿರುತ್ತದೆ. ಒಂದು ವೇಳೆ ಅದು ನಿಮ್ಮಿಂದ ದೂರ ಹೋಗಲು ಇಚ್ಛಿಸುತ್ತಿದ್ದಲ್ಲಿ, ಅಷ್ಟೇ ಸಹಜವಾಗಿ ಅದನ್ನು ಬಿಟ್ಟುಕೊಡಬೇಕು. ಇದಕ್ಕಾಗಿ ಯಾವುದೇ ವಿಷಾದವೂ ಬೇಕಿಲ್ಲ. ಓರ್ವ ತಪಸ್ವಿಯ ದೃಷ್ಟಿಕೋನವು 'ನಾನು ಏನನ್ನೂ ಬಯಸುವದಿಲ್ಲ' ಎಂದು ಹೇಳುತ್ತದೆ. ಅದೇ ರೀತಿಯಲ್ಲಿ 'ನಾನು ಇದನ್ನು ಬಯಸುತ್ತೇನೆ' ಎಂದು ಹೇಳುವ ಜನಮಾನಸದ ಅಭಿಪ್ರಾಯವೂ ಒಂದೇ ಆಗಿದೆ. ಇಲ್ಲಿ ಒಬ್ಬನು ಸಂಪೂರ್ಣ ತ್ಯಾಗವನ್ನು ಮಾಡಲು ಸಿದ್ಧನಿದ್ದಲ್ಲಿ, ಇನ್ನೊಬ್ಬನು ಅದನ್ನು ತನ್ನ ಸ್ವಾಧೀನದಲ್ಲಿ ಇಟ್ಟುಕೊಳ್ಳಲು ಹಂಬಲಿಸುತ್ತಾನೆ.

ದೈವತ್ವದ ನೆಲೆಯಿಂದ ಬರುವ ಸರ್ವ ಸಂಗತಿಗಳನ್ನು ನೀವು ಸ್ವೀಕರಿಸಬೇಕಾಗುತ್ತದೆ. ಏಕೆಂದರೆ ಈ ವಿಷಯಗಳೆಲ್ಲವೂ ಆಶೆಗಳಿಂದಲೇ

ಅಡಕಗೊಂಡಿವೆ. ಈ ಆಶಯವು ಅವನ ಅವಚೇತನದಲ್ಲಿಯೇ ಕಾರ್ಯ–ಪ್ರವೃತ್ತವಾಗಿರುತ್ತದೆ; ಇದೇ ವಸ್ತು–ವಿಷಯಗಳನ್ನು ಒದಗಿಸಿಕೊಡುತ್ತದೆ. ಈ ವಿಷಯವನ್ನು ನೀವು ಗುರುತಿಸದೇ ಇದ್ದರೂ, ಹೆಚ್ಚು–ಕಡಿಮೆ ಅವುಗಳೆಲ್ಲವೂ ಆ ದಿವ್ಯತ್ವದಿಂದಲೇ ಆಗಮಿಸದಿದ್ದರೂ, ಆ ರೀತಿಯಲ್ಲಿ ಮರೆಮಾಡಲ್ಪಟ್ಟಿರುವ ಆವರಣದಲ್ಲಿ ರೂಪಣೆಗೊಂಡ ಬಯಕೆಗಳಿಂದ ಆಗಮಿಸಿರುತ್ತವೆ.

ದಿವ್ಯತ್ವದ ನೆಲೆಯಿಂದ ಆಗಮಿಸಿರುವ ವಿಷಯಗಳನ್ನು ನೀವು ಸುಲಭದಲ್ಲಿ ಗುರುತಿಸಬಲ್ಲಿರಿ. ಒಂದು ವೇಳೆ ಏನೋ ಒಂದು ವಿಷಯವು ತಂತಾನೇ ನಿಮಗಾಗಿ ಘಟಿಸಿದಲ್ಲಿ, ನೀವು ಅದರೆಡೆಗೆ ಪುಟಿದು ಸಾಗಿ, 'ಓ ಅಂತೂ ನಾನು ಇದನ್ನು ಪಡೆದುಕೊಂಡೆ' ಎಂದು ಉದ್ಗಾರ ಹೊರಡಿಸುತ್ತೀರಿ. ಆದರೆ, ಅನಂತರದಲ್ಲಿ ಅದು ದಿವ್ಯತ್ವದ ನೆಲೆಯಿಂದ ಬಂದಿಲ್ಲ ಎನ್ನುವದನ್ನು ನೀವು ತಿಳಿದುಕೊಳ್ಳಬೇಕಾಗುತ್ತದೆ. ಸಮತಾಭಾವವೇ ಸಾಂಘಿಕತೆಗಾಗಿ ಅತ್ಯಾವಶ್ಯವಾಗಿರುವ ನಿಯಮವಾಗಿದೆ ಮತ್ತು ಇದು ಸದಾ ಪರಮಾತ್ಮನ ಸಂಗಡ ಸಹಜೀವಿಯಾಗಿರುತ್ತದೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 3/9–10**

**ಮಮಕಾರವನ್ನು ಮೀರುವದು**

ಯಾವುದೇ ಕಾರಣಕ್ಕೂ ನಿಮ್ಮ ಜೀವನದ ವಿಧಾನವನ್ನು ನೀವು ಪರಿವರ್ತಿಸಿಕೊಳ್ಳುವ ಅವಶ್ಯಕತೆ ಇರುವದಿಲ್ಲ. ಅಲ್ಲದೇ ನೀವು ಈಗಾಗಲೇ ಆಯ್ಕೆ ಮಾಡಿಕೊಂಡಿರುವ ಕರ್ತವ್ಯವನ್ನು – ಅದೂ ಸುದೀರ್ಘ ಅವಧಿಯಿಂದ ನಿಮ್ಮ ಸ್ವಭಾವಕ್ಕೆ ಅನುಗುಣವಾಗಿಯೇ ಇರುವ ಕರ್ತವ್ಯವೆಂದೇ ಆಶಿಸಿ, ನಿಮ್ಮ ಜೀವನಕ್ಕೆ ಅಳವಡಿಸಿಕೊಂಡಿರುವದನ್ನು, ಅಥವಾ ನಿಮ್ಮ ಅಂತರಂಗದಿಂದಲೇ ಅದು ನಿಯಂತ್ರಿಸಲ್ಪಡುತ್ತಿರುವದನ್ನು ಗಮನಿಸಿದ ಮೇಲೆ, ನೀವು ಅದನ್ನು ತ್ಯಜಿಸುವ ಪ್ರಸಂಗ ಬರುವದಿಲ್ಲ. ಕೆಲವೊಂದು ಕಾರಣಗಳಿಂದಾಗಿ ಇದು ನಿಮ್ಮದೇ 'ವ್ಯಕ್ತಿತ್ವ (ಸ್ವಧರ್ಮ)'ವೆಂದು ಕಾಣುತ್ತದೆ. ಹೀಗಾಗಿ ಇವು ಮೂರು ಪರೀಕ್ಷೆಗಳು ನಿಮ್ಮ ಮುಂದಿರುತ್ತವೆ. ಇವುಗಳನ್ನು ಹೊರತು ಪಡಿಸಿ ಇಲ್ಲಿ ನಿರ್ಧರಿತಗೊಂಡ ಬೇರೆ ಯಾವುದೇ ಮಾರ್ಗ ಇರುವದಿಲ್ಲ, ಅಥವಾ ಜೀವನದ ಸಲುವಾಗಿ ಕರ್ತವ್ಯದ ರೀತಿಯೂ ಇರುವದಿಲ್ಲ. ಮುಖ್ಯವಾಗಿ ಇದು ಗೀತೆಯಲ್ಲಿ ಉಪದೇಶಿಲ್ಪಟ್ಟಿರುವ ಈ ಯೋಗದ ಸ್ವರೂಪದಲ್ಲಿಯೇ ರೂಪಿತಗೊಂಡಂತೆ ಇರಬಹುದು. ಇದೇ ಆ ಶಕ್ತಿ

ಅಥವಾ ಚೇತನವಾಗಿದ್ದು, ಇಲ್ಲಿ ರೂಪಿತವಾಗುತ್ತಿರುವ ಕರ್ತವ್ಯಗಳು ಅತ್ಯಂತ ಪ್ರಮುಖವಾಗಿರುತ್ತವೆ. ಬಾಹ್ಯ ಸ್ವರೂಪದಲ್ಲಿ ಇರುವ ಅಭಿವ್ಯಕ್ತಿಗಳು ಬಹತೇಕವಾಗಿ ವಿಭಿನ್ನ ಸ್ವಭಾವದೊಳಗೆ ರೂಪಿತಗೊಂಡಿರುತ್ತವೆ. ಹೀಗಾಗಿ, ಯಾರೇ ಆಗಲಿ, ಆ ದೈವೀ ಶಕ್ತಿಯಿಂದಲೇ ನಿರ್ಧರಿತವಾಗಿರುವ ಅನುಭವವನ್ನು ಎಲ್ಲಿಯವರೆಗೂ ಪಡೆದುಕೊಳ್ಳುವದಿಲ್ಲವೋ, ಅದರಲ್ಲೂ ಆ ವ್ಯಕ್ತಿಯ ಕರ್ತವ್ಯಗಳು ಮತ್ತು ಅವುಗಳನ್ನು ಅನುಷ್ಠಾನಗೊಳಿಸುವಲ್ಲಿ ಇದು ಅತ್ಯಂತ ಮುಖ್ಯ ಪಾತ್ರ ವಹಿಸುತ್ತದೆ. ಅನಂತರದಲ್ಲಿ ಆ ಶಕ್ತಿಯು ಏನನ್ನು ಮಾಡಬೇಕು, ಏನನ್ನು ಮಾಡಬಾರದು ಎನ್ನುವದನ್ನು ನಿರ್ಧರಿಸುತ್ತದೆ.

ಈ ಎಲ್ಲ ಆಸಕ್ತಿ–ಬಂಧನ–ಮಮಕಾರಗಳನ್ನು ಮೀರುವದು ಖಂಡಿತವಾಗಿಯೂ ಕಷ್ಟದಾಯಕವೇ ಆಗಿದೆ. ಅದೂ ದೀರ್ಘಾತಿದೀರ್ಘ ಶೋಧನೆಯ ನಂತರದಲ್ಲಿ – ಅಥವಾ ಅಂತರಂಗದಲ್ಲಿನ ಆಧ್ಯಾತ್ಮಿಕ ಅನುಭವಗಳಿಂದಾಗಿ ತೀವ್ರಗತಿಯ ಪ್ರಗತಿಯು ಸಾಮಾನ್ಯವಾಗಿರುತ್ತದೆ. ಗೀತೆಯೂ ಬೋಧಿಸುತ್ತಿರುವ ಸಾರವೇ ಇದಾಗಿದೆ. ಪ್ರತಿಫಲದ ಬಯಕೆಯನ್ನು ಪ್ರತಿಬಂಧಿಸುವ, ಅಲ್ಲದೇ ಸದಾ ಕರ್ತವ್ಯಕ್ಕೇ ಅಂಟಿಕೊಂಡಿರುವದನ್ನು, ಸರ್ವ ವಸ್ತುಗಳ ವಿಷಯದಲ್ಲಿ ಸಮಾನತೆಯಲ್ಲಿ, ಸರ್ವ ಸಂತೋಷಗಳಲ್ಲಿ, ಶುಭವೇ ಇರಲಿ ಅಥವಾ ಅಶುಭವೇ ಇರಲಿ, ಹೊಗಳಿಕೆ ಅಥವಾ ತೆಗಳಿಕೆಯ ಸಂದರ್ಭವಿರುವಲ್ಲಿ, ಅದೃಷ್ಟಕ್ಕೋ ಅಥವಾ ದುರಾದೃಷ್ಟಕ್ಕೋ, ಯಾವುದೇ ಸಂದರ್ಭವಿದ್ದರೂ ಸಹಿತ, ಅಹಂಕಾರವನ್ನು ತ್ಯಜಿಸಬೇಕು. ಇವೆಲ್ಲವೂ ಮಮಕಾರರಹಿತವಾಗಿ ಅಲ್ಲದೇ ಆತ್ಮಪೂರ್ವಕವಾಗಿಯೇ, ತ್ಯಾಗಮಯ ಭಾವದೊಳಗೆ ಆ ದೈವತ್ವಕ್ಕೆ ಸಮರ್ಪಣೆ ಮಾಡುತ್ತಿದ್ದಲ್ಲಿ, ಆಗ ನಿಮ್ಮ ಹೃದಯದೊಳಗೆ ಸದಾ ಅವನನ್ನು(ಪರಮವನ್ನು) ತಲುಪಲೆಂದೇ ಹಾತೊರೆಯುತಿದ್ದಲ್ಲಿ ಗಮ್ಯವನ್ನು ಕಾಣಲು ಸಾಧ್ಯವಾಗುತ್ತದೆ. ಇದಕ್ಕಿಂತ ಮುಖ್ಯವಾಗಿ ಯಾರು ಈ ಎಲ್ಲ ವಿಷಯಗಳಲ್ಲಿಯೂ ಮತ್ತು ಎಲ್ಲ ಜೀವಿಗಳಲ್ಲಿಯೂ ಈ ರೀತಿಯ ದೈವೀ ನಿರ್ಧರಣೆಯನ್ನು ಕಾಣುತ್ತಾರೆಯೋ, ಅವರು ಇಂತಹ ಅನುಭೂತಿಯನ್ನು ಸ್ಪಂದಗೊಳ್ಳುತ್ತಾರೆ. ಇದು ಈ ಜೀವಿಯ–ಜೀವನದ ಎಲ್ಲ ಅಂಶಗಳಲ್ಲಿಯೂ ಮತ್ತು ಸಂಚಲನಗಳಲ್ಲಿಯೂ ಅನುಭವವಾಗಿ ಅಥವಾ ಚೇತನವಾಗಬೇಕೇ (ಸರ್ವಭಾವೇನ) ವಿನಾ, ಕೇವಲ ಮನಸ್ಸಿನಲ್ಲಾಗಲಿ ಅಥವಾ ವಿಚಾರ–ಚಿಂತನಗಳಲ್ಲಾಗಲಿ ಮಾತ್ರ ಅಲ್ಲ; ಆಗ ಮಾತ್ರ ಎಲ್ಲ ಬಂಧನಗಳಿಂದ ಮುಕ್ತರಾಗುವದು ಅತ್ಯಂತ ಸುಲಭ ಸಾಧ್ಯವಾಗುತ್ತದೆ.

ಗೀತೆಯ ಯೋಗದ ಅನುಸಾರವಾಗಿಯೇ ನಾನು ಇದನ್ನು ಹೇಳುತ್ತಿದ್ದೇನೆ. ಒಂದು ಯೌಗಿಕ ಜೀವನ ವಿಧಾನದೊಳಗೆ ಇದೇ ರೀತಿಯ ಅನುಭವವನ್ನು ಮತ್ತೊಂದು ವಿಧಾನದಲ್ಲಿ ಕಂಡುಕೊಳ್ಳುವದು ಸಾಧ್ಯವಿದೆ. ಅಂದರೆ ಬಂಧನಗಳಿಗೆ – ಮಮಕಾರದ ಭಾವದೊಳಗೆ – ಅಂಟಿಕೊಂಡಿರುವ ವಿಷಯಗಳನ್ನು ಒಂದೊಂದಾಗಿ ಒಂದೊಂದಾಗಿ ಕತ್ತರಿಸುತ್ತ, ಮತ್ತು ಅಂತಹ ಬಂಧನಗಳನ್ನು ಕ್ಷೀಣಗೊಳಿಸಿಕೊಳ್ಳುತ್ತ – ನಿವಾರಿಸಿಕೊಳ್ಳುತ್ತ – ಅಂದರೆ ಅವುಗಳನ್ನು ನಿರಾಕರಿಸುತ್ತ ಸಾಗಿ, ಅವುಗಳ ಉಪಯೋಗವನ್ನೆ ಸ್ಥಗಿತಗೊಳಿಸುತ್ತಾ ಸಾಧಿಸಬಹುದಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 29/236–37**

ಇಲ್ಲಿ ಅತ್ಯಂತ ಪ್ರಮುಖವಾಗಿರುವ ಸಂಗತಿ ಎಂದರೆ – ಅಹಂಕಾರ, ಕೋಪ, ವ್ಯಕ್ತಿಗತ ನಿರಾಕರಣೆಗಳು, ಸ್ವಯಂಸಂವೇದನಾ ಭಾವಗಳು ಮುಂತಾದ ಸಂಗತಿಗಳನ್ನು ಪೂರ್ತಿಯಾಗಿ ತ್ಯಜಿಸಬೇಕಾಗುತ್ತದೆ. ಕರ್ತವ್ಯವೆನ್ನುವದು ಕೇವಲ ಕರ್ತವ್ಯದ ಸಲುವಾಗಿ ಮಾತ್ರವೇ ಎಂದರ್ಥವಲ್ಲ. ಇದು ಸಾಧನೆಯ ಸಲುವಾಗಿ ಇರುವ ಪಥವಾಗಿದೆ. ನಮ್ಮ ಸೀಮಿತ ಬದುಕಿನ ಈ ನಿಮ್ನ ಸ್ವರೂಪದ ವ್ಯಕ್ತಿತ್ವಕ್ಕಿಂತ, ಅದರ ಪ್ರತಿಕ್ರಿಯೆಗಳಿಗಿಂತ, ನಾವು ಆ ದೈವತ್ವಕ್ಕೆ ಪೂರ್ಣವಾಗಿ ಸಮರ್ಪಣೆ ಮಾಡಿಕೊಳ್ಳಬೇಕಿದೆ.

ಇನ್ನು ಕರ್ತವ್ಯದ ವಿಷಯವಾಗಿ ಗಮನಿಸಿದಲ್ಲಿ, ಅದು ಈಗಾಗಲೇ ಯೋಜಿತಗೊಳಿಸಲ್ಪಟ್ಟಂತೆಯೇ, ಅದಷ್ಟಕ್ಕೆ ಅದೇ ಘಟಿಸುತ್ತಾ ಇರುತ್ತದೆ. ಇಲ್ಲವೇ ಶ್ರೀಮಾತೆಯು ಅನುಮತಿಸಿದಂತೆಯೇ ರೂಪಿತಗೊಳ್ಳುತ್ತಾ ಇರುತ್ತದೆ. ಇದೆಲ್ಲವೂ ಅವಳದೇ ಲೀಲೆಯಾಗಿದೆ; ಇದು ನಿಮ್ಮ ವೈಯಕ್ತಿಕ ವಿಷಯವಲ್ಲ. ಈ ಸಂಗತಿಯನ್ನು ನೀವು ನೆನಪಿನಲ್ಲಿ ಇಟ್ಟುಕೊಳ್ಳಲೇಬೇಕು.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/41 – ಶ್ರೀ ಅರವಿಂದರು**

# ಶ್ರೀ ಅರವಿಂದರ ಗುರು ಯಾರು?
# 'ಗುರುವಾದ' ಮತ್ತು ಗುರು ಶ್ರೀ ಅರವಿಂದರು

**– ಡಾ॥ ಗೌರೀಶ ಕಾಯ್ಕಿಣಿ**

ಸಚ್ಛಿಷ್ಯನಿಗೆ ಸದ್ಗುರುವು ಸಿಗುವದು ಒಂದು ಮಹದ್ಭಾಗ್ಯವಾದರೆ, ಸದ್ಗುರುವಿಗೆ ಸಚ್ಛಿಷ್ಯನು ಸಿಗುವದೂ ಅಷ್ಟೇ ದೊಡ್ಡ ಭಾಗ್ಯವೆನ್ನಬಹುದು. ಶ್ರೀ ರಾಮಕೃಷ್ಣ ಪರಮಹಂಸರಿಗೆ ನರೇಂದ್ರ(ಸ್ವಾಮಿ ವಿವೇಕಾನಂದ) ಶಿಷ್ಯನಾಗಿ ದೊರೆತದ್ದು, ಈ ಶಿಷ್ಯನಿಗೆ ಈ ಗುರುವು ದೊರೆತಷ್ಟೇ ಅದ್ಭುತದ ಭಾಗ್ಯ. ಈ ದೃಷ್ಟಿಯಿಂದ ಗುರು ಅರವಿಂದರಂತಹ ಶ್ರೇಷ್ಠ ಶಿಷ್ಯರನ್ನು ಪಡೆದು ಧನ್ಯನಾದ ಸದ್ಗುರುವು ಯಾರು?

ಶ್ರೀ ಅರವಿಂದರ ಕುರಿತು ಪದೆಪದೇ ಈ ರೀತಿಯ ಪ್ರಶ್ನೆಗಳನ್ನು ಎತ್ತಲಾಗುತ್ತಿದೆ. ಹಲವರ ನಂಬಿಕೆಯಂತೆ ಅವರ ಗುರು **ಶ್ರೀ ಲೇಲೆ**. ಆದರೆ ಇದು ಎಷ್ಟು ನಿಜ ಎನ್ನುವದೇ ಈ ಲೇಖನದ ವಿಷಯವಾಗಿದೆ. ಈ ಕುರಿತು ಪ್ರಾ. ಬಿ.ಡಿ.ಖಾಪರ್ಡೆಯವರು ಬರೆದ **'ಯೋಗಿ, ಅರವಿಂದ ವ ಅಂತರ್ಜ್ಞಾನ'** ಎನ್ನುವ ಮರಾಠಿ ಪುಸ್ತಕದಲ್ಲಿ ತುಸು ಬೆಳಕನ್ನು ಚೆಲ್ಲಿದ್ದಾರೆ. ಪ್ರಾ. ಖಾಪರ್ಡೆ ಬನಾರಸ ಹಿಂದೂ ವಿಶ್ವವಿದ್ಯಾಲಯದಿಂದ ನಿವೃತ್ತರಾದ ಪಂಡಿತರು. ಇವರು ಸುಪ್ರಸಿದ್ಧ ರಾಷ್ಟ್ರೀಯ ಧುರೀಣರೂ ಅಂದಿನ ಶ್ರೀ ಲೋಕಮಾನ್ಯರ ಸಹಕಾರಿಗಳೂ ಆದ ದಾದಾಸಾಹೇಬ ಖಾಪರ್ಡೆಯವರ ಚಿರಂಜೀವರು. 18ನೇ ವರ್ಷದ ಪ್ರಾಯಕ್ಕೇ 1908 ರಲ್ಲಿ ಕಾಲೇಜು ಶಿಕ್ಷಣಕ್ಕಾಗಿ ಖಾಪರ್ಡೆಯವರು ಕಲಕತ್ತೆಗೆ ಹೋದರು. ಅಲ್ಲಿಗೆ ಹೋಗುವಾಗ ಅವರ ತಂದೆ ಕಲಕತ್ತೆಯಲ್ಲಿರುವ ತಮ್ಮ ವಿಖ್ಯಾತ ಸಹಕಾರಿಗಳಾಗಿದ್ದ ಶ್ರೀ ಅರವಿಂದ ಘೋಷ, ಬಿಪಿನ ಚಂದ್ರಪಾಲ ಮತ್ತು ಅಮೃತ ಬಝಾರ ಪತ್ರಿಕೆಯ ಸಂಪಾದಕರಾದ ಮೋತಿಲಾಲ ಘೋಷ ಇವರಿಗೆ ಪತ್ರಗಳನ್ನು ಕೊಟ್ಟು ಕಳಿಸಿದ್ದರು. ತನ್ನ ಮಗನನ್ನು ಸ್ಥಾನಿಕ ಪಳಕರನ್ನಾಗಿ ನೋಡಿಕೊಳ್ಳಲು ಹಿರಿಯ ಖಾಪರ್ಡೆ ಆ ಪತ್ರದಲ್ಲಿ ಕೇಳಿಕೊಂಡಿದ್ದರು.

ಆ ಮೇಲೆ ಅರವಿಂದರು ತರುಣ ಖಾಪರ್ಡೆಯ ಬಗೆಗೆ ಕೂಡಲೇ ವ್ಯವಸ್ಥೆ ಮಾಡಿ, ಪ್ರತಿ ರವಿವಾರ ತನ್ನೊಂದಿಗೆ ಒಂದು ಘಂಟೆ ಕಾಲ ಕಳೆಯಬೇಕೆಂದು ತಾಕೀತು ಮಾಡಿದರು. ಆಗ ಶ್ರೀ ಅರವಿಂದರು 'ಕರ್ಮಯೋಗಿನ್' ಎನ್ನುವ ಸಾಪ್ತಾಹಿಕವನ್ನು ನಡೆಯಿಸುತ್ತಿದ್ದರು. ಅದರ ಕೆಲಸದ ಒತ್ತಡದಲ್ಲಿ ಖಾಪರ್ಡೆಗೆ ಅರ್ಧ ಘಂಟೆಗಿಂತ ಹೆಚ್ಚು ಹೊತ್ತು ಕುಳಿತುಕೊಳ್ಳಲು ಆಗುತ್ತಿರಲಿಲ್ಲ. ಈ ಎಲ್ಲ

ಭೇಟಿಗಳೂ, 'ಕರ್ಮಯೋಗಿನ್' ಕಚೇರಿಯಲ್ಲಿ ನಡೆಯುತ್ತಿದ್ದವು. 1910ರಲ್ಲಿ ಅರವಿಂದರು ಕಲಕತ್ತೆಯನ್ನು ಬಿಟ್ಟು ಹೋಗುವತನಕವೂ ಖಾಪರ್ಡೆ – ಅರವಿಂದರ ಸಮಾಗಮ ಅವಿಚ್ಛಿನ್ನವಾಗಿಯೇ ನಡೆಯಿತು. ಖಾಪರ್ಡೆ ಈ ವಿಷಯವಾಗಿ ತನ್ನ ಗ್ರಂಥದಲ್ಲಿ ಅರವಿಂದರೊಡನೆ ಆಗಾಗ್ಗೆ ನಡೆದ ಅನೇಕಾನೇಕ ವಿಷಯಗಳ ಸಲ್ಲಾಪಗಳಿಂದ ಅಧ್ಯಾತ್ಮಿಕ ಮತ್ತು ಯೋಗಿಕ ವಿಷಯಗಳ ಬಗೆಗಿನ ಪ್ರಸಂಗಗಳನ್ನು ಆಯ್ದುಕೊಂಡು ತಮ್ಮ ಗ್ರಂಥದಲ್ಲಿ ಬಣ್ಣಿಸಿದ್ದಾರೆ.

45 ವರ್ಷಗಳ ನಂತರವೂ ಈ ಸಂವಾದಗಳು ಲೇಖಕರ ಕಿವಿಯಲ್ಲಿ ಅಂದಿನಂತೆಯೇ ನಿಚ್ಚಳವಾಗಿ ಮೊಳಗುತ್ತಿದ್ದವು. ಕಣ್ಣೆದುರಿಗೇ ನಡೆಯುತ್ತಿರುವಂತೆ ಅರವಿಂದರ ವಿವಿಧ ಸಂದರ್ಶನಗಳ ದೃಶ್ಯಗಳು ಚಿತ್ತದಲ್ಲಿ ಚಿತ್ರಿತವಾಗಿದ್ದವು. ಅವರು ಆದಷ್ಟು ಮಟ್ಟಿಗೆ ಶ್ರೀ ಅರವಿಂದರು ಬಳಸಿದ ಶಬ್ದಗಳನ್ನೇ ನೆನಪಿಸಿಕೊಂಡು ಬರೆದಿದ್ದಾರೆ. ಆ ಮಹಾಯೋಗಿಗೆ ಅಪಚಾರವಾಗದಂತೆ ಏನೂ ಅಯಥಾರ್ಥ ವಿವರಗಳನ್ನು ಕಲ್ಪಿಸಿಕೊಂಡು ಬರೆದಿಲ್ಲ. ಇದು ಖಾಪರ್ಡೆಯವರ ಪ್ರತಿಜ್ಞೆ.

* * * * *

**ಶ್ರೀ ವಿಷ್ಣು ಭಾಸ್ಕರ ಲೇಲೆ** ಅಮರಾವತಿಯ ಸದ್ಗೃಹಸ್ಥರು. ಅವರು ಥಿಯೋಸೊಫಿಸ್ಟ್. ಆ ಪಂಥದ ಅಂತರ್ವಲಯ(ಇನ್ನರ ಸರ್ಕಲ್)ಕ್ಕೆ ಸೇರಿದ ಸದಸ್ಯರಾಗಿದ್ದರು. ಸ್ಥಾನಿಕ ಕಚೇರಿಯೊಂದರಲ್ಲಿ ಗುಮಾಸ್ತರಾಗಿದ್ದರು. ಆದರೆ ಲೇಲೆ ಬಹಳ ಸ್ನೇಹಶೀಲ, ಸಜ್ಜನರು. ಅವರು ಖಾಪರ್ಡೆ ಮತ್ತು ಅರವಿಂದರಲ್ಲಿ ನಿಯಮದಿಂದ ಬರುತ್ತಿದ್ದರು.

ಒಮ್ಮೆ ಅರವಿಂದರು ಅವರನ್ನು ಎಲ್ಲೋ ಭೇಟಿಯಾದಾಗ, ತನ್ನ ಸಾಧನೆಯಲ್ಲಿನ ಯಾವುದೋ ಒಂದು ಶಂಕೆಯನ್ನು ಲೇಲೆಯವರ ಹತ್ತಿರ ಕೇಳಿದರು. ಆಗಿನ್ನೂ ಶ್ರೀ ಅರವಿಂದರು ಆ ಯೋಗ ಮಾರ್ಗಕ್ಕೆ ಹೊಸಬರು. ಆದ್ದರಿಂದ ಅಂದು ಲೇಲೇಯವರ ಉತ್ತರ ಅವರಿಗೆ ಬಹಳ ಬೆಲೆಯುಳ್ಳದ್ದಾಗಿ ಕಂಡಿತು. ಸೇವಾ ನಿವೃತ್ತರಾಗುವ ಮೊದಲು ಈ ವಿಷಯವನ್ನು ಅರವಿಂದರು ತಮ್ಮ ನಿಕಟವರ್ತಿಗಳಿಗೆ ಹೇಳಿದ್ದುಂಟು. ಮುಂದೆ **ಶ್ರೀ ದಿಲೀಪ ಕುಮಾರ ರಾಯ**ರಿಗೂ ಈ ಕುರಿತು ಪತ್ರಗಳಲ್ಲಿ, ಪ್ರತ್ಯಕ್ಷ ಭೇಟಿಯಲ್ಲಿ ಬಣ್ಣಿಸಿದ್ದುಂಟು. ಈ ಘಟನೆಯೇ ಶ್ರೀ ಲೇಲೆ ಅರವಿಂದರ ಗುರುಗಳೆಂಬ ಕಲ್ಪನೆಗೆ ಎಡೆಮಾಡಿಕೊಟ್ಟಿತು. ಆದರೆ ಇದು ನಿಜವಾಗಿಯೂ ತಪ್ಪು ತಿಳುವಳಿಕೆ. ಲೇಲೆ ಅರವಿಂದರಿಗೆ ಯೋಗ ಮಾರ್ಗದಲ್ಲಿ ಸಲಹೆ–ಸೂಚನೆ ಕೊಟ್ಟಿದ್ದು ಒಂದೇ ಒಂದು ಸಲ. ಅದೂ ಕೇವಲ ಒಂದೇ ವಿಷಯದ ಬಗೆಗೆ.

ಇನ್ನು ಒಂದೇ ದೃಷ್ಟಿಪಾತದಿಂದ, ಭೆಟ್ಟಿ ಸಂಭಾಷಣೆಯಿಂದ, ಅಲ್ಪಕಾಳಿಕ ಸಮಾಗಮದಿಂದ ಗುರುವು ಶಿಷ್ಯನ ಹೃದಯವನ್ನು ಗೆದ್ದು ಜೀವನವನ್ನು ಪರಿವರ್ತಿಸುವದು ಕ್ರಾಂತಿ ಕಾರ್ಯವೆನಿಸಬಹುದು. ಸಂತ ತುಕಾರಾಮನೇ ಹೇಳುವಂತೆ – 'ಮಾಡುವರು ತನ್ನಂತೆಯೇ ತತ್ಕಾಳ। ಹಿಡಯದೇನೂ ಅದಕೆ ಬೇಳ–ಕಾಳ'. ಆದರೆ ಅಂಥ ಸಮಾಗಮ, ಸಂದರ್ಶನ ಅರವಿಂದ – ಲೇಲೆಯವರಲ್ಲಿ ಒದಗಿ ಬಂದಿರಲಿಲ್ಲ. ಒಮ್ಮೆ ಅರವಿಂದರು ಖಾಪರ್ಡೆಯವರ ಮುಖಾಂತರ ಶ್ರೀಲೇಲೆಯವರಿಗೆ ಒಂದು ಸಂದೇಶವನ್ನು ಕಳುಹಿಸಿದರು. 'ಅಮರಾವತಿಗೆ ಹೋದಾಗ ಲೇಲೆ ಅವರಿಗೆ ಈಗ ನಾನು ಏನೂ ಮಾಡುತ್ತಿಲ್ಲ. ಶಕ್ತಿಯೇ ನನಗಾಗಿ ಎಲ್ಲವನ್ನೂ ಮಾಡುತ್ತಿದೆ,' ಎಂದು ತಿಳಿಸು ಎಂದು ಹೇಳಿದ್ದರು. ಇದರ ಜೊತೆಗೆ ಇನ್ನೊಂದು ಮಾತನ್ನೂ ಅವರು ಸೇರಿಸಿ, 'ನಾನು ಅಂದದ್ದು ನಿನಗೆ ಅರ್ಥವಾಗದಿದ್ದರೂ, ಅಂಥ ಮಾತನ್ನು ಹಾಗೆಯೇ ನೀನು ಲೇಲೆಯವರ ಮುಂದೆ ಉಚ್ಚರಿಸು' ಎಂದಿದ್ದರು. ಇದನ್ನು ಖಾಪರ್ಡೆ ಹಾಗೆಯೇ ಅವರಿಗೆ ತಿಳಿಸಿದರು. ಲೇಲೆ ಆಗ ಖಾಪರ್ಡೆಯ ಬೆನ್ನು ತಟ್ಟಿ, 'ಭಲೆ ಭಲೆ, ವೆರಿ ಗುಡ್, ಬಾಬೂ ಸಾಹೇಬರಿಗೂ ಹೇಳು ವೆರಿಗುಡ್'. ಒಮ್ಮೆ ಅರವಿಂದರು ಹೀಗೆ ಹೇಳಿದರೆಂದು ಖಾಪರ್ಡೆಯವರು ಬರೆದಿದ್ದಾರೆ, 'ನಾನು ಗುರುವನ್ನು ಎಂದಿಗೂ ನೋಡುವದಿಲ್ಲ, ಅವರ ಧ್ವನಿಯನ್ನಷ್ಟೇ ಕೇಳುತ್ತಿರುತ್ತೇನೆ'. ಈ ರೀತಿ ಇರುವಾಗ ಲೇಲೆಯವರು ತನ್ನ ಗುರುವೆಂದು ಭಾವಿಸಿದ್ದರೆ ಅರವಿಂದರು ಹೀಗೆ ಬರೆಯುತ್ತಿದ್ದರೇ?

* * *

ಇದೇ ವಿಷಯವಾಗಿ **ಶ್ರೀ ಶಿಶಿಲಕುಮಾರ ಮಿತ್ರ ಅವರು 'ದ ಲಿಬರೇಟರ್'** ಎನ್ನುವ ತಮ್ಮ ಪುಸ್ತಕದಲ್ಲಿ ಬರೆದಿರುವ ವಿಷಯವೂ ಮತ್ತಷ್ಟು ಈ ವಿಷಯಕ್ಕೆ ಪುಷ್ಟಿಯನ್ನು ಕೊಡುತ್ತಿದೆ.

ಲೇಲೆಯವರಿಂದ ಬೀಳ್ಕೊಳ್ಳುವ ಮೊದಲು ಶ್ರೀ ಅರವಿಂದರು ಹೇಳಿದ್ದೇನೆಂದರೆ, 'ನಾನು ಅವರ ಸೂಚನೆಗಳಿಗಾಗಿ ಕೇಳಿದೆನು. ಅವರು ನನಗೆ ವಿವರವಾದ ಸೂಚನೆಗಳನ್ನು ಕೊಡುತ್ತಿದ್ದರು. ಈ ನಡುವೆ ನನ್ನ ಹೃದಯದಲ್ಲಿ ಸ್ಫುರಿಸಿ ಬಂದ ಒಂದು ಮಂತ್ರವನ್ನು ಅವರಿಗೆ ಹೇಳಿದೆ, ಆಗ ಅವರು ಸೂಚನೆ ಕೊಡುತ್ತಿರುವಾಗ ಫಕ್ಕನೇ ತಡೆದು ನನ್ನನ್ನು ಕೇಳಿದರು, 'ನಿನಗೆ ಈ ಮಂತ್ರವನ್ನು ಇತ್ತವನನ್ನು ಕೇವಲವಾಗಿ ಪೂರ್ತಿ ಅವಲಂಬಿಸಬಹುದೇ?' ಅದಕ್ಕೆ ನಾನು ಉತ್ತರಿಸಿದ್ದು, 'ನಾನು ಯಾವಾಗಲೂ ಹಾಗೆ ಮಾಡಬಲ್ಲೆ.' ಆಗ ಲೇಲೆ ನನಗೆ ಹೇಳಿದ್ದು, 'ಇನ್ನು ನಿನಗೆ ನನ್ನ ಸೂಚನೆಗಳ ಅಗತ್ಯವಿಲ್ಲ.'

ಆ ಮೇಲೆ ಒಮ್ಮೆ ಲೇಲೆಯವರು ಕಲಕತ್ತೆಯಲ್ಲಿ ಅರವಿಂದರನ್ನು ಭೇಟಿಯಾದಾಗ, ಯೋಗಾಭ್ಯಾಸದ ಕುರಿತು ಅರವಿಂದರನ್ನು ವಿಚಾರಿಸಿದರು. ಆಗ ಅರವಿಂದರು ಹೇಳಿದ್ದೇನೆಂದರೆ, 'ನಾನು ವಿಧೀಯಂತೆ ಆಸನ ಹಾಕಿ ಧ್ಯಾನಧಾರಣೆಗೆ ಕೂಡ್ರುವದನ್ನು ಬಿಟ್ಟುಕೊಟ್ಟಿದ್ದೇನೆ.' 'ಏಕೆಂದರೆ ಆ ಧ್ಯಾನವು ಈಗ ವ್ಯವಹಾರತಃ ಸದಾ ಕಾಲವೂ ನಡೆಯುತ್ತಿರುತ್ತದೆ.' ಅದಕ್ಕೆ ಲೇಲೆ ಅಂದದ್ದು, 'ಸೈತಾನನೇ ನಿನ್ನನ್ನು ಸೆರೆಹಿಡಿದಿರಬೇಕು'. ಇದರ ಜೊತೆಗೆ ಅವರು ಕೆಲವು ಸೂಚನೆಗಳನ್ನು ಕೊಟ್ಟರು. ಅರವಿಂದರು ಎಲ್ಲವನ್ನೂ ಮೌನವಾಗಿ ಕೇಳಿಸಿಕೊಂಡರು – ಏನೂ ಅನ್ನಲಿಲ್ಲ. ಅವರಿಗೆ ಆಂತರ್ಯದಿಂದಲೇ ಒಂದು ಆದೇಶ ಪ್ರಾಪ್ತವಾಗಿತ್ತು. ಇನ್ನು ಮುಂದೆ ಮಾನವ–ಗುರುವು ಯಾರೂ ಅವರಿಗೆ ಅಗತ್ಯವಿದ್ದಿಲ್ಲ. ಇದೇ ಅನುಭವವನ್ನೇ ಶ್ರೀ ಅರವಿಂದರು ದಿಲೀಪ ಕುಮಾರ ರಾಯರಿಗೆ ಹೀಗೆ ಬಣ್ಣಿಸಿದ್ದಾರೆ. 'ಕೆಲವೊಂದು ಅನುಭವಗಳು ನನಗೆ ಆಗಬೇಕೆಂದು ಲೇಲೆ ಬಯಸಿದ್ದರು. ಆದರೆ ಬೇರೆಯದೇ ಆದ ಅನುಭವವನ್ನು ನಾನು ಪಡೆದುಕೊಂಡೆ. ಅವರು ಕಲ್ಪನೆ ಮಾಡದೇ ಇದ್ದ ನಿರ್ವಾಣದ ಅನುಭವ. ನಿಜವಾಗಿಯೂ ಅವರಿಗೆ ಈ ಅನುಭವದ ಇತ್ಯರ್ಥವೇ ಸಿಗಲಿಲ್ಲ. ಅದು ಅವರ ಗ್ರಹಿಕೆಗೆ ನಿಲುಕಲಿಲ್ಲ. ಆದ್ದರಿಂದ ಅವರು ನನ್ನ ಅಂತಃಪ್ರೇರಣೆಯ ನಿರ್ದೇಶನಕ್ಕೆ ಬಿಟ್ಟು ಕೊಟ್ಟರು. ನನ್ನ ಆಂತರ್ಯದ ಮಾರ್ಗದರ್ಶಕನನ್ನು ನಂಬು ಎಂದು ಹೇಳಿದರು. ಅವರು ನಿಜವಾಗಿಯೂ ಈ ರೀತಿ ನನಗೆ ನೆರವಾದರು; ಆದರೆ ಅದು ಅವರು ಮನಸಾ ಯೋಚಿಸದಂತೆ ಮಾತ್ರ ಅಲ್ಲ.'

1904 ರಲ್ಲಿಯೇ ಅರವಿಂದ ಘೋಷರು ಗುರುವಿಲ್ಲದೇ ಯೋಗಾಭ್ಯಾಸವನ್ನು ಆರಂಭಿಸಿದರು. ಗುರುವಿಲ್ಲದೇ ಯೋಗವನ್ನು ಕಲಿತದ್ದು ಹೇಗೆ? ಅಂದು ಗಂಗಾ ಮಠದ ಬ್ರಹ್ಮಾನಂದರ ಒಬ್ಬ ಶಿಷ್ಯ ಅರವಿಂದರ ಗೆಳೆಯನಾಗಿದ್ದ. ಅವನಿಂದ ಯೋಗಾಭ್ಯಾಸದ ನಿಯಮವನ್ನು ಪಡೆದುಕೊಂಡರು. ಈ ಮೂಲಕ ದಿನಾಲು ಆರು ಅಥವಾ ಹೆಚ್ಚು ಗಂಟೆ ಕಾಲ ಪ್ರಾಣಾಯಾಮದಲ್ಲಿ ಕೂಡ್ರಲು ಅಭ್ಯಾಸ ಮಾಡಿಕೊಂಡರು. ಅಂದು ಅವರು ಯೋಗಾಭ್ಯಾಸ ಮತ್ತು ರಾಜಕಾರ್ಯ ಇವುಗಳ ನಡುವೆ ಯಾವುದೇ ತಿಕ್ಕಾಟ ಇಲ್ಲವೇ ಹೊಯ್ದಾಟವಿದ್ದಿಲ್ಲ. ಆದಾಗ್ಯೂ ಅವರಿಗೆ ಒಬ್ಬ ಗುರು ಬೇಕೆಂದೆನಿಸಿತು. ಆ ಶೋಧದಲ್ಲಿ ಒಬ್ಬ ನಾಗಾ ಸಂನ್ಯಾಸಿಯನ್ನು ಗಂಟು ಹಾಕಿಕೊಂಡರು. ಆದರೆ ಅವನನ್ನು ಗುರುವೆಂದು ಸ್ವೀಕರಿಸಲಿಲ್ಲ. ಆತನಿಂದ ಯೋಗಶಕ್ತಿಯ ಪ್ರಭಾವದಲ್ಲಿ ಮಾತ್ರ ನಂಬಿಗೆಯನ್ನು ಇನ್ನಷ್ಟು ದೃಢಪಡಿಸಿಕೊಳ್ಳಲು ಸಾಧ್ಯವಾಯಿತು. ಹೇಗೆಂದರೆ, ಅರವಿಂದರ ತಮ್ಮ **ಬಾರಿನ್** ಒಮ್ಮೆ ಉಗ್ರ ಮಲೆಜ್ವರದಿಂದ ಬಳಲುತ್ತಿದ್ದನು. ಆಗ ಈ ಸಂನ್ಯಾಸಿಯು

ಒಂದು ಗ್ಲಾಸ್ ನೀರಿನಲ್ಲಿ, ಏನೋ ಒಂದು ಮಂತ್ರವನ್ನು ಉಚ್ಚರಿಸುತ್ತ ಒಂದು ಚೂರಿಯಿಂದ ಕೊಯ್ದನು. ಬಾರಿನ್ ಆ ನೀರನ್ನು ಕುಡಿದ ಮಾತ್ರಕ್ಕೇ ಪೂರ್ತಿ ಗುಣಶಾಲಿಯಾದನು.

ಮುಂದೆ ಅರವಿಂದರು **ಬ್ರಹ್ಮಾನಂದರನ್ನೇ** ಭೆಟ್ಟಿಯಾದರು. ಅವರ ಪ್ರಭಾವ ಇವರ ಮೇಲೆ ಚೆನ್ನಾಗಿಯೇ ಆಯಿತು. ಆದಾಗ್ಯೂ ಅವರಿಗೆ ಯೋಗದ ವಿಷಯದಲ್ಲಿ ಸಹಾಯಕರಾರೂ ಸಿಗಲಿಲ್ಲ. ಬಡೊದೆಯಲ್ಲಿ ಲೇಲೆ ಭೇಟಿಯಾಗುವ ತನಕ. ಆದರೆ ಈ ಲೇಲೆ–ಸಮಾಗಮವೂ ತೀರ ಅಲ್ಪಕಾಲಿಕ; ಬರೀ ಮೂರು ದಿನಗಳು ಮಾತ್ರ. ಅರವಿಂದರು ಲೇಲೆಯವರ ಜತೆಗೆ ಕುಳಿತು ಧ್ಯಾನ ಮಾಡಿದರು.

ಮನಸ್ಸನ್ನು ಮೌನ(ಪ್ರಶಾಂತ)ಗೊಳಿಸಿ, ವಿಚಾರದ ಒತ್ತಡದಿಂದ ಅದನ್ನು ಮುಕ್ತಗೊಳಿಸುವದಕ್ಕಾಗಿ ಅರವಿಂದರು ಲೇಲೆಯವರ ಸೂಚನೆಗಳನ್ನು ಅನುಸರಿಸಿದರು. ಆಗ ಅಂಥ ಶಾಂತ ನಿರ್ವಿಕಲ್ಪ ಪ್ರಜ್ಞಾವಸ್ಥೆಯಲ್ಲಿ ಇದ್ದಕ್ಕಿದ್ದಂತೆ ಅನಿರ್ವಚನೀಯ ಬ್ರಹ್ಮ ಸ್ವರೂಪದ ಶಾಶ್ವತ ಅನುಭೂತಿ ಪ್ರಾಪ್ತವಾಯಿತು. ಈ ಶಾಂತಿ ಅವರಲ್ಲಿ ಬಹಳ ತಿಂಗಳುಗಳ ಕಾಲ ಉಳಿಯಿತು. ಆಗ ಚಟುವಟಿಕೆ ನಡೆದರೂ ಅದು ಕೇವಲ ಮೇಲ್ಪಾತಳಿಯಲ್ಲಿ ಮಾತ್ರ ಇದ್ದು, ಅಂತರಂಗದಲ್ಲಿ ಗಂಭೀರ ಶಾಂತಿ ತುಂಬಿತ್ತು. ಈ ವಿಷಯವನ್ನು **"ಶ್ರೀ ಅರಬಿಂದೋ ಮತ್ತು ಅವರ ಆಶ್ರಮ"** ಎನ್ನುವ ಗ್ರಂಥದಲ್ಲಿ ಅವರೇ ಹೇಳಿ ದಾಖಲಿಸಿದ ಕಥನವಿದು. ಅದೇ ಪುಸ್ತಕದಲ್ಲಿ ಅಂದಿನಿಂದ ಮುಂದೆ 'ಮದರ್ ಭಾರತಕ್ಕೆ ಬರುವತನಕವೂ ನನಗೆ ಯಾರಿಂದಲೂ ಏನೂ ಅಧ್ಯಾತ್ಮಿಕ ನೆರವು ಸಿಗಲಿಲ್ಲ ಎಂದು ಅವರೇ ಹೇಳಿರುವ ದಾಖಲೆ ಇದೆ. ಈ ಮುಂಚೆ ಸಿಗಲಿ ಅಥವಾ ಆ ಮೇಲೆಯೇ ಸಿಗಲಿ ನನ್ನ ಸಾಧನೆಗಳು ಪುಸ್ತಕಗಳನ್ನು ಅವಲಂಬಿಸಿಲ್ಲ, ನನ್ನ ಒಳಗಿನಿಂದಲೇ ಒತ್ತಿ ಬರುತ್ತಿದ್ದ ವೈಯಕ್ತಿಕ ಅನುಭವಗಳ ಮೇಲೆಯೇ ನನ್ನ ಸಾಧನೆ ನೆಲೆಸಿತ್ತು.' ಎಂದು ತಿಳಿಸಿದ್ದಾರೆ.

* * * * *

ಆದರೆ ಜೇಲಿನೊಳಗೆ ಅವರ ಹತ್ತಿರ 'ಗೀತಾ ಮತ್ತು ಉಪನಿಷತ್ತುಗಳು' ಇದ್ದವು. ಅಲ್ಲಿ ಗೀತೆಯಲ್ಲಿ ಹೇಳಲ್ಪಡುವ ಯೋಗದ ಅಭ್ಯಾಸವನ್ನು ಮಾಡುತ್ತಿದ್ದರು. ಉಪನಿಷತ್ತುಗಳ ನೆರವಿನಿಂದ ಧ್ಯಾನ–ಚಿಂತನಗಳನ್ನು ಮಾಡುತ್ತಿದ್ದರು. 'ಅವುಗಲಿಂದಲೇ ನಾನು ಮಾರ್ಗದರ್ಶನ ಪಡೆದಿದ್ದೇನೆ' ಎಂದಿದ್ದಾರೆ ಅರವಿಂದರು. ಪಾಂಡಿಚೇರಿಗೆ ಬರುವ ಮುನ್ನ ಅರವಿಂದರು ಯೋಗ ದರ್ಶನಕ್ಕೆ ಆಧಾರವಾದ ನಾಲ್ಕು ಸಿದ್ಧಿಗಳಲ್ಲಿ ಎರಡನ್ನು ಸಾಧಿಸಿಯಾಗಿತ್ತು. ಮೊದಲನೆಯ ಸಿದ್ಧಿಯು 1908 ಜನೇವರಿಯಲ್ಲಿ.

ಬಡೋದೆಯಲ್ಲಿ ಶ್ರೀ ಲೇಲೆಯವರೊಂದಿಗೆ ಸಮಾಧಿ ಸ್ಥಿತಿಯನ್ನು ಸಾಧಿಸಿಕೊಳ್ಳುವಲ್ಲಿ. ಅದು ದೇಶ–ಕಾಲಾತೀತ ಬ್ರಹ್ಮಾನುಭವದ ಪ್ರಜ್ಞೆ, ಮತ್ತು ಆ ಮೂಲಕ ಬಾಹ್ಯ ವಿಶ್ವದ ಅಸತ್ಯತೆಯ ಪ್ರತೀತಿ. ಎರಡನೇಯದು, ಅದು ಬ್ರಹ್ಮಾನುಭವದ ಅವಸ್ಥೆಯೊಂದಿಗೇ **'ವಾಸುದೇವಃ ಸರ್ವಮಿತಿ'** ಎನ್ನುವ ಈಶಾವಾಸ್ಯ ಪ್ರಜ್ಞೆ, ಇದು ಒದಗಿ ಬಂದದ್ದು ಅಲಿಪುರ ಜೇಲಿನಲ್ಲಿ. ಈ ಜೇಲಿನಲ್ಲಿ ಇರುವಾಗ ಅರವಿಂದರಿಗೆ ವಾಸುದೇವನ ಸಾನಿಧ್ಯವು ಎಲ್ಲೆಡೆಯಲ್ಲಿಯೂ ಗೋಚರಿಸಿತು. 'ಶ್ರೀಕೃಷ್ಣನು ನನ್ನ ಹತ್ತಿರಕ್ಕೆ ಬಂದು ಅವನ ತೋಳುಗಳ ತೆಕ್ಕೆಯಲ್ಲಿ ನಾನು ಹಲವು ರಾತ್ರಿಗಳನ್ನು ಕಳೆದೆನು' ಎನ್ನುವ ಈ ಭಗವತ್ ಸಾಕ್ಷಾತ್ಕಾರದ ಅನುಭವವನ್ನು ತಮ್ಮ ಸುಪ್ರಸಿದ್ಧ **'ಉತ್ತರಪಾಡಾ ಭಾಷಣ'**ದಲ್ಲಿ ಸಾರ್ವಜನಿಕವಾಗಿ ಬಹಿರಂಗಪಡಿಸಿದ್ದಾರೆ.

ಅಲಿಪುರ ಜೇಲಿನಲ್ಲಿ ಇದ್ದ ಹದಿನೆಂಟು ತಿಂಗಳು ಅವರು ಯೋಗ ಸಾಧನೆಯಲ್ಲಿಯೇ ಕಳೆದರು. ಹೊರಬರುವಾಗ ರಾಜಕಾರಣದಿಂದ, ಕ್ರಾಂತಿಕಾರೀ ಚಟುವಟಿಕೆಗಳಿಂದ ಸಂಪೂರ್ಣ ನಿವೃತ್ತರಾಗುವ ನಿರ್ಧಾರದಿಂದಲೇ ಹೊರಬಂದರು. ಹಾಗಾದರೆ ಜೇಲಿನಲ್ಲಿ ಅವರ ಆತ್ಯಂತಿಕ ಯೋಗ ಸಾಧನೆಯ ನಿರ್ದೇಶಕರು ಯಾರಾಗಿದ್ದರು? ಜೇಲಿನಲ್ಲಿ ಇರುವಾಗ ಹದಿನೈದು ದಿನಗಳ ಕಾಲ, ಅವರು ಏಕಾಂತ ಸಾಧನೆಯಲ್ಲಿ, ಧ್ಯಾನ ಧಾರಣೆಯಲ್ಲಿ ತೊಡಗಿದ್ದಾಗ, ಅವರಿಗೆ ಅನ್ನಿಸಿದ್ದು, **ಸ್ವಾಮಿ ವಿವೇಕಾನಂದರ** ಸಾನಿಧ್ಯ ಮತ್ತು ಅವರು ತನ್ನೊಂದಿಗೆ ಮಾತನಾಡುತ್ತಿರುವಂತೆ ಸ್ವಾಮೀಜಿಯ ಧ್ವನಿ. ಆ ಧ್ವನಿಯು ಒಂದು ನಿರ್ದಿಷ್ಟ ಪರಿಮಿತ ಅಧ್ಯಾತ್ಮಿಕ ಅನುಭವದ ಕ್ಷೇತ್ರದ ಕುರಿತೇ ಮಾತನಾಡುತ್ತಿತ್ತು. ಆ ಕುರಿತು ಏನನ್ನು ಹೇಳಬೇಕಾಗಿತ್ತೋ ಅದೆಲ್ಲವನ್ನೂ ಹೇಳಿದ ನಂತರ ಆ ಧ್ವನಿಯು ನಿಂತಿತು.

ಹಾಗಾದರೆ ಏನಿದರ ಅರ್ಥ? ಯಾವಾಗಲೂ **ಅರವಿಂದರಿಗೆ ಅವರ ಅರಿವೇ ಅವರಿಗೆ ಗುರುವಾಗಿತ್ತು.** ಅವರೇ ಹೇಳಿರುವಂತೆ, 'ಅಂತರ್ಜ್ಞಾನ, ಅಂತಃಪ್ರೇರಣೆ ನಮ್ಮ ಪ್ರಥಮ ಗುರು. ನಮ್ಮ ಮಾನಸಿಕ ವ್ಯಾಪಾರಗಳ ಹಿಂದೆ ಈ ಅಂತರ್ಜ್ಞಾನವು ಮುಸುಕಿನಲ್ಲಿ ಯಾವಾಗಲೂ ನಿಂತಿರುತ್ತದೆ. ಅದು ಅಜ್ಞಾತದ ಆಳದಿಂದ ಅತ್ಯಂತ ಉಜ್ವಲವಾದ ಸಂದೇಶಗಳನ್ನು ತಂದುಕೊಡುತ್ತದೆ. ಅದು ಮಾನವನ ಜ್ಞಾನದ ಉನ್ನತಿಯ (ಆರೋಹಣದ) ಆರಂಭ.'

ಹೀಗಾಗಿ ಶ್ರೀ ಅರವಿಂದರ ದರ್ಶನ ಮತ್ತು ಥಿಯೊಸೊಫಿ ಇವೆರಡರಲ್ಲಿ ಬಹಳಷ್ಟು ಸಾಮ್ಯವಿದೆ ಎಂದರೆ ತಪ್ಪಾಗದು. ಅದನ್ನು ವ್ಯಾಖ್ಯಾನಿಸುವದು ಈ ಬರಹದ ಹೊಣೆಗೆ (ವ್ಯಾಪ್ತಿಗೆ) ಹೊರತಾದದ್ದು. ಆದರೂ ಒಂದು ವಿಷಯವನ್ನು

ಇಲ್ಲಿ ಹೇಳಲೇಬೇಕು. ವಿಚಾರಗಳಿಗೆ ಒಂದು ಆಕಾರವಿರುತ್ತದೆಂದು ಥಿಯೋಸೊಫಿ ನಂಬುತ್ತದೆ. ಅರವಿಂದರೂ ಇದನ್ನು ನಂಬಿದ್ದರು. 'ಅದೆಲ್ಲ ನಿಜ, ನಾನು ಅದನ್ನು ನೋಡಿದ್ದೇನೆ' ಎಂದಿದ್ದಾರೆ. ಖಾಪರ್ಡೆಯವರು ಈ ಕುರಿತು ಕೇಳಿದ್ದಾಗ ಇದು ಶ್ರೀ ಅರವಿಂದರು ಕೊಟ್ಟ ಉತ್ತರವಾಗಿತ್ತು. ಮತ್ತೊಂದು ದಿನ ಇದೇ ರೀತಿಯಲ್ಲಿಯೇ 'ಒಮ್ಮೆ ನಾನು ಯೋಗಾಭ್ಯಾಸದಲ್ಲಿ ತೊಡಗಿದ್ದೆ. ಆಗ ಥಿಯೋಸಫಿಸ್ಟರ **'ಮಾಸ್ಟರ್ ಕೆ. ಎಚ್.' (ಕುಥುಮಿ)** ಎಂದು ಕರೆಯಲಾಗುವ ಗುರುವು ಬಂದು ನನ್ನ ಎದುರಿಗೆ ನಿಂತರು. ನನ್ನ ಯೋಗವನ್ನು ವೀಕ್ಷಿಸಿದರು. 'ನನ್ನನ್ನು ಶಿಷ್ಯನ್ನನಾಗಿ ಪರಿಗ್ರಹಿಸಿರಿ' ಎಂದು ಅವರನ್ನು ಕೇಳಿಕೊಂಡೆ. ಆಗ ಅವರು ಹೇಳಿದ್ದೇನೆಂದರೆ, **'ನಿನ್ನ ಗುರು ಬೇರೆ.'**

ಅಂದಾಗ ಇದೆಲ್ಲದರ ತಾತ್ಪರ್ಯವಾದರೂ ಏನು? ಅರವಿಂದರು ಗುರು ವಾದದಲ್ಲಿ ಶ್ರದ್ಧೆ ಇದ್ದವರೇ? ಏಕೆಂದರೆ ಶ್ರೀ ಲೇಲೆ ಅವರಿಗೆ ಗುರುವಾಗಲಿಲ್ಲ. ಕೇವಲ ಮಾರ್ಗದರ್ಶಕರಾಗಿದ್ದರು. ಅದು ಕೇವಲ ಮೂರು ದಿನದ ನಿರ್ದೇಶಕರಾಗಿದ್ದರು. ಆಗಲೂ ಸಹಿತ ಅರವಿಂದರಿಗೆ ಯೋಗದಷ್ಟೇ ಕಾವ್ಯದಲಿಯೂ ಆಸಕ್ತಿ. ಆದ್ದರಿಂದ ಲೇಲೆ ಅವರಿಗೆ ಈ 'ಶಿಷ್ಯ' ಸ್ಪಷ್ಟವಾಗಿಯೇ ಹೇಳಿದ್ದೇನೆಂದರೆ, 'ನಿಮ್ಮ ಸೂಚನೆಗಳನ್ನು ಪಾಳಿಸುವಾಗ ಅವು ನನ್ನ ಕಾವ್ಯ ಮತ್ತು ದೇಶ ಸೇವೆಗಳಿಗೆ ಅಡ್ಡ ಬರಬಾರದು.' ಈ ಷರತ್ತು ಒಪ್ಪಿಕೊಂಡೇ ಲೇಲೆ ಅವರಿಗೆ ಮಾರ್ಗದರ್ಶನ ನೀಡಲು ಒಪ್ಪಿಕೊಂಡಿದ್ದು. ಆದರೆ ಹಿಂದೆ ಹೇಳಿರುವಂತೆಯೇ, ಶೀಘ್ರವೇ ಶಿಷ್ಯ ಗುರುವಿನಿಂದ ಬೇರೆ ಆದರು. ಗುರುವನ್ನೇ ಹಿಂದೆ ಹಾಕಿ ಮುಂದುವರೆದರು. ಅವರಿಗೆ ಯೋಗ ಸಾಧನೆಯ ಮತ್ತು ಸಮಾಧಿ ನಿತ್ಯ ಪ್ರಜ್ಞೆಯಾಯಿತು. ಅವರಿಗೆ ಆಸನ ಪ್ರಾಣಾಯಾಮಗಳ ಅಗತ್ಯವೇ ಉಳಿಯಲಿಲ್ಲ. ಅಂತರಾತ್ಮನ ಆದೇಶವನ್ನೇ ಅರವಿಂದರು ಅನುಸರಿಸಿದರು. ಅಂದಿನಿಂದ ಅವರ ಕಣ್ಣಿಗೆ ಗುರು ಕಾಣಲಿಲ್ಲ. ಒಳಗಿವಿಗೆ ಕೇಳಿಸುವಂತೆ ದಿವ್ಯ ಧ್ವನಿಯಾಗಿ ಮಾತ್ರ ಮುಂದುವರೆದನು. ಇದೇ ರೀತಿಯಲ್ಲಿಯೇ ವಿವೇಕಾನಂದರೂ ಸಹಿತ 10 ದಿನಗಳ ಕಾಲ ಅಂತಃಪ್ರೇರಣೆ ನೀಡಿದರು. ಗುರು ಕುಥುಮಿ (ಇವರನ್ನು ಕುರಿತು ಅರವಿಂದರು 'ಮಹಾತ್ಮರು' ಎನ್ನುವ ಕಾವ್ಯವನ್ನೇ ಬರೆದಿದ್ದಾರೆ.) ಕೂಡ ಅವರಿಗೆ ಗುರುವಾಗಲಿಲ್ಲ.

ಹಾಗಾದರೆ 'ಗುರು'ವಿನ ಅವಶ್ಯಕತೆಯ ಬಗೆಗೆ ಶ್ರೀ ಅರವಿಂದರ ನಿಲುಮೆ ಏನು? ಈ ವಿಷಯವಾಗಿ ಪ್ರಿಯ ಶಿಷ್ಯ ದಿಲೀಪ ಕುಮಾರ ರಾಯ್ ಇವರಿಗೆ ಅವರು ಹೀಗೆ ಹೇಳಿದ್ದಿದೆ. ಈ ಪ್ರಶ್ನೆಯ ಬಗೆಗೆ ಸ್ಥೂಲವಾಗಿ ಎರಡು ರೀತಿ ಇವೆ. ಒಂದು ಬುದ್ಧನದು, ಇತರರಿಂದ ಕೆಲವೊಂದು ನಿರ್ದೇಶನ ಸಿಕ್ಕರೂ, ಗುರುವಿರಲಿ,

ಇಲ್ಲದಿರಲಿ, ಈ ಪಥವನ್ನು ಒಬ್ಬನೇ ತುಳಿದುಕೊಂಡು ಸಾಗುವದು. ನಿನ್ನ ಪರಿಶ್ರಮದಿಂದಲೇ ಬೆಟ್ಟ ಕಡಿದು ಹಾದಿ ಮಾಡಿಕೊಳ್ಳುವದು. ಇನ್ನೊಂದು ರೀತಿ ಎಂದರೆ, ಗುರುವನ್ನೇ ದೇವತ್ವದ ಪ್ರತಿನಿಧಿಯಾಗಿ ಸ್ವೀಕರಿಸಿ, ಅತನೇ ಮಾರ್ಗ ಬಲ್ಲವನು, ಅದನ್ನು ಇತರರಿಗೆ ತೋರಿಸಿ ತಿಳಿಸಿಕೊಡಬಲ್ಲವನು, ಇದು 'ಗುರುವಾದ'. ಆಶ್ರಮದಲ್ಲಿರುವ ಮುಮುಕ್ಷುಗಳೂ, ಸಾಧಕರೂ ಈ ದಾರಿ ಹಿಡಿದವರು.

ಇದಕ್ಕೇ ಗೀತೆಯು **'ತತ್‌ವಿದ್ಧಿ ಪ್ರಣಪಾತೇನ ಪರಿಪ್ರಶ್ನೇನ ಸೇವಯಾ'** ಎಂದು ಮೂರು ಬಗೆಯಾಗಿ ಹಾದಿ ಹಾಕಿ ಕೊಟ್ಟಿದೆ. ಈ ಪ್ರಣೋಪಾತ ಯಾರಿಗೆ, ಸೇವೆ ಯಾರದು? ಅದೇ ಜ್ಞಾನಿಯು, ಗುರುವಿನ ತತ್ವದರ್ಶಿಯ ಕುರಿತು ಈ ಮಾತಿದೆ. ಇಂಥ **'ಗುರುತ್ವಾಕರ್ಷಣ'**, ಸಾಧಕನನ್ನು ಕಂಡಾಕ್ಷಣ ಸೆಳೆದು ಸೂರೆ ಮಾಡಿಬಿಡುತ್ತದೆ – ಪರಮಹಂಸರು ವಿವೇಕಾನಂದರನ್ನು ತನ್ನವನನ್ನಾಗಿ ಮಾಡಿಕೊಂಡಂತೆ. **'ಯಂ ಲಬ್ಧ್ವಾ ಪರಮಂ ಲಾಭಂ ಮಾನ್ಯತೆ ನಾಧಿಕಂ ತತಃ'** ಈ ಲಾಭವನ್ನು ಹೊಂದಿದ ಶಿಷ್ಯನ ಆತ್ಮ ಅದಕ್ಕೂ ಮಿಗಿಲಾಗಿದ್ದು ಇನ್ನೇನೂ ಇಲ್ಲವೆನ್ನುವ ನಿರ್ಧಾರಕ್ಕೆ ಬರುತ್ತದೆ. **'ಯಸ್ಮಿನ್ ಸ್ಥಿತೊ ನ ದುಃಖೇನ ಗುರುಣಾಮಪಿ ವಿಚಾಲ್ಯತೇ'** ಅಂಥ ಒಂದು ಸಮಾಧಾನ ಕಂಡುಕೊಳ್ಳುತ್ತದೆ. ಅಂಥ ಗುರುತ್ವ ಶ್ರೀಅರವಿಂದರಿಂದ ಸಾವಿರಾರು ಜೀವಿಗಳಿಗೆ ಲಭಿಸಿದೆ. ಆದರೆ ಶ್ರೀ ಅರವಿಂದರಿಗೆ ಯಾರಿಂದ ಲಭಿಸಿತೋ ಹೇಳುವವರು ಯಾರು?

ಶ್ರೀ ಅರವಿಂದರ ದೃಷ್ಟಿಯಿಂದ **ಸಾಧನೆಯ ಘಟಕಗಳು; ಪ್ರಾರ್ಥನೆ, ಚಿಂತನೆ, ಏಕಾಗ್ರತೆ, ಭಗವತ್ ಸೇವೆ, ಭಕ್ತಿ ಆತ್ಮನಿವೇದನೆ ಮತ್ತು 'ಅಂತರಂಗದ ಕದ'ವನ್ನು ಸದಾ ತೆರೆದಿಡುವ ದಕ್ಷತೆ.** ಈ ರೀತಿಯಲ್ಲಿ ಅಂತರಂಗವನ್ನು ತೆರೆದಿಡುವದು ಭಗವಂತನಿಂದ ಅನುಗ್ರಹ ಪಡೆದುಕೊಳ್ಳುವದಕ್ಕಾಗಿ. ಈ ಅನುಗ್ರಹವು ನೇರವಾಗಿಯೂ ಬರಬಹುದು ಇಲ್ಲವೇ ಗುರುವಿನ ಮೂಲಕವೂ ಬರಬಹುದು.

ಇನ್ನು ಈ 'ಗುರುವಾದ'ದಲ್ಲಿರುವ ಒಂದು ತೊಡಕೆಂದರೆ, ಗುರುವಿನಲ್ಲಿ ಒಂದೊಮ್ಮೆ ಮಾನವೀಯ ದೌರ್ಬಲ್ಯಗಳು ಪರಿಮಿತಿಗಳು ಕಂಡುಬಂದರೆ? ಅದರಿಂದ ಶಿಷ್ಯನಾಗುವವನ ಪ್ರಗತಿಗೆ ತಡೆಯಾದರೆ? ಒಮ್ಮೆ ದಿಲೀಪ ಕುಮಾರ ರಾಯ ಈ ಪ್ರಶ್ನೆಯನ್ನು ಶ್ರೀ ಅರವಿಂದರಿಗೆ ಕೇಳುತ್ತಾರೆ. ಅದಕ್ಕೆ ಶ್ರೀ ಅರವಿಂದರು ಸ್ವಾರಸ್ಯಪೂರ್ಣ ಉತ್ತರದಲ್ಲಿ, 'ಗುರುವಿನ ಶಕ್ತಿಯಿಂದ ಕೆಲವೊಂದು ನಿರ್ದಿಷ್ಟವಾಗುವದು ನಿಜ; ಆದರೆ ಅದಕ್ಕೂ ಹೆಚ್ಚಿನ ಶಿಷ್ಯನ ಸಾಮರ್ಥ್ಯದಿಂದ ಆಗುತ್ತದೆ. ಈ ಕುರಿತು ಆಧುನಿಕ ಮನಸ್ಸು ಸುಮ್ಮನೇ ಗೊಂದಲಕ್ಕೆ ಈಡಾಗುತ್ತದೆ.' 'ಒಂದು ಸರಳವಾದ

ಸತ್ಯವೆಂದರೆ ಶಿಷ್ಯನು ಒಮ್ಮೆ ಒಬ್ಬ ಗುರುವನ್ನು ಭಗವಂತನ ಪ್ರತಿನಿಧೀಯೆಂದು ಸ್ವೀಕರಿಸಿದರೆ ತೀರಿತು. ಭಗವಂತನು ಅವನನ್ನು ಆ ಗುರುವಿನ ಮುಖಾಂತರವೇ ಸ್ವೀಕರಿಸುತ್ತಾನೆ. ಶಿಷ್ಯನು ಗುರುವಿಗೆ ಒಲಿದಾಗ ಆ ಮೂಲಕ ಭಗವಂತನಿಗೇ ಒಲಿಯುತ್ತಾನೆ. ಆದ್ದರಿಂದ ಗುರುವು ತನ್ನ ಮಾನವೀಯ ದೌರ್ಬಲ್ಯ, ಪರಿಮಿತಿಗಳು ಏನೇ ಇದ್ದರೂ ಶಿಷ್ಯನಿಗೆ ಅವನ ಸಾಧನೆಯಲ್ಲಿ ಸಹಾಯ ಮಾಡಬಲ್ಲ. ಹೀಗಾಗಿ ಗುರುವಿನ ದೋಷಗಳೇನಾದರೂ ಸಾಧಕನ ದಾರಿಯಲ್ಲಿ ಕಾಲ್ತೊಡಕಾಗಬೇಕಾದ್ದಿಲ್ಲ. ಇಷ್ಟೇ ಅಲ್ಲದೆ, ಆ ಗುರುವಿಗಿಂತಲೂ ಬೇಗ, ಮುಂಚೆಯೇ ಅದೇ ಗುರುವಿನ ಮುಖಾಂತರವೇ ಈ ಶಿಷ್ಯ ಭಗವಂತನನ್ನು ಪಡೆಯಬಹುದು, ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬಹುದು! ಅಂದರೆ ಗುರು ಶ್ರೀ ಅರವಿಂದರ ಅಭಿಪ್ರಾಯದಂತೆ ಗುರುವಿನ ಮಾನವೀಯ ದೌರ್ಬಲ್ಯಗಳಿಗಿಂತ, ಆತನ ಪರಿಮಿತಿಗಳಿಗಿಂತ ಅವನ ಆಧ್ಯಾತ್ಮಿಕ ಬಲವೇ ಶಿಷ್ಯನಿಗೆ ಪರಮಾತ್ಮನ ಸಂಪರ್ಕವನ್ನು ಒದಗಿಸಿಕೊಡಲಿಕ್ಕೆ ಇರುವ ಮಹತ್ವದ ಸಾಧನೆಯಾಗಿದೆ.

ನಿಜವಾಗಿಯೂ, ಶ್ರೀ ಅರವಿಂದರ ಈ ನಿಲುಮೆ ಗುರು–ಶಿಷ್ಯ ಸಂಬಂಧದ ಬಗೆಗೆ ಎಷ್ಟು ಆಶ್ವಾಸನದ್ದೋ ಅಷ್ಟೇ ಆಶ್ಚರ್ಯದಾಯಕವೂ ಆಗಿದೆ. ಈ ನಿಲುಮೆಯಿಂದಾಗಲೀ, ಶ್ರೀ ಲೇಲೆಯವರ 'ಗುರುತ್ವ'ದ ಒಗಟು ಬಗೆಹರಿಯಬಹುದು. ಲೇಲೆ ಶ್ರೀ ಅರವಿಂದರ ಎದುರು ಅಲ್ಪಶಕ್ತಿಯ, ಮಾನವೀಯ ಪರಿಮಿತಿಗಳ ವ್ಯಕ್ತಿ, ಆದಾಗ್ಯೂ ಕೆಲಮಟ್ಟಿಗೆ ಆಧ್ಯಾತ್ಮಿಕ ಬಲವುಳ್ಳ ವ್ಯಕ್ತಿ. ಆ ಮಟ್ಟಿಗೆ ಅವರು ಶ್ರೀ ಅರವಿಂದರ ಯೋಗಾಭ್ಯಾಸಕ್ಕೆ ಸಾಧಕರಾದರು. ಆದರೆ ಶ್ರೀ ಅರವಿಂದರ ಹಿರಿದಾದ ಸತ್ವ ಅದನ್ನು, ಅವರನ್ನು ಹಿಂದೆ ಹಾಕಿ ಮುಂದುವರೆಯಿತು. ನಿತ್ಯ ಸಮಾಧಿಯ ಬ್ರಹ್ಮಾನುಭೂತಿಯಲ್ಲಿ ಸದಾಕಾಲವೂ ಲೀನವಾಗಿರತೊಡಗಿತು. 'ಶಿಷ್ಯಾದಿಚ್ಛೇತ್ ಪರಾಜಯಂ' ಎಂಬುದರ ಸಾರ್ಥಕತೆ ಇಂತಹ ಉದಾಹರಣೆಯಲ್ಲಿ ಬರುತ್ತದೆ.

* * * * *

ಆದರೆ ಶ್ರೀ ಅರವಿಂದರ ಒಂದು ಮಾತು ಅವರಿಗೆ 'ಗುರುವಾದ'ದಲ್ಲಿ ಆಸಕ್ತಿ ಇದ್ದುದನ್ನು ತೋರಿಸುತ್ತದೆ. **"ಶ್ರೀಮಾತೆ ಭರತಕ್ಕೆ ಬರುವತನಕವೂ ನನಗೆ ಯಾರಿಂದಲೂ ಆಧ್ಯಾತ್ಮಿಕ ಸಹಾಯ ದೊರಕಲಿಲ್ಲ."** ಎನ್ನುವ ಮಾತನ್ನು ಗಮನಿಸಿದರೆ, ಇಲ್ಲಿ ಶ್ರೀಮಾತೆಯನ್ನು ತನ್ನ ಸಹಾಯಕರೆಂದು ಕರೆದಂತಿದೆ. ಇಬ್ಬರೂ ಅನ್ಯೋನ್ಯವಾಗಿ ಕೆಲಮಟ್ಟಿಗೆ ಗುರು–ಮಾರ್ಗದರ್ಶಕರೂ ಅಹುದು. ಅದೇ ಮಾರ್ಗದಲ್ಲಿ 'ಸಹ ಪ್ರವಾಸಿ'ಗಳೂ ಅಹುದು. 'ಶ್ರೀಮಾತೆ ಮತ್ತು ನನ್ನ ಬಗೆಗೆ ಹೇಳುವದಾದಲ್ಲಿ, ನಾವು

ಎಲ್ಲ ದಾರಿಗಳಲ್ಲೂ ನಡೆದು ನೋಡಬೇಕಾಯಿತು. ಎಲ್ಲ ಪದ್ಧತಿಗಳನ್ನೂ ಅನುಸರಿಸಬೇಕಾಯಿತು – ತೊಡಕುಗಳ ಪರ್ವತಗಳನ್ನೆ ದಾಟಲಿಕ್ಕೆ, ಕದನಗಳನ್ನು ಹೊರಲಿಕ್ಕೆ, ಗಾಯಗಳನ್ನು ಸಹಿಸಲಿಕ್ಕೆ, ದುರ್ಗಮಬೆಟ್ಟ, ಮರಳುಗಾಡು, ಜವುಳು ಭೂಮಿಗಳೊಳಗಿಂದ, ಪ್ರತಿಕೂಲಗಳ ದಟ್ಟಣೆಗಳ ಒಳಗೇ ದಾರಿಯನ್ನು ಕಂಡುಕೊಳ್ಳಬೇಕಾಗಿತ್ತು,' ಎನ್ನುವ ಈ ಮಾತು ಅವರೀರ್ವರ ಗುರು–ಶಿಷ್ಯ ಸಂಬಂಧವನ್ನು ಸೂಚಿಸುವಂತೆ ಇಲ್ಲವೇ ಇಲ್ಲ.

ಹಾಗೆ ನೋಡಿದರೆ, ಶ್ರೀಮಾತೆಗೇ ಶ್ರೀ ಅರವಿಂದರು ಗುರು. ಶ್ರೀಮಾತೆ ಮೊದಲು **ಮೀರಾ ರಿಚರ್ಡ್ಸ್**ರಾಗಿದ್ದಾಗ ಒಬ್ಬ ಆಧ್ಯಾತ್ಮಿಕ ಗುರುವಿನ ಶೋಧದಲ್ಲಿದ್ದರು. ಅವರು ಒಂದು ಪದಕವನ್ನು ತಮ್ಮ ಪತಿ ಪಾಲ್ ರಿಚರ್ಡರ ಕೈಗೆ ಕೊಟ್ಟು ಅದನ್ನು ಭಾರತದಲ್ಲಿರುವ ಆಧ್ಯಾತ್ಮ ಜೀವಿಗಳಿಗೆ ಕಾಣಿಸಿ, ಅವರ ಪ್ರತಿಕ್ರಿಯೆಯನ್ನು ತಿಳಿದುಕೊಳ್ಳಲು ಹೇಳಿದ್ದರು. (ಈ ಅವಧಿಯಲ್ಲಿ ಶ್ರೀಮತಿ ರಿಚರ್ಡ ಅವರು ಫ್ರಾನ್ಸದಲ್ಲಿ ಸಾಧನೆಯಲ್ಲಿ ತೊಡಗಿದ್ದರು) ಪಾಲ್ ಅವರು ಪಾಂಡಿಚೇರಿಗೆ ಬಂದು ಶ್ರೀ ಅರವಿಂದರನ್ನು ಕಂಡರು; ಅವರಿಗೆ ಮನಸೋತರು. ಪತ್ನಿಯಿತ್ತ ಪದಕವನ್ನು ಶ್ರೀ ಅರವಿಂದರಿಗೆ ತೋರಿಸಿದರು. ಆಗ ಶ್ರೀ ಅರವಿಂದರು **'ಇನ್ನೂ ತಡೆಯಬೇಕು' ('ನಾಟ್ ಯೆಟ್')** ಎಂದು ಉದ್ಗರಿಸಿದರಂತೆ. ಆ ಮಾತೊಂದೇ ಶ್ರೀಮತಿ ರಿಚರ್ಡ ಅವರಿಗೆ ಸಾಂಕೇತಿಕ ಪಲ್ಲವಿಯಂತೆ ಆಯಿತು. ಅವರು ನೇರವಾಗಿ ಪಾಂಡಿಚೇರಿಗೆ ಬಂದು, ಶ್ರೀ ಅರವಿಂದಾಶ್ರಮದಲ್ಲಿ ಅಂತೇವಾಸಿಗಳಾದರು. ಶೀಘ್ರದಲ್ಲಿಯೇ ವಿಶ್ವಮಾತೆಯೆನಿಸಿಕೊಂಡರು. (ಪಾಲ್ ರಿಚರ್ಡ ಆ ಮೇಲೆ ಜಪಾನಿಗೆ ಹೊಗಿ, ಅಲ್ಲಿಯೇ ಆಶ್ರಮವನ್ನು ಮಾಡಿಕೊಂಡು ಉಳಿದರು.) ಶ್ರೀ ಅರವಿಂದಾಶ್ರಮದ ಎಲ್ಲ ಸಾಧಕರ ಶಿಷ್ಯರ ಯೋಗಕ್ಷೇಮದ ಹೊಣೆಯನ್ನು ಹೊತ್ತುಕೊಂಡ ಶ್ರೀಮಾತೆ, ಪರಮ ವಾತ್ಸಲ್ಯಮಯಿ ಮಾತೆಯಾದರು.

ಅಂದಿನಿಂದ ಶ್ರೀ ಅರವಿಂದರೂ ಶ್ರೀಮಾತೆಯವರೂ ಆಧ್ಯಾತ್ಮಿಕ ಯೋಗ ಸಾಧನೆಯಲ್ಲಿ ಅನ್ಯೋನ್ಯರಿಗೆ ಗುರುವಾಗಿ ಶಿಷ್ಯರಾಗಿ, ತಮ್ಮ ಸಾವಿರಾರು ಶಿಷ್ಯರ ಸಾಧನೆಯಲ್ಲಿ ನಿರಂತರ ಮತ್ತು ಅಖಂಡ ಮಾರ್ಗದರ್ಶನ ಮಾಡತೊಡಗಿದರು. ಹತ್ತಿರವೇ ಇರಲಿ, ದೂರವೇ ಇರಲಿ, ತಮ್ಮನ್ನು ಅನನ್ಯವಾಗಿ ನಂಬಿದ ಸಾಧಕರಿಗೆ ಕಾಲಕಾಲಕ್ಕೆ ಉತ್ತೇಜನ, ಪ್ರೇರಣೆ, ಸಾಂತ್ವನ, ನಿರ್ದೇಶನಗಳನ್ನು ನೀಡುತ್ತಲೇ, ತಮ್ಮ ಪೂರ್ಣ ಯೋಗದ ದರ್ಶನವನ್ನು ಬಾಳಿ ಪೂರ್ಣಗೊಳಿಸಿದರು.

# ಶ್ರೀ ಅರವಿಂದರ "ಮಹಾತ್ಮರು"

## (ಮಹಾಮಹಿಮಾನ್ವಿತರು)

(ಮೂಲ: ಶ್ರೀ ಅರವಿಂದರ ಇಂಗ್ಲೀಷ್ ಕವನ 'ಮಹಾತ್ಮನ್')

**– ಅನುವಾದ: ಶ್ರೀ ಪುಟ್ಟು ಕುಲಕರ್ಣಿ**

**ಸಪ್ತ ಶೃಂಗಗಳು ಜೊತೆ ಸಪ್ತದಾರ್ಣ**ವಗಳಾವರಣವೀಗ ನನಗೆ.
ನನಗಿದೋ ಊರ್ಧ್ವದಲಿ ಅಷ್ಟಮಡಿಯ ತೇಜದಲಿ ಕಾಂತಿಯೊಳಗೆ
ವರ್ಣ–ವರ್ಣಗಳ ಹಲವು ಸರಣಿಯಲಿ ಪ್ರಜ್ವಲನಗೊಳುತಲಿಹನು
ಪಚ್ಚೆ ಜೊತೆ ನೀಲ, ಕಡುಗೆಂಪು ಮತ್ತೆ ಪಾಟಲವು ಲೀಲೆ ಭವ್ಯ
ನೇರಳೆಯು ಮತ್ತೆ ಸ್ವರ್ಣಮಯವರ್ಣ ಜೊತೆ ಶ್ವೇತಶುಭ್ರ ದಿವ್ಯ,
ಮತ್ತೆ ತಾನಿದೋ ಆ ಕಪ್ಪು–ಬಿಂಬ ಮರ್ತ್ಯ–ಗುಹೆಯಲ್ಲಿ ಚಲಿತ–
ಜ್ವಾಲೆಯಾಂತರ್ಯದಲಿ ನನ್ನನೀಗ, ಕಾಣುತಲಿ ಇಲ್ಲಿ ಕೆಳಗೆ.
ಅಮರತ್ವ ಲೋಕಲೋಕಗಳನೀಗ ಹರಡಲೆನೆ ವ್ಯಾಪ್ತಗೊಳಿಸಿ
ಶ್ರೇಣಿ–ಶ್ರೇಣಿಗಳ ಸೋಪಾನಪೀಠವನು, ನಿರತ ರಚಿಸಿ ನಿಲಿಸಿ,
ಮಹತಿಯಾ ಶಿಖರ ಶೃಂಗಗಳು ಸತತ ಆರೋಹಗೊಳುತ ಸಾಗಿ
ಆಕಾಶಮಾಲೆ ಮಾಲೆಗಳ ಎಡೆಗೆ ಸ್ಪಂದಗೊಳ್ಳಲೆನೆ ಸಾಗಿ,
ಮತ್ತಿದೋ ಇಲ್ಲಿ ಇವುಗಳಾ ಶೃಂಗದಲಿ ಶಿವನ ವಾಸವೀಗ.

ಈ ಬುವಿಯ ಜೊತೆಗೆ ನನ್ನ ಪೂರ್ವಜರು ಆತ್ಮೀಯ ಭಾವದುಂಬಿ
ಮರ್ತ್ಯ–ಮಾನವರ ಮೇಲೀಗ ನನ್ನ ತಹಬಂದಿ ನಿರತವಿರಲು
ಅವರೆಲ್ಲ ಈಗ ನನ್ನ ಅನುಸ್ಪಂದದನುಯಾಯಿಯಾಗಿ ಸಲಲು.
ಆದರೂ ನಾನು ವಾಡಿಕೆಯ ಪಥವ ಅನುಸರಣೆಗೊಳದೆ ಈಗ
ಮನುಕುಲವು ಸ್ಪಂದಗೊಳುತಿರುವ ದಿನದ ಚಿಂತನಗಳನ್ನು ಬೇಗ.
ಜ್ಞಾನದಾಹದಲಿ ಜೊತೆ ಘನಶಕ್ತಿ ಭಾವ ವಿಕಸನಕೆ ಸಾಥಿಯಾಗಿ
ದಿವ್ಯತ್ವವಿತ್ತ ಉಪಕಾರ ಕೊಡುಗೆ ಉಕ್ಕಿ ಭಾವಾನುರಾಗ
ಶತಶತದ ಜನ್ಮಗಳ ಪಥದಲಿಂತು ಅನುಸರಣೆಗೊಂಡಿತೀಗ.

ಜನ್ಮ–ಜನ್ಮಗಳ ಸರಣಿಗಳಲೀಗ ನಾನಿಂತು ಉದಿತ ಹೀಗೆ
ಮಾನವನ ಮತಿಯ ಉತ್ತುಂಗವನ್ನು ನಾ ಸ್ಪಂದಗೊಳುವವರೆಗೆ.
ಈಗಿದೋ ಇಲ್ಲಿ ಈ ಭರತವರ್ಷದಲಿ ನಾನು ಜನಿಸಿ ಬಂದೆ

ನಾನಿದೋ ಕುಥುಮಿ, ಕ್ಷತ್ರಿಯನು ಸಹಜ, ನಿಪುಣರಲಿ ನಿಪುಣನೆಂದೆ,
ದ್ವೈಪಾಯನನಾ ಪಂಥ ರೂಪಿತದ ಆ ಮಹಾನ್–ರಾಜಯೋಗಿ,
ವ್ಯಾಸನಾಗಮನ ಇಲ್ಲಿಗಿದೋ ಈಗ ಮಹತಿಯಾ ಮೂಲವಾಗಿ.
ಅವನ ಆ ಕೃಪೆಯ ದೃಷ್ಟಿಪಾತವದು ದೃಷ್ಟಾರ ಚಕ್ಷುಗಳಲಿ
ಮಂದಸ್ಮಿತನಾಗಿ, ಭವ್ಯತೆಯ ಜೊತೆಗೆ ತುಂತುಂಬಿ ಮಹಿಮೆಗಳಲಿ,
ಭದ್ರಧ್ವನಿಯಲ್ಲಿ ಅವ ಕೂಗಿ ಕರೆದ, ಓ ಕುಥುಮಿ ಆಲಿಸೀಗ
"ಒಟ್ಟುಗೂಡಿಸಿಕೊ ನಿನ್ನ ಗತಜನ್ಮದನುಭವದ ಗ್ರಹಿಕೆಗಳನು
ಹಲ–ಕೆಲವು ಜನ್ಮಗಳಲಿಂತು ಪಡೆದಿರುವ ಜ್ಞಾನಹಂತಗಳು
ಸ್ಮರಿಸಿಕೋ ಈಗ, ನಿನ್ನ ಗತದ ಆ ಸರ್ವಾತಿ ಫಲಿತಗಳನು,
ಮನುಜ ಜನ್ಮಗಳ ನಿನ್ನ ಆವರ್ತಗಳಲೀಗ ಬಂಧಗೊಳಿಸು ಸರ್ವ
ಸಾರಗೊಳ್ಳೀಗ ಆ ಅಷ್ಟಮಡಿಯ–ಶಕ್ತಿಯನ್ನರಿತು ಪೂರ್ಣ
ಅದು ತಾನೆ ನರನ ದೇವನಾಗಿಸುವ ಪರಿಪಕ್ವ ಪೂರ್ಣ ತಾಣ,

ಆ ರೀತಿ ಮತ್ತೆ ನೀನೀಗ ಮರಳಿ ಆಗಮಿಸಬೇಕು ಇತ್ತ
ನಿನ್ನ ಭವ್ಯಾತಿಭವ್ಯ ಕರ್ಮಗಳನೀಗ ಅರಿಯಬೇಕು ಚಿತ್ತ,
ಪ್ರಾಣವದು ಮೃತ್ಯುವಿಗೆ ಹರಣವಾಗದ ಹಾಗೆ ನಿನ್ನ ಅಂತರೇಚ್ಛೆ.

ಆ ಜಲಧಿಯಿಂದ ಶಿಖರಗಳ ಎಡೆಗೆ ನಾನೀಗ ಚಲನೆಗೊಂಡು
ಅಹೋರಾತ್ರಿಯಲು ಗುಡುಗುಡುತಲಿಹುದು ಕಾರುಣ್ಯರಹಿತವಾಗಿ
ಪಟ್ಟು ಬಿಡದಿರುವ ಒರಟೊರಟು ಧ್ವನಿಯ ಕರ್ಕಶದ ಗಾನದೊಳಗೆ
ಮೃಗಗಳಬ್ಬರದ ಕೂಗುಗಳ ಮಧ್ಯೆ, ಊಳಿಡುವ ಗಾಳಿಗಳಲಿ,
ಹಲ್ಲು ಮಸೆಯುತಿಹ ಆ ಕ್ರೂರ ರಕ್ಕಸರು ಸುತ್ತುವರೆದಿರುವರಿಲ್ಲಿ,
ದಶಜನ್ಮಗಳಲಿ ವೇದನೆಯ ಸಹಿಸುತಲಿ ಮನುಜ ಅರಿಯುತಿಹನೊ
ನಾನರಿತುಕೊಂಡೆ ಈ ಮೂರು–ದಿನದಿ ಹಠಯೋಗ ಯೋಗದಲ್ಲಿ,

ಈ ಬುವಿಯ ಜನರು ಇದನೀಗ ಅರಿವ ಸಾಮರ್ಥ್ಯ ಕಳೆದುಕೊಂಡು,
ಆದರೀ ವಿಷಯ ಲಂಕೆಯಾ ಅರಸು ರಾವಣಗೆ ಸ್ಪಂದವಿತ್ತು,
ಭಕ್ತ ಧ್ರುವ ಸಹಿತ ಸಫಲಪೂರ್ವಕವಾಗಿ ಪಡೆದನಿದರ ಸ್ವತ್ತು,
ಆ ಹಿರಣ್ಯಕಶಿಪುವು ಕೂಡ ಸೂಕ್ತದಲಿ ನಿರ್ವಾಹಗೊಂಡನಾಗ
ಇದು ಆ **ಲೆಮೆರಿಯನ್ ರಾಜವಂಶ** ಆರಾಧಿಸಿದ್ದ ಯೋಗ.

ಅದೇ ಅನುಭೂತಿ ನನ್ನ ಧಮನಿಧಮನಿಗಳಲಿ ಸಲಿಲಗೊಂಡು
ಬೃಹದ್ದೇಹಿಗಳ ಸಾಮರ್ಥ್ಯ ಬಲವು ಇಲ್ಲೀಗ ತುಂಬಿಕೊಂಡು,
ದೇವಗಣಗಳಾ ತೋಷ–ಆಹ್ಲಾದ, ಸಿದ್ಧರಾ ಸಿದ್ಧ ಗರಿಮೆ
ಬೆಳೆಬೆಳೆದು ದೀರ್ಘ ಜೊತೆ ಶಕ್ತಿದುಂಬಿ ದಾಪುಗಾಲಿನಲಿ ದೇವ
ಅವನಂತೆ ನಾನು ಈಗಿದೋ ಬಂದೆ ವ್ಯಾಸನಾ ಬಳಿಗೆ ಸಾಗಿ;
ದಟ್ಟೈಸಿಕೊಂಡ ಜಟಾರಾಶಿಗಳ ಅಲ್ಲಾಡಿಸುತ್ತ ಅವನು
ಬಿಗುಮುದ್ರೆ ಬಿಗಿತದಧರಗಳಲೀಗ ನಿರಾಕರಿಸಿ ನನ್ನ,
"ಪರಿಶುದ್ಧವಿಲ್ಲ ನಿನ್ನ ಅಭಿವ್ಯಕ್ತಿ, ಅಬ್ಬರಿಸಿ ಉಲಿದನವನು.

ಕೋಪದಲಿ ಕುದಿದು ನಾನಡೆದೆನತ್ತ ಹಿಮಗಿರಿಯ ಶೃಂಗಗಳಲಿ,
ಮತ್ತಿದೋ ಊರ್ಧ್ವದುತ್ತುಂಗದೊಳಗೆ, ನಿಷ್ಕಂಪ ಶೀತದೊಳಗೆ
ಹಲವು ವರ್ಷಗಳ ಮೌನ–ಧ್ಯಾನದಲಿ ತಲ್ಲೀನಗೊಂಡೆ ನಾನು.

ಈಗಿದೋ ಇಲ್ಲಿ ಆಗಮಿಸಿ ಜ್ಞಾನಧಾರೆಗಳು ನನ್ನ ಮೇಲೆ
ಜೊತೆಜೊತೆಗೆ ಸುತ್ತ ನಿಂತಿರುವ ಶಿಖರಗಳ ತುಂಬ ಲೀಲೆ
ಅವತರಣಗೊಳುವ ಆ ಶಕ್ತಿ ತಾನು ಪದದಿ ಕುಲುಕಾಟವಿತ್ತು.

ಚಣಬಿಡುವು ಕೊಡದೆ ಕಣಕಣದಿ ಪೂರ್ಣ ಕಾಳಜಿಯ ತುಂಬಿಕೊಂಡು
ಬಲು ನಿಯಮ ನಿಷ್ಠೆಯಲಿ ನಿಖರವಾಗಿ ಯುಗವೊಂದರವಧಿಯೊಳಗೆ
ಯಾತನೆಯಲಂತು ಸಾಧನೆಯ ಗೈವ ದಿಸೆಯೆಡೆಗೆ ಸಾಗುವವರ
ಮೀರಿ ನಾನೀಗ ಈ ಮೂರು–ದಿನದಿ ರೂಢಗೊಂಡಿಹೆನು ರಾಜಯೋಗ.
ಕಾಳಿಯಾರಾಧನೆಯ ರಾಜಯೋಗವಿದು ಅಲ್ಲ ತಾನು ಈಗ.

ಆದರೀಗಿದೋ ಪರಿಪಕ್ವ ಜ್ಞಾನದೆಡೆ ಇರುವ ಪಥದ ಗುರುತು ತಾನು,
ಪಾವಿತ್ರ್ಯಪೂರ್ಣ ಜೊತೆ ಬಲದಲೀಗ ಆ ದೈತ್ಯ–ಬಲಿಯು ತಾನು,
ಈ ಯೋಗವರಿತ ಮತ್ತದನೇ ಇತ್ತ ಮನುಕುಲಕೆ ಕೊಡುಗೆ ತಾನು,
ಪ್ರಾಚೀನ ಯುಗದ **ಅತಲಾಂತ ರಾಜವಂಶಗಳ** ಯೋಗವಿದುವು.

ಸೂರ್ಯತೇಜದೊಲು ಹೊಳೆಹೊಳೆಯುತೀಗ, ವ್ಯಾಸನೆಡೆ ನಾನು ಬಂದೆ.
ಮಂದಸ್ಮಿತನವನು, ಮನದುಂಬಿ ಹರಸಿ, ತಾನುಲಿದನಿಂತು ಈಗ,
" ಈ ಜಗದ ಮಹತಿಗಧಿಪತಿಯನೀಗ ನೀನು ಅರಿಯಲೆಳಸು,

ಅವನೇ ಶ್ರೀಕೃಷ್ಣ, ಬಲುಗೂಢವಾಗಿ ಈ ಬುವಿಯಲೀಗ ನೆಲೆಸಿರುವ;
ನೀನರಿತುದೆಲ್ಲವನು ಜೊತೆಗೆ ನಿನ್ನ ಕಲೆಯೆಲ್ಲವನ್ನು ನೀಡು ಅವಗೆ.

ಮರ್ತ್ಯಮಾನವರ ಮಧ್ಯೆ ನಿನ್ನನ್ನೆ ಆಯ್ಕೆಗೊಳಿಸಿಕೊಂಡು
ಜ್ಞಾನರಕ್ಷಣೆಯ ಅವನ ಲೀಲೆಗಿದೋ, ಈ ರೀತಿ ನಿನ್ನನಿಂದು–
ಇದು ಸುಲಭ ಸಾಧ್ಯವಿಹ ಕಾರ್ಯ, ಈ **ತೃತೀಯ ಯುಗ**ದಿ
ಮನುಜಗಿಹ ದೇವಸದೃಶ–ಬಲಗಳನು ರಕ್ಷೆಯಲಿ ಇಡುವ ಯೋಗ,
ಆದರೀಗಿದೋ ಕರಿಕಾಳಿಯಿಲ್ಲಿ ಆಗಮಿಸಿ ಇದನು ಕಂಡು,
ಈ ಬುವಿಯನೀಗ ತೊರೆದನವನೀಗ ದ್ವಾರಕೆಯ ಮೂಲದಿಂದ,
ಇಲ್ಲಿಂದ ಮುಂದೆ ಬರಿಬರಿದು ಪ್ರಶ್ನೆ, ನಿರೀಕ್ಷೆಯಾ ಸರಣಿ ಬಂಧ,
ಅಳಿವಿನಾ ಸುಳಿಗೆ ಸಿಲುಕಿರುವ ಪೀಳಿಗೆಯ ಉಳಿಸೆ ರಕ್ಷೆ ಹಸ್ತ
ಜ್ಞಾನವನು ನೀನು ರಕ್ಷಿಸಿರೆ ಜ್ಞಾನ ಸಿದ್ಧವಿದೆ ಲೋಕರಕ್ಷಣೆಗೆ,
ಪರಿಪೂರ್ಣ ರೂಪ ಪಡೆದು ಶ್ರೀ ಕೃಷ್ಣ ಮರಳಿ ಬರುವವರೆಗೆ.

ನಿನ್ನ ಈ ಮಹತ್–ಕಾರ್ಯಗಳ ಹೊಣೆಯ ನೀನೀಗ ಪೂರ್ಣಗೊಳಿಸು
ಈ ಲೋಕಲೋಕಗಳಲೀಗ ಸತತ ಆನಂದ ತುಂಬಿ ನಿಲಿಸು,
ಸಾವಿರದ ವರುಷ ವರುಷಗಳಲಿದುವು ತಾನಿರಲು ನಿತ್ಯವಾಗಿ
ಮಗುದೊಂದು ಕಲ್ಪ ಆಗಮಿಸಿ ರೂಪುಗೊಳುವನಕ ಸತತವಾಗಿ,
ಆ ಸಪ್ತಋಷಿಗಳಾ ಮಂಡಳದಿ ನೀನೊಂದು ಸ್ಥಾನ ಹೊಂದಿ."

ಈ ಬುವಿಯಲೀಗ ನಿನ್ನ ಜ್ಞಾನವನು ವಿಸ್ತಾರಗೊಳಿಸಲೆಂದು
ಭರತವರ್ಷದಧಿರಾಜಮಹಲುಗಳು ಅವನನ್ನು ಕಾಣದಿರಲು,
ಶಾಂತತೆಯ ತಾಣದಾಶ್ರಮಗಳಲ್ಲಿ, ದೇವಳದಿ ಶುದ್ಧವಿರದೆ,
ಕ್ರಯದ–ವಿಕ್ರಯದ ಧನಿಕರಾಶ್ರಯದ ತಾಣದಲು ನಿಲದು ತಾನು;
ಬ್ರಾಹ್ಮಣನೊ ಕ್ಷತ್ರಿಯನೊ ದೇವ ನೆಲೆಸಲೆನೆ ಇಲ್ಲ ದೇಹ
ವೈಶ್ಯಗಣ ಬೇಡ ಶೂದ್ರನಿಗು ಬೇಡ, ಅದನೀಗ ಇಟ್ಟು ದೂರ.

ಬಲು ದೀರ್ಘ ದೀರ್ಘ ಚಲಿಸುತಲಿ ಬಂದೆ ನಾನರಸಿಕೊಂಡು ಇಲ್ಲಿ
ನಕ್ಷತ್ರ ಮಿನುಗಿ ಪಥದೆಡೆಗೆ ಕರೆವ ತಾಣದೆಡೆ ಬಂದು ಇಲ್ಲಿ,
ಬರಿಬರಿದು ನಿಂತ ಆ ಪರ್ಣಕುಟಿಯ ನಾನರಸಿಕೊಂಡು ಬಂದೆ

ಆ ವನ್ಯದಭೀರರಾ ಬಗೆಗೆ ವಿಕ್ಷಿಪ್ತನಿವ ಕುಳಿತ ತಪಸಿ,
ಮೂಕನಂತೆಯೇ ಪೀಠಗೊಂಡಿಹನೊ, ಇಲ್ಲದಿರೆ ನಗುತಲಿಹನೊ?
ಮತ್ತಿದೋ ಓಟ ಜೊತೆಜೊತೆಗೆ ನೆಗೆತ ಕುಣಿತ ಬೆಟ್ಟದೆದೆ ಮೇಲೆ,
ಅವನ ಆನಂದಕಿರುವ ಆದಿಯನು ಅವನಾರಿಗೂ ತಿಳಿಸಲಿಲ್ಲ
ಆ ಗವಸ ಹಿಂದೆ ಅದನಿರಿಸಿಕೊಂಡೆ ತಾ ನಗುತ ನಿಂತನಲ್ಲ

ಲೋಕ ಲೋಕಗಳನೊಳಗೊಂಡ ಆತ್ಮವಿದು ಈಗ ದೃಷ್ಟ–ಚಿತ್ತ
ಅವನೆದುರು ನಾನು ದೀರ್ಘದಂಡದಲಿ ಎರಗುತಿರಲು ಸಹಿತ,
ಆದರವ ಜಿಗಿದು ಮತ್ತೆ ತಾ ನೆಗೆದು ಓಡಿದನು ದೂರದತ್ತ
ಮತ್ತೆ ಅವನೀಗ ಅವನ ಪಾದದಲಿ ನನ್ನ ಅಪ್ಪಳಿಸಿ ರಭಸದಲ್ಲಿ,
ನನ್ನೆಲ್ಲ ಜ್ಞಾನ ನನ್ನಿಂದ ಕಳಚಿ ಮುಕ್ತಗೊಂಡು ಹೊರಗೆ
ಸರ್ವ ಬಯಕೆಗಳು ಸರ್ವ ಸಾಮರ್ಥ್ಯ ಸರ್ವಸ್ವ ಶೂನ್ಯವಾಗೆ
ಆ ಆದಿಮೂಲದಲಿ ಸೇರಿ ಕರಗಿ ಪೂರ್ಣದಲಿ ಪೂರ್ಣವಾಗ
ನಾನಲ್ಲಿ ಕುಳಿತೆ, ಬಲುಮುಗ್ಧ ಶಿಶುವಿನಂತಾಗಿ ತಿಳಿಯದಾಗ.

ಉಚ್ಚ ಧ್ವನಿಯೊಳಗೆ ನಗುನಗುತಲವನು ನುಡಿದ ನನ್ನೆಡೆಗೆ ಇಂತು–
“ನಿನ್ನ ಕೊಡುಗೆಗಳ ನೀನೆ ಮರಳಿ ಪಡೆ, ಓ ಭಿಕಾರಿ ನೀನು!”
ನುಡಿನುಡಿಯುತವನು ಜಿಗಿಜಿಗಿದು ನಡೆದ ಆ ಅವತರಣದಾಳದೆಡೆಗೆ.
ಆಗಲ್ಲಿ ನಾನು ಪೂರ್ಣ–ಬೆಳಕಿನಲಿ ಜೊತೆ ಸಾಮರ್ಥ್ಯ ತುಂಬಿಕೊಂಡು
ಆತ್ಮದಾನಂದದಲಿ ತೇಲಿ ಮೇಲೆ ವಲಯಗಳ ಆಚೆ ಸಾಗಿ–
ಅಲ್ಲಿರುವ ದೇವಗಣಗಳನು ಮೀರಿ ಮತ್ತೀಗ ಮೇಲೆ ಮೇಲೆ
ಈಗಿದೋ ನನ್ನ ಈ ಮನುಜ ದೇಹವನು ಹಿಮದ ಹೊದಿಕೆಗಿಟ್ಟು;

ಈಗಿದೋ ಇಲ್ಲಿ ಒಟ್ಟುಗೂಡಿದರು ಅನ್ಯರಿದೊ ನನ್ನ ಸುತ್ತ
ಕ್ಷಮತೆಯಲಿ ಕೊಂಚ ಬಲದುಂಬಿಕೊಂಡು ಇಲ್ಲದಿರೆ ಕ್ಷೀಣಗೊಂಡೊ,
ನನಗೆ ಸಹಕರಿಸೆ ನೆರವೀಯಲೆಂದು ಆಗಮಿಸಿ ಬಂದರಿತ್ತ,
ಆದರೀಗಿದೋ ನನ್ನ ಜಾಗ್ರತಿಯು ವಿಷ್ಣುವಿನ ಕೃಪೆಯ ಕೊಡುಗೆ
ಇಂತಾಗಿ ಈಗ ನನ್ನ ನರರೂಪದೆಡೆಗೆ ನಾನವತರಣಗೊಂಡು ಇಳೆಗೆ,
ಮತ್ತಿದೋ ಜೊತೆಗೆ ಮನುಜಲೋಕಗಳ ಮಧ್ಯದಲಿ ಚಲಿತಗೊಂಡೆ,
ನನ್ನನನುಸರಿಸಿ ಬಂದ ಅನುಸ್ಪಂದ ಜೀವಗಳ, ಒರೆಗೆ ಇರಿಸಿ,

ಸಲ್ಲದಿರೆ ಅಲ್ಲಿ ನಿರಾಕರಿಸುತ್ತ, ಆತ್ಮಗಳ ದೃಢೀಕರಿಸಿ,
ಆ ಪ್ರಾಣಕೀಗ ಇವು ಪಾತ್ರಗೊಂಡು ಪರಿಪೂರ್ಣವಾಗಲೆಳಸಿ;

ಆ ಸ್ವರ್ಣಯುಗಕೆ ಕಾಳಿ ತಾನಿಲ್ಲಿ ಆಗಮಿಸಿ ಬಂದು ಈಗ;
ಈ ಬುವಿಯ ಲೋಹ ಪರುಷದೊಡಗೂಡಿ ಚಿನ್ಮಯದ ಕಾಂತಿಯಾಗ.
ಈ ಯೋಗವೀಗ ಮನುಕುಲಕೆ ಮತ್ತೆ ತುಡಿದು ಸಂಯೋಗಗೊಳಲು
ಸರ್ವ–ಸರ್ವಸ್ವಕೀಗದುವು ಮತ್ತೆ ಪಡಮರಳಿ ದೊರಕುತಿರಲು,
ಪಂಥ–ಪಂಥಗಳು ಸ್ಥಗಿತಗೊಳ್ಳುತಲಿ ಸಮತತ್ತ್ವ ವ್ಯಾಪಿಸಿರಲು,
ಕರ್ಕಶದ ತರ್ಕ ಗಂಭೀರ ವಾದ ಸರಣಿಗಳು ಮೃತಿಗೆ ಸಂದು,
ಈಗಿದೋ ನಾಸ್ತಿಕತೆಯಿಂತು ಬುವಿಯ ತಾಣದಲಿ ನಾಶವಾಗಿ
ಜ್ಞಾನಸ್ಫೋಟದಲಿ ಸಿಡಿಸಿಡಿದು ಚೂರ್ಣಗೊಂಡಿಲ್ಲಿ ಅರಿವಿಗಾಗಿ,
ವಿಶ್ವಪ್ರೇಮದ ಜೊತೆಗೆ ಭ್ರಾತೃತ್ವವೀಗ, ಜೊತೆಜೊತೆಗೆ ಜಾಣ್ಮೆ ಸ್ಪಂದ
ಮರಳಿ ತಾನಿಲ್ಲಿ ಶ್ರೀ ಕೃಷ್ಣನಾ ಲೋಕವನು ಪಡೆದು ಛಂದ.

---

**ಟಿಪ್ಪಣಿಗಳು:**

**ಸಪ್ತ ಶೃಂಗಗಳು ಜೊತೆ ಸಪ್ತದಾರ್ಣವಗಳು:** ಜಾಗ್ರತಗೊಂಡ ಸರ್ವಸ್ವವೂ ಶಕ್ತಿಮಯವಾಗಿರುತ್ತದೆ. ಹೀಗಾಗಿ ಶಕ್ತಿಯು ಜಾಗ್ರತಿಯನ್ನು ರೂಪಿಸುತ್ತದೆ. ಚಿತ್ ಶಕ್ತಿಯಾಗಿರುವ ಹಂತದಲ್ಲಿ ಇದು ಕಾರ್ಯಪ್ರವೃತ್ತಗೊಳ್ಳುತ್ತದೆ. ಶಕ್ತಿಯು ತನ್ನಲ್ಲಿ ತಾನೇ Kenetic-Forceನ್ನು ರೂಪಾಂತರದ ಹಂತದಲ್ಲಿ ರೂಪಿಸಿಕೊಳ್ಳುತ್ತದೆ. ಇದನ್ನೇ ತಪಸ್ಸನ್ನಾಗಿಸಿ ಸರ್ವ ಕ್ರಿಯೆಗಳ ಆಧಾರವನ್ನಾಗಿಸಿಕೊಳ್ಳುತ್ತದೆ. ಅದಕ್ಕಾಗಿ, ಎಲ್ಲ ಶಕ್ತಿಯೂ ಚಿತ್ತಿನ ರೂಪವೇ ಆಗಿದ್ದು, ಆತ್ಮದಿಂದ, ಪ್ರಕಾಶದ ಮೂಲಕವೇ ಪ್ರಕಟಗೊಳ್ಳುತ್ತದೆ. ಇದು ಅದರ ಮೂಲ ಉದ್ದೇಶವೂ ಆಗಿದೆ. ಆದರೆ ಪ್ರಕಾಶದಲ್ಲಿಯೂ ಸಹಿತ ಹಲವಾರು ವಿಧಗಳಿವೆ. ಇದು ಚಿತ್ತಿನ ಹಲವು ವಿಧದ ರೂಪಾಂತರದಿಂದ ನಿರ್ಮಾಣಗೊಳ್ಳುತ್ತವೆ. ಶಾಶ್ವತದ ಪ್ರಕಾಶಮಾನವಾದ ಜ್ಯೋತಿಪುಂಜದಿಂದ ಹೊರಹೊಮ್ಮುವ ಏಳು ಕಿರಣಗಳು ಏಕೀಭವಿಸಿಕೊಂಡು, ಸೂರ್ಯನ ತೆರದಲ್ಲಿ ಸಾಕಾರ ಪಡೆದುಕೊಂಡು ಮಾನವನಿಗೆ ಕಾಣುತ್ತದೆ; (ಆದಿತ್ಯವತ್ ತಮಸಃ ಪರಸ್ತಾತ್). ಅವಿನಾಶಿಯಾದ ಹಂತದಲ್ಲಿ ಪ್ರಕಟಗೊಳ್ಳುತ್ತದೆ. ಇದರ ಮೂಲಕವೇ ಏಳೂ ಏಳೂ ಕಿರಣಗಳು ಲೋಕದ ಸೃಷ್ಟಿಗೆ – ಅನುಷ್ಠಾನಕ್ಕೆ

–ಅಭಿವ್ಯಕ್ತಿಗೆ–ರೂಪಾಂತರಕ್ಕೆ ಕಾರಣವಾಗುತ್ತವೆ. ಸತ್–ಚಿತ್–ಆನಂದ–ವಿಜ್ಞಾನ–ಮನಸ್ಸು–ಪ್ರಾಣ–ಅನ್ನ ಇವು ಸಪ್ತ ಆಯಾಮ ಹೊಂದಿದ, ಸಪ್ತ ರೂಪಗಳಲ್ಲಿ ಪ್ರಕಟಗೊಳ್ಳುವ ಚಿತ್ತಿನ ಸ್ವರೂಪಗಳೇ ಆಗಿವೆ. ಇದನ್ನೇ ಜ್ಯೋತಿರ್ಮಯ ಬ್ರಹ್ಮನ ಸಗುಣತತ್ತ್ವ ಎನ್ನುತ್ತಾರೆ.

ಇನ್ನು – ಪ್ರಕಾಶ, ಅಗ್ನಿ, ವಿದ್ಯುತ್, ಜ್ಯೋತಿ, ತೇಜಸ್ಸು, ದೋಷ ಮತ್ತು ಛಾಯಾ ಇವು ಏಳು ಜ್ಯೋತಿರ್ಮಯ ಬ್ರಹ್ಮನ ನಿರ್ಗುಣ ತತ್ತ್ವದ ರೂಪಗಳಾಗಿವೆ(ಗುಣಗಳಾಗಿವೆ).

**ಲೆಮೆರಿಯನ್ ರಾಜವಂಶ:** ಫ್ಯಾಸಿಪಿಕ್ ಸಾಗರದಲ್ಲಿ ಮುಳುಗಿ ಕಣ್ಮರೆಯಾದ ದೇಶವೆಂದು ಸಂಶೋಧನೆಗಳಿವೆ. ಇದು ಇಲ್ಲಿ ಪ್ರಥಮ ಖಂಡವೆಂದು ಪರಿಗಣಿತವಾಗಿತ್ತು. ಪೂರ್ವ ದೇಶಗಳ ಪಾಲಿಗೆ ಇದು ಸ್ವರ್ಗಸದೃಶವಾದ ಸ್ಥಳವಾಗಿತ್ತು. ಭಾವೋತ್ಕರ್ಷದ, ರಹಸ್ಯಮಯ ಭೂಮಿ ಇದಾಗಿತ್ತು. ಈ ಲೆಮೂರಿಯಾಳನ್ನು ಭೂರಕ್ಷಕಿ ಎಂದು ಆರಾಧಿಸಲಾಗುತ್ತಿತ್ತು.

**ಅತಲಾಂತ ರಾಜವಂಶಗಳು (ಅಟ್ಲಾಂಟಾ ರಾಜವಂಶಗಳು): ಅಟಲಾಂಟಾ ಪ್ರದೇಶವಿದು.**

**ತೃತೀಯ ಯುಗ; ದ್ವಾಪರ ಯುಗ.**

# ಯುವಚೇತನಗಳಿಗೆ "ಶ್ರೀ ಅರವಿಂದರು"

**– ಅನುವಾದ: ಪುಟ್ಟು ಕುಲಕರ್ಣಿ**

**3**

## ಪರಮಾತಿ ಪರಮ ಇಚ್ಛೆಯಲ್ಲಿ...



ತೀವ್ರ ಬಡತನದ ತಾಪ ಎಷ್ಟಿರುತ್ತದೆ ಗೊತ್ತೇ? ನೀವು ತಿಳಿದುಕೊಳ್ಳಲು ಆಶಿಸುತ್ತೀರಾ? ಆ ಸಂದರ್ಭದಲ್ಲಿ ಅನುಭವಿಸಿರುವ ವಿಷಯಗಳನ್ನು ಶ್ರೀ ಅರವಿಂದರೇ ಭಾರತ ಸರಕಾರದ ಆಗಿನ ಕಾರ್ಯದರ್ಶಿಗಳಿಗೆ ಈ ರೀತಿ ಬರೆದಿದ್ದಾರೆ, "ನಾನು ಏಳು ವರ್ಷದವನಿದ್ದಾಗಲೇ ನನ್ನನ್ನು ಇಂಗ್ಲಂಡಿಗೆ ಕಳಿಸಲಾಗಿದೆ. ನನ್ನ ಜೊತೆಗೆ ಇಬ್ಬರು ಸಹೋದರರೂ ಇದ್ದರು. ಆದರೆ ಕಳೆದ ಏಳೆಂಟು ವರ್ಷಗಳಿಂದ ನಾವು ಯಾವುದೇ ಸಹಾಯ–ಸವಲತ್ತುಗಳು ಮತ್ತು ನಮಗೆ ಸಲಹೆ ಕೂಡ ಯಾವ ಇಂಗ್ಲೀಷ ಮಿತ್ರರಿಂದಲೂ ದೊರೆಯಲಿಲ್ಲ. ನಮ್ಮ ತಂದೆ ಡಾ॥ ಕೆ.ಡಿ. ಘೋಷ ಖುಲಾನಾ(ಬಂಗಾಲದ ಒಂದು ಊರು)ಸಹಿತ ಮೂವರಿಗೂ ದಿನನಿತ್ಯದ ಖರ್ಚುವೆಚ್ಚಕ್ಕೂ ಹಣ ಒದಗಿಸುವಲ್ಲಿ ಅಸಮರ್ಥರಾಗಿದ್ದಾರೆ. ಹೀಗಾಗಿ ಈ ದೀರ್ಘಾವಧಿಯಲ್ಲಿ ನಾವು ತುಂಬಾ ಮುಜುಗರದ ಪರಿಸ್ಥಿತಿಯಲ್ಲಿ ಇರಬೇಕಾಯಿತು."

ಹೀಗಾಗಿ ಮೂವರು ಹಣಕಾಸಿನ ತೊಂದರೆ ಅನುಭವಿಸಬೇಕಾಯಿತು. ಆದರೆ ಈ ಅವಧಿಯಲ್ಲಿ ಅರವಿಂದರು ಸಿವಿಲ್ ಸರ್ವಿಸ್ (ಆಯ್.ಸಿ.ಎಸ್) ಅಭ್ಯರ್ಥಿಯಾಗಿದ್ದರು. ಇದಕ್ಕಾಗಿ ಇವರಿಗೆ ಮುಂದೆ ಶಿಷ್ಯ ವೇತನವೂ ದೊರೆಯಿತು. ಇದರ ಜೊತೆಜೊತೆಗೇ ಸಂತ ಪಾಲ್ ಹೆಸರಿನ ವಿದ್ಯಾರ್ಥಿ ವೇತನವೂ ದೊರೆಯಿತು. ಈ ಹಣವನ್ನೇ ಇಬ್ಬರು ಸಹೋದರರಿಗೂ ಒದಗಿಸಿ ಸಹಕರಿಸಿದರು. ಹೀಗಾಗಿ ಇವರಿಗೇ ಎಂದು ಏನೂ ಉಳಿಯುತ್ತಿರಲಿಲ್ಲ. ಸಹೋದರರ ಬಗೆಗೆ ಅವರಿಗೆ ಇದ್ದ ಅಪ್ರತಿಮ ಪ್ರೀತಿಯನ್ನು ಇದು ತೋರಿಸುತ್ತದೆ. ಇದೇ ತಾನೆ ಉದಾರತೆ ಮತ್ತು ನಾಯಕತ್ವದ ಲಕ್ಷಣ!

ಕೇಂಬ್ರಿಜ್ ಸಂಸ್ಥೆಯಲ್ಲಿ ಶಿಕ್ಷಕರಾಗಿದ್ದ ಓರ್ವ ಹಿರಿಯ ಜಿ.ಡಬ್ಲ್ಯು. ಪ್ರೊಥೆರೊ ಎನ್ನುವವರು ಅರವಿಂದರ ಕಷ್ಟದ ದಿನಗಳನ್ನು ತುಂಬ ಹತ್ತಿರದಿಂದ ಕಂಡಿದ್ದರು. ಈ ವಿಷಯವಾಗಿ ಅವರು, "... ಈ ವ್ಯಕ್ತಿಯು ಕೇವಲ ಸಾಮರ್ಥ್ಯವನ್ನಲ್ಲದೇ ಚಾರಿತ್ರ್ಯವನ್ನೂ ಹೊಂದಿದ್ದಾನೆ. ಅರವಿಂದನಿಗೆ ಅತ್ಯಂತ ಕಠೋರವಾದ ದಿನಗಳಿವು, ಜೊತೆಗೆ ವ್ಯಾಕುಲತೆಯಿಂದ ತುಂಬಿದ್ದವು. ಎರಡು ವರ್ಷಗಳ ದೀರ್ಘ ಅವಧಿಯವರೆಗೆ ಇಂಥ ಸ್ಥಿತಿ ಮುಂದುವರೆದಿತ್ತು. ಮನೆಯ ಕಡೆಯಿಂದ ಬರುವ ಸಹಾಯವಂತೂ ಸಂಪೂರ್ಣವಾಗಿ ನಿಂತು ಹೋಗಿತ್ತು. ಜೊತೆಗೆ ಇಬ್ಬರು ಸಹೋದರರನ್ನೂ ನೋಡಿಕೊಳ್ಳುವ ಹೊಣೆಗಾರಿಕೆಯನ್ನು ಅರವಿಂದರು ನಿಭಾಯಿಸಬೇಕಾಗಿತ್ತು. ಆದರೆ ಇವರ ಸ್ಥೈರ್ಯ ಮತ್ತು ದೃಢತೆ ಮಾತ್ರ ಎಂದಿಗೂ ಕುಂಠಿತಗೊಳ್ಳಲಿಲ್ಲ... ಇದೇ ಸ್ವಭಾವವೇ ಅವರ ಜೀವನದ ಉದ್ದಕ್ಕೂ ಮುಂದುವರೆದುಕೊಂಡು ಬಂದಿದೆ... ಎಂತಹದೇ ಗಂಭೀರ ಸ್ಥಿತಿಯಲ್ಲಿಯೂ ಸಹಿತ ಸರಳತೆಯಲ್ಲಿ ಇದ್ದರು..." ಎಂದು ಬರೆದಿದ್ದಾರೆ.

ಅರವಿಂದರ ಕುರಿತು ಈ ಹೇಳಿಕೆಯಲ್ಲಿ ಅತ್ಯಂತ ಸ್ಪಷ್ಟವಾದ ಮತ್ತು ಮುಕ್ತ ಅಭಿಪ್ರಾಯಗಳನ್ನು ಓರ್ವ ಇಂಗ್ಲೀಷ ವ್ಯಕ್ತಿಯಿಂದ ಬಂದಿರುವದು, ಅವರು ಅರವಿಂದರನ್ನು ಹೇಗೆ ಅರ್ಥೈಸಿಕೊಳ್ಳುತ್ತಿದ್ದರು ಎನ್ನುವದರ ಕುರಿತು ಅತ್ಯಂತ ಆಸಕ್ತಿದಾಯಕ ವಿಷಯವಾಗಿದೆ.

**ಕಾವ್ಯ!**

ಇಂತಹ ಎಲ್ಲ ಕಷ್ಟಗಳ ಮಧ್ಯದಲ್ಲಿಯೇ, ಸಾಕಷ್ಟು ಆಹಾರ ಮತ್ತು ಬಟ್ಟೆಗಳೂ ಇಲ್ಲದೇ, ಅರವಿಂದರು ತಮ್ಮ ಅಧ್ಯಯನವನ್ನು ಮಾತ್ರ ನಿಷ್ಠೆಯಿಂದಲೇ, ಏಕಾಗ್ರಚಿತ್ತರಾಗಿ ತಮ್ಮ ಅಭ್ಯಾಸ ಮುಂದುವರೆಸಿಕೊಂಡು, ಕವಿತೆಗಳನ್ನು ಬರೆಯತೊಡಗಿದರು. ಹೌದು ಕವನಗಳನ್ನು! ಅದೂ ಇಂಗ್ಲೀಷ, ಗ್ರೀಕ್ ಮತ್ತು ಲ್ಯಾಟಿನ್ ಭಾಷೆಗಳಲ್ಲಿ ತಮ್ಮ ಕಾವ್ಯ ರಚನೆಯನ್ನು ಮುಂದುವರೆಸಿದರು. ಅವರು ತಮ್ಮ ಹದಿನಾರನೇ ವಯಸ್ಸಿನಲ್ಲಿ ಇದ್ದಾಗ ಕವನಗಳನ್ನು ಬರೆಯಲು ಪ್ರಾರಂಭಿಸಿದರು. ಅದು ಅವರ ಜೀವಮಾಣ ಪರ್ಯಂತವೂ ಮುಂದುವರೆದುಕೊಂಡು ಬಂದಿದೆ. ಅವರ ಕೃತಿಗಳಲ್ಲಿ ರತ್ನಪ್ರಾಯವಾದುದು 'ಸಾವಿತ್ರಿ'. ಇದೊಂದು ಮಹಾಕಾವ್ಯ. ಅವರ ಕೃತಿಗಳಲ್ಲಿ ಶಿಖರಶೃಂಗ.

(ಸಶೇಷ)

## ಶ್ರೀ ಅರವಿಂದರ ಕಾವ್ಯ
## "ಈಲಿಯನ್"

**– ಅನುವಾದ: ಡಾ॥ ಬಿ.ಆರ್.ಭೀಡ್, ರಾಯಚೂರು**

**ಮೊದಲ ಹೊತ್ತಿಗೆ: ಆಗಮನದ ಹೊತ್ತಿಗೆ (1/2)**

ಕಾಡುಗಳಲ್ಲಿ ಅನೇಕ ಕಮರಿಗಳು, ಕಂದರಗಳು, ಸೀಳುಗಳು ಇವೆ. ಅವುಗಳ ಮುಖಾಂತರ ಕಾಡು ಊರ್ಧ್ವಮುಖವಾಗಿ ನೋಡುತ್ತವೆ, ಅವುಗಳಿಗೆ ತಮ್ಮ ನೆಳಲುಗಳನ್ನು ನೋಡುವ ಅವಕಾಶ ಒದಗಿದಂತಾಗಿದೆ. ಉಷೆಯ ಆಗಮನದೊಂದಿಗೆ ನದೀಕಂದರಗಳಲ್ಲಿ ಕಂಡ ತಮ್ಮ ಪ್ರತಿಫಲನವನ್ನು, ಬಿಂಬವನ್ನು ಕಾಡು ಕಾಣುವಂತಾಗಿದೆ.

•ಇಲ್ಲಿ personification ಮತ್ತು simile ಎರಡೂ ಅಲಂಕಾರಗಳ ಸಮ್ಮಿಶ್ರ ಪ್ರಯೋಗವನ್ನು ಕಾಣಬಹುದು. ॥1.7॥

ಉಷೆಯು ಇಡಾ ಬೆಟ್ಟಗಳ ಮೇಲಿಂದ ಟ್ರಾಯ್ ಪಟ್ಟಣದ ಮೇಲೆ ಇಳಿದಂತೆಲ್ಲ ಅದರ ಕಾಂತಿ ಹೆಚ್ಚುತ್ತ ಹೋಯಿತು. ಉಷಾ ದೇವತೆಯ ಸ್ವರ್ಣ ಚರಣಗಳು ಹೊಳೆ ಹೊಳೆದು ತೋರತೊಡಗಿದವು.

•personification ಮತ್ತು metaphor ಎರಡೂ ಅಲಂಕಾರಗಳ ಸಮ್ಮಿಶ್ರ ಪ್ರಯೋಗವಿದೆ.

ಉಷಾ ದೇವತೆ ಆ ಬೆಟ್ಟದ ಸಾಲುಗಳ ಮೇಲೆ ಹಾಗೆಯೇ ಭೂಶಿರದ ಮೇಲೆ ತನ್ನ ಕಾಂತಿಯ ಅಲಂಕಾರಗಳನ್ನು ತೊಡಿಸಿದಳು.

•headland – ಭೂಶಿರ. ಅಂದರೆ ನದಿಯು ಸಮುದ್ರಕ್ಕೆ ಬಂದು ಸೇರುವ ಇಕ್ಕಟ್ಟಾದ ಕಣಿವೆಯಂಥ ಪ್ರದೇಶ.

ಉಷೆಯು ಇಡೀ ಟ್ರಾಯ್ ನಗರದ ಮೇಲೆ ನಿಷ್ಪಕ್ಷಪಾತ, ಸಮಾನ, ಅನುದ್ವಿಗ್ನ ದೃಷ್ಟಿ ಹಾಯಿಸುತ್ತ ಭವಿಷ್ಯದಲ್ಲಿ ಕಾದಿರುವ ಅನಾಹುತವನ್ನು ಸ್ವತಃ ಕಾಣುತ್ತ, ಅದರ ಮುನ್ಸೂಚನೆಯನ್ನು ಕೂಡ ಜನರಿಗೆ ನೀಡುತ್ತ ನಿಧಾನವಾಗಿ ಕೆಳಗಿಳಿದಳು.

ಉಷೆ ಯಾವಾಗಲೂ ನಿಷ್ಪಕ್ಷಪಾತಳು. ಅವಳಿಗೆ ಒಳ್ಳೆಯವರೂ ಅಷ್ಟೇ, ಕೆಟ್ಟವರೂ ಅಷ್ಟೇ; ಒಳ್ಳೆಯದೂ ಅಷ್ಟೇ ಕೆಟ್ಟದ್ದೂ ಅಷ್ಟೇ. ಆ ದಿನದ ಅವರವರ ಅದೃಷ್ಟವನ್ನು ದುರಾದೃಷ್ಟವನ್ನು ಆಕೆ ಯಥಾ ಯೋಗ್ಯವಾಗಿ ಹಂಚುವುಳು. ॥ 1.8 ॥

ಇದು ಟ್ರಾಯ್ ನಗರದ ಪರಿಸರದ ವರ್ಣನೆ; ಇದೀಗ ಅರುಣೋದಯದ ಕಾಂತಿಯಲ್ಲಿ ಕಾಣುವ ನಗರವನ್ನು, ಅದರ ಸೌಂದರ್ಯವನ್ನು ವರ್ಣಿಸುತ್ತಾರೆ.

ಉಷೆಗೆ ತನ್ನದೇ ಆದ ಪ್ರಭಾಪೂರ್ಣ ಸಂದೇಶವನ್ನು ಬಿತ್ತರಿಸಲಿಕ್ಕಿದೆ. ಅಂತೆಯೇ ಕಳೆದುಹೋಗುವ ಭೀತಿಯಿಂದ ಅಳುವ ಕತ್ತಲೆಯನ್ನದು ಲೆಕ್ಕಿಸುವುದಿಲ್ಲ. ದುರಾದೃಷ್ಟದ ಈಲಿಯನ್ ಪಟ್ಟಣದ ನಿಗೂಢಮಯ ವೈಭವದ ಮೇಲೆ ಅದು ಕೆಲ ಕಾಲ ತಟಸ್ಥ ಭಾವದಿಂದ ನಿಲ್ಲುತ್ತದೆ.

ಅಲ್ಲಿನ ಎತ್ತರದ ಗೋಪುರಗಳು, ಗುಮ್ಮಟಗಳು ಆ ಮುಂಜಾವಿನ ಬೆಳಕಿನ ಬಾಲ ಅಗ್ನಿಯ ಸ್ಫಟಿಕ ಸದೃಶ ಕೆಂಪು ನಾಲಿಗೆಯಂತೆ ಹೊಳೆಯುತ್ತವೆ. ಆ ಗೋಪುರದ ಕಲಶಗಳು (ಕಳಸ) ವಿವಿಧ ವರ್ಣಛಾಯೆಯನ್ನು ಪ್ರತಿಫಲಿಸುತ್ತ ಸಾಲುಸಾಲಾಗಿ ಒಪ್ಪವಾಗಿ ಜೋಡಿಸಿದ ಸೂರ್ಯದೇವನ ವೀಣೆಯ ಸ್ವರಗಟ್ಟುಗಳ ಹಾಗೆ ಕಂಗೊಳಿಸುತ್ತಿದ್ದವು. ॥ 1.9 ॥

ಟ್ರಾಯ್ ಪಟ್ಟಣವು ಇವೆಲ್ಲದರ ಮೇಲೆ, ಅಲ್ಲಿನ ಪ್ರೀತಿ, ಪ್ರೇಮ, ನಗು, ಸಂತೋಷಗಳ ಮೇಲೆ ನಿಂತಿರುವುದೇನೋ ನಿಜ; ಆದರೆ, ಈ ದಿನದ ಬೆಳಗು ಆ ಪಟ್ಟಣ, ಬೀದಿಗಳು, ತೋಟದ ಮನೆಗಳು, ಬೃಹದರಮನೆ, ಪೇಟೆ, ದೇವಸ್ಥಾನಗಳ ಮೇಲೆ ಬೆಳಕು ಚೆಲ್ಲುತ್ತಿರುವುದು ಕೊನೆಯ ಬಾರಿಗೆ! ಆ ದಿನ (ಆ ಪಟ್ಟಣವೇ ನಾಶವಾಗಲಿದೆ) ಪುರುಷರೆಲ್ಲ ಬಹುತೇಕ ಸಾವನ್ನಪ್ಪಲಿದ್ದಾರೆ, ಸ್ತ್ರೀಯರು ಅಸಹಾಯರಾಗಿ ರೋದಿಸಲಿದ್ದಾರೆ; ಅಪಾರ ಸೌಂದರ್ಯವೇನೋ ಇದೆ, ಆದರೆ ಅದೆಲ್ಲ ಅತಿ ಶೀಘ್ರದಲ್ಲಿ ನಾಶವಾಗಲಿದೆ, ಸಾವಿನ ಕತ್ತಿ ಎಲ್ಲರ ಮೇಲೆ, ಎಲ್ಲದರ ಮೇಲೆಯೂ ಬೀಸಲಿದೆ.

ಇದೆಲ್ಲ ಆ ದೇವತೆಗಳ ಆಟ, ಅವರು ಬರೆದು ಆಡಿಸುವ ನಾಟಕ; ಅಂದಿನ ಉಷೆಯು ಆ ದುರಂತ ನಾಟಕದ ಘೋರ ಕೆಂಪು ಪರದೆಯನ್ನು ಅನಾವರಣಗೊಳಿಸಿತು.

ಇದೆಲ್ಲ ಮೊದಲೇ ಯಾರಿಗೂ ಗೊತ್ತಾಗುವುದಿಲ್ಲ, ಎಲ್ಲವೂ ಅಗೋಚರ–ವಾಗಿರುವುದು, ಜನಾಂಗದ್ದೇ ಆಗಲಿ, ನಾಡಿನದೇ ಆಗಲಿ, ನಾಳಿನ ಭವಿಷ್ಯವು

ನಿಶ್ಚಿತವಾಗಿದ್ದರೂ ಮುಂದಾಗಿ ಯಾರಿಗೂ ಗೊತ್ತಾಗದು. ಉಷೆಗೆ ಇದಾವುದೂ ಸಂಬಂಧವೇ ಇಲ್ಲ, ತನ್ನ ಪಾಡಿಗೆ ತಾನು ನಿಶ್ಚಿಂತೆಯಾಗಿ ಮುನ್ನಡೆಯುತ್ತದೆ.

ಅಲ್ಲಿ ನಿಜವಾಗಿ ಸಾವಿನ ವ್ಯವಹಾರವೇ ನಡೆಯಲಿದೆ. ಆದರೆ ಯಾರಿಗೂ ಅದರ ಅರಿವಿಲ್ಲ, ಅಂದಿನ ದಿನದ ಘಟನೆಯ – ವ್ಯವಹಾರದ ಬೀಜವನ್ನು ಯಾರು ಬೀರಲಿರುವುರೋ, ಸಂಜೆಗೆ ಯಾರು ಫಸಲು ಕೊಂಡೊಯ್ಯಲಿದ್ದಾರೋ ಯಾರೂ ಅರಿಯರು. ॥ 1.10 ॥

ಟ್ರಾಯ್ ಸುತ್ತಣ ಬಯಲು ಧ್ಯಾನ ಸ್ಥಿತಿ ಅಥವಾ ಚಿಂತ(ನಾ)ಮಗ್ನ ಸ್ಥಿತಿಯಲ್ಲಿದೆಯೇನೋ ಅನ್ನುವಷ್ಟು ಮೌನವಾಗಿದೆ (ರುದ್ರ ಮೌನ ತುಂಬಿಕೊಂಡಿದೆ) ಎತ್ತರದ ಗಿರಿ ಶಿಖರಗಳಲ್ಲೆಲ್ಲ ಬಹು ದೀರ್ಘಕಾಲದಿಂದ ಸಮಾಧಿಯಂಥ ನಿಶ್ಚಲ ಸ್ಥಿತಿ ಇದೆ.

ಸೂರ್ಯನನ್ನು ತನ್ನ ಬೆನ್ನ ಹಿಂದೆ ಬಿಟ್ಟುಕೊಂಡು ಉಷೆ ಬರುತ್ತಿದ್ದರೆ, ಅದೊಂದು ರೀತಿಯ ಶಾಂತತೆಯ ಅನುಭವದ ಜೊತೆಗೆ ರೌದ್ರತೆಯ ಅನುಮಾನ ಕೂಡ ಆಗುತ್ತದೆ.

ಉಷೆಯ ಹಿಂದಿನಿಂದ ಬಂಗಾರದ ರಾಸು ಹಿಂಡಿನಂತೆ ಹೊಳೆಯುತ್ತ ಸೂರ್ಯ ದೇವನ ಕಿರಣಗಳ ಪುಂಜ ಆಗಮಿಸುತ್ತದೆ. ಅದೇನೋ ಬೆಳಕಿನ ಹಿಂಡು ನಿಜ, ಆದರೆ ತನ್ನ ಜೊತೆ ಒಗಟಿನಂತೆ ಗ್ರೀಕ್ (Hellas) ಸಮುದಾಯಕ್ಕೆ ಕೂಡ ಅಪಾಯವನ್ನು ತಂದೊಡ್ಡಿತು. ॥ 1.11 ॥

•ಇದು ಅಂದಿನ ವಾಸ್ತವ ಪರಿಸ್ಥಿತಿ. ಯುದ್ಧವಂತೂ ನಿಶ್ಚಿತವಿದೆ, ಆದರೆ ಸಾವು ಯಾರಿಗೆ ಕಾದಿದೆಯೋ ಯಾರಿಗೂ ಗೊತ್ತಿಲ್ಲ. ಭವಿಷ್ಯದ ಬೀಜವನ್ನು ಮಾನವನೇ ಬಿತ್ತುವುದು ನಿಜ; ಆದರೆ ಯಾರು ಆ ಫಲವನ್ನು, – ಅದು ಹಿತವೇ ಇರಲಿ, ಅಹಿತವೇ ಇರಲಿ, – ಉಣ್ಣುವುರೋ ಯಾರಿಗೂ ತಿಳಿಯದು!

•ಸಾವಿತ್ರಿಯಲ್ಲಿ ಮೊದಲ ಹೊತ್ತಿಗೆ ಮೊದಲ ಸರ್ಗದ ಕೊನೆಯ ಸಾಲು This was the day when Satyavan must die, ಅದೇ ರೀತಿಯಲ್ಲಿ ಈ ಹೊತ್ತಿಗೆಯಲ್ಲಿ ಕೂಡ This was the day on which Troy must fall ಅನ್ನುವ ರೀತಿಯಲ್ಲಿ ಇಡೀ ಹೊತ್ತಿಗೆಯ ಚಿತ್ರಣವನ್ನೇ ಇಲ್ಲಿ ನೀಡಿರುವುದು ಕಂಡುಬರುತ್ತದೆ.

ಇದುವರೆಗೆ, ಅಲೌಕಿಕ ದೇವತೆಯಾದ ಉಷೆಯು ತಂದ ಸಂದೇಶವನ್ನು ಸಾಂಕೇತಿಕವಾಗಿ, ಆದರೆ ಸ್ಪಷ್ಟವಾಗಿ ಹೇಳಿದ್ದಾಯಿತು; ಮುಂದಿನ sceneನಲ್ಲಿ ಮಾನವ ರಾಯಭಾರಿ ಅಥವಾ ದೂತನ ಆಗಮನದೊಂದಿಗೆ ವಾಸ್ತವ ದುರಂತ ನಾಟಕ ಆರಂಭವಾಗುತ್ತದೆ.

ಈಗ ಟಾಲ್ಥಿಬಿಯಸ್ ದೂತನು ಟ್ರಾಯ್ ಪಟ್ಟಣಕ್ಕೆ ಬರುವುದನ್ನು ವರ್ಣಿಸುತ್ತಾರೆ. ಇಲ್ಲಿ ಬಹು ಸುಂದರವಾದ simile ಇದೆ.

ವೇಗವಾಗಿ ಆಕಾಶದ ಸ್ವರ್ಣ ವೀಧಿಗಳಲ್ಲಿ ದಿವ್ಯ ರಥಾರೂಢನಾಗಿ ಬರುವ ಸೂರ್ಯನಿಗೆ ಸಮನಾಗಿ, ಅವನ ಜೊತೆಜೊತೆಯಾಗಿ ಪ್ರಾಣವು, ವಿಶ್ವ ಪ್ರಾಣವೂ ಸಹ ಧಾವಿಸುತ್ತದೆ.

ಎಲ್ಲಿಗೆ? ಗೊತ್ತಿಲ್ಲ. ಆತ್ಮವು ಎಳೆದೊಯ್ದತ್ತ ಓಡುತ್ತದೆ. ಅದೇನು ಮಾನವನೇ ಆಯ್ದುಕೊಂಡ ದಾರಿಯೋ, ಅವನ ನಿಯತಿಯೇ ಅವನನ್ನು ಕೊಂಡೊಯ್ಯುವುದೋ ತಿಳಿಯದು.

ಆದರೆ ಅವನು ಕಾಲಪುರುಷನ ಭಾರದಡಿ ನಲುಗಿ ನೊಂದು ಹೋಗುವುಂತೂ ನಿಜ. ಹಳೆಯದನ್ನು ಮರೆತು, ಭೂತವನ್ನು ಹಿಂದಕ್ಕೆ ತಳ್ಳಿ ವರ್ತಮಾನದ ಕ್ಷಣದಲ್ಲಿ ಭವಿಷ್ಯದತ್ತ ಸಾಗುತ್ತಾನೆ (ವರ್ತಮಾನದಲ್ಲಿ ಜೀವಿಸದೇ ಭವಿಷ್ಯಕ್ಕಾಗಿ ಬಡಿದಾಡುವುದೇ ಅವನ ಬದುಕೇನೋ! ಅದೇ ಅವನ ಕರ್ಮವೇನೋ!) ಅವನಿಗೆ ಕಾಲಪುರುಷ ಕಾಣನು, ಕಾಲಪುರುಷನ ಪದಾಹತಿ ಮಾತ್ರ ಕಾಣುವುದು, ಓಟ ಮಾತ್ರ ಕಾಣುವುದು. ॥ 1.12 ॥

ಕಾಲ ಪುರುಷನು ಕಾಣುವುದಿಲ್ಲ, ಆದರೆ ಅವನು ನಮ್ಮ ಮೇಲೆ ಹೇರುವ ಭಾರವನ್ನು ನಾವು ಸಹಿಸಲೇ ಬೇಕು. ಯಾವುದೇ ಘಟನೆ ಇರಲಿ, ಅದರ ಭಾರ, ಅದರ ಬಿಸಿ, ಅದರ ಮೇಲ್ಮೈ ಮಾತ್ರ ನಮಗೆ ಗೋಚರವಾಗುತ್ತದೆ, ನಮ್ಮ ಅರಿವಿಗೆ ಬರುತ್ತದೆ.

ಆದರೆ ಅದರ ಇಂಗಿತಾರ್ಥ ಮಾತ್ರ ನಮಗೆ ಹೊಳೆಯುವುದೇ ಇಲ್ಲ. ॥ 1.13 ॥

ಭೂಮಿಯ ಮೇಲಿನ ಬದುಕಿನಲ್ಲಿ ಎಂಥ ಸಂವೇದನೆ ಇದೆ? ಭೂಮಿ ಜಡ, ಅದರ ಸ್ಪಂದನಾಶೀಲತೆ ಬಹಳ ಕಡಿಮೆ. ಪ್ರಾಣದ ಗಲಭೆಯಲ್ಲಿ, ಜೀವನದ ಗದ್ದಲದಲ್ಲಿ (ಆತ್ಮಕ್ಕೆ) ಏನೂ ಕೇಳಿಸುವುದಿಲ್ಲ, ತಿಳಿಯುವುದಿಲ್ಲ.

ಮಾನವನಿಗೆ ಅರ್ಥವಾಗದು. ವಿಚಾರಗಳ ಗೊಂದಲದಲ್ಲಿ ತನ್ನ ಹೃದಯ ಏನು ಬಯಸುವುದು, ಏನು ಹೇಳುವುದು ಅನ್ನುವುದೇ ಅವನ ಗಮನಕ್ಕೆ ಬರುವುದಿಲ್ಲ.

ತಾನು (ಪರಮಾತ್ಮನ) ಸಂದೇಶ ಹೊತ್ತು ಬಂದವನು ಎಂಬುದೇನೋ ಅವನಿಗೆ ತುಸು ನೆನಪಿದೆಯಾಗಲಿ, ಯಾವ ಸಂದೇಶ, ಯಾವ ಆದೇಶ ಅದೇನೂ ಅವನಿಗೆ ನೆನಪಿಲ್ಲ, ಎಲ್ಲ ಮರವೆಯಾಗಿದೆ. ॥ 1.14 ॥

•ಇದೊಂದು ಗಹನವಾದ ಆಧ್ಯಾತ್ಮಿಕ ಸತ್ಯ! ಮಾನವನಿಗೆ ತನ್ನತನದ ಮರವೆಯಾಗಿದೆ. ಅಂತಲೇ ಜಗತ್ತಿನಲ್ಲಿ ನಾನಾ ಬಗೆಯ ತತ್ವಜ್ಞಾನಗಳ ಸುರಿಮಳೆ ಆಗಿದೆ, ಆಗುತ್ತಲಿದೆ. ಸೋಹಂ (ಅದು ನಾನೇ) ಎಂಬುದು ಅರಿವಾಗುವವರೆಗೆ ಈ ಲೌಕಿಕ ಪಯಣ ಮುಗಿಯದು.

•ಮುಂದಿನ ಸಾಲಿನಲ್ಲಿ ಮತ್ತೊಂದು ಅಪರೂಪದ ಅಲಂಕಾರದ ಪ್ರಯೋಗವಿದೆ, onomatopoeia. ಇಲ್ಲಿ ಧ್ವನಿಯ ಸಾದೃಶ್ಯದ ಅನುಸಾರ ಬದಗಳ ಜೋಡಣೆ ಇರುವುದು; ಕವಿಗಳಿಗೆ ತುಂಬ ಪ್ರಿಯವಾದ ಆದರೆ ಅಪಾರ ಪ್ರತಿಭೆಯನ್ನು ಅಪೇಕ್ಷಿಸುವ ಅಲಂಕಾರ ಇದು.

ಮಾನವನಿಗೆ ಸದಾ ತನ್ನ ವಿಚಾರಗಳ ಧ್ವನಿ ಪ್ರತಿಧ್ವನಿ ಮಾತ್ರ ಕೇಳುವುದಾಗಲೀ, ಹೃದಯದ ಮುಗ್ಧ ಪಿಸು ನುಡಿ ಕೇಳುವುದೇ ಇಲ್ಲ.

ಗಾಳಿ ಬಿಸುವ ಸೀಳು ಧ್ವನಿ, ಕಾಲದ (ಘಟಕಗಳು ಅನ್ನುವ) ವೃಕ್ಷಗಳ ಮೇಲಿಂದ ಬೀಸಿ ಬರುವ ಗಾಳಿಯ ಎಚ್ಚರಿಕೆ ಸೀಳು, ನಿಸರ್ಗದ ಜೊತೆ, ಪ್ರಕೃತಿಯ ಜೊತೆ ತಾನು ನಡೆಸುವ ಸಂಘರ್ಷದ ಸದ್ದು ಅವನಗೆ ಕೇಳದು. ॥ 1.15 ॥

ಗ್ರೀಕರ ಸಂದೇಶ ಹೊತ್ತು ತಂದ (ಟಾಲ್ಥಿಬಿಯಸ್) ದೂತನು ತನ್ನ ರಥದ ಗತಿ ಚುರುಕುಗೊಳಿಸಿದನು. ಟ್ರಾಯ್ ಪಟ್ಟಣದೆಡೆಗೆ ವೇಗವಾಗಿ ಧಾವಿಸಿದನು.

ಮೂಡಲ ದಿಕ್ಕಿನಲ್ಲಿ ಇನ್ನೂ ಅರುಣೋದಯದ ಹೊಳಪು ಇನ್ನೂ ಮಾಯವಾಗದೇ, ಹೊಳೆಯುತ್ತಿರುವಾಗಲೇ ದೂತನು ತನ್ನ ರಥದ ಕುದುರೆಗಳನ್ನು ತಿವಿದು, ಚಾಟಿ ಬೀಸಿ, ಹುರಿದುಂಬಿಸಿ ವೇಗವಾಗಿ ಓಡುವಂತೆ ಮಾಡಿದನು. ॥ 1.16 ॥

ಇನ್ನೂ ನಸುಕು. ಬುರುಜುಗಳ ಮೇಲಿನ ದೀಪಗಳು ಇನ್ನೂ ಉರಿಯುತ್ತಲಿವೆ. ಅಂಥದರಲ್ಲೇ ಕಣ್ಣು ಹೊಸಕುತ್ತ ಎಚ್ಚೆತ್ತ ಕಾವಲು ಪಡೆಯವರು (ಗ್ರೀಕರ) ಕುದುರೆಗಳ ಖುರಪುಟದ ಸದ್ದನ್ನು (ತುಸು ಭಯಾಶ್ಚರ್ಯಗಳಿಂದ) ಕೇಳಿಸಿಕೊಂಡರು.

ಶತ್ರು ಪಡೆಯ ಕುದುರೆಗಳ ಆಗಮನದ ಸದ್ದು ಪ್ರೈಜಿಯನ್ ಟ್ರಾಯ್ ನಗರದತ್ತ ಧಾವಿಸಿ ಬರುತ್ತಿರುವುದನ್ನು ಕಂಡು ಅವರ ನಿದ್ರೆ ಪೂರ್ಣ ಹಾರಿಹೋಯಿತು.

•ಪ್ರೈಜಿಯನ್ (Phrygian) ಅನ್ನುವುದು ಬಹು ಪುರಾತನವಾದ ಜನಾಂಗ, ಏಶಿಯಾ ಮೈನರನ ಬಹು ಭಾಗವನ್ನು ಬಹು ಕಾಲದವರೆಗೆ ಆಳಿದ ಕುಲ ಅದು. ಈಲಿಯನ್ ಜನರು ತಾವು ಆ ಪ್ರೈಜಿಯನ್ ಜನರ ಉತ್ತರಾಧಿಕಾರಿಗಳೆಂದೂ, ತಮ್ಮ ಟ್ರಾಯ್ ಪಟ್ಟಣವನ್ನು ಆ ಪ್ರೈಜಿಯನ್ ರೇ ಸ್ಥಾಪಿಸಿದ್ದಾರೆ ಎಂದೂ ಹೇಳಿಕೊಳ್ಳುತ್ತಿದ್ದರು. ॥ 1.17 ॥

ಗ್ರೀಕರ ದೂತನಾದ ಟಾಲ್ಥೀಬಿಯಸ್‌ನ ರಥದ ಕುದುರೆಗಳು ಅತಿ ಸೊಕ್ಕಿನಿಂದ ಝಾಂತಸ್ (Xanthus) ನದಿಯನ್ನು, ಅದರ ರಭಸದಿಂದ, ಸಿಟ್ಟಿನಿಂದ ಮೊರೆಯುವ ಭೀಕರ ಪ್ರವಾಹವನ್ನು ಮೆಟ್ಟಿ ಸುಲಭವಾಗಿ ಹಾದು ಟ್ರಾಯ್ ಪಟ್ಟಣದ ಕಡೆಗೆ ಧಾವಿಸಿದವು. ಆಮೇಲೆ ಅದರ ಮಂದವಾಗಿ ಹರಿಯುವ, ಸಣ್ಣ ತೊರೆಯಂಥ ಉಪನದಿ ಸಿಮಾಯಿಸ್ ಕೂಡ ಅತಿ ಸುಲಭವಾಗಿ ದಾಟಿದವು. ಅವುಗಳ ಯುದ್ಧೋತ್ಸಾಹದ ಕೆನೆತವು ಭಯಾವಹವಾಗಿದ್ದಿತು. ॥ 1.18 ॥

ಆ ರಥದಲ್ಲಿ ಇದ್ದವನು ಓರ್ವನೇ. ಅವನೂ ಶಸ್ತ್ರ ಧಾರಣೆ ಮಾಡಿಲ್ಲ, ನಿಃಶಸ್ತ್ರನಾಗಿದ್ದಾನೆ. ತುಸು ವಯಸ್ಸಾದ ವೃದ್ಧ, ನಿರ್ಬಲನಂತೆ ತೋರುತ್ತಾನೆ, ಬೆನ್ನು ಬಾಗಿದೆ.

ಟ್ರಾಯ್ ಪಟ್ಟಣದತ್ತ ರಥ ಓಡಿಸಿಕೊಂಡು ಅವನೊಬ್ಬನೇ ಬರುತ್ತಿದ್ದಾನೆ. ॥ 1.19 ॥

ಅವನು ವೃದ್ಧ, ದುರ್ಬಲ ಆದರೆ ಅವನ ಹಿಂದೆ ಗ್ರೀಕರ ದೈತ್ಯ ಬಲದ ಬೆಂಬಲವಿರುವುದರಿಂದ ಆ ದೂತನಲ್ಲೂ ಶಕ್ತಿ ಸಂಚಾರವಾಗಿದೆ. ಅವನು ಪರ್ಗಮಾ(Pergama)ದತ್ತ ವೇಗವಾಗಿ ಬಂದನು.

ಅವನು ವೃದ್ಧನೂ ದುರ್ಬಲನೂ ಆಗಿದ್ದರೂ ಸಹ ತನ್ನ ಕೈಯಲ್ಲಿ ಇಡೀ ರಾಷ್ಟ್ರವೊಂದರ ವಿನಾಶದ ಭವಿಷ್ಯವನ್ನು ಹಿಡಿದುಕೊಂಡು ಬರುತ್ತಿದ್ದಾನೆ.

•Pergama ಇದು ಆಧುನಿಕ ಹೆಸರು, ಟ್ರೋಜನರ ಟ್ರಾಯ್ ನಗರವನ್ನು ಗೆದ್ದು ಗ್ರೀಕರು ಅದನ್ನು ಹಾಳು ಮಾಡಿದರು. ಸುಮಾರು ಅದೇ ಜಾಗದಲ್ಲಿ Pergama ಅಥವಾ Pergomon ಅಥವಾ Pergamum ಎಂಬ ನಗರವನ್ನು ಕಟ್ಟಿದರು. ಈಗ ಈ ಪಟ್ಟಣವು ಕೂಡ ಸುಸ್ಥಿತಿಯಲ್ಲೇನೂ ಇಲ್ಲ. ಇದು ಗ್ರೀಸ್‌ನ ಮೈಸಿಯಾ ಪ್ರದೇಶದಲ್ಲಿದ್ದಿತು. ಏಜಿಯನ್ ದಂಡೆಯಿಂದ ಸುಮಾರು 25 ಕಿ.ಮಿ. ದೂರದಲ್ಲಿರುವ (ಉತ್ತರ) ಈ ಪಟ್ಟಣಕ್ಕೆ ದೂತನಾದ ಟಾಲ್ಥಿಬಿಯಸ್ ಬಂದನು.

•Cyclopean ಒಕ್ಕಣ್ಣಿನ ರಾಕ್ಷಸರ ಬಹು ಬಲಶಾಲಿ ಪಡೆ. ಇವರಿಗೆ ಹಣೆಯ ಮೇಲೆ ಒಂದೇ ಒಂದು ಕಣ್ಣು. ಈ ದೈತ್ಯ ಜನಾಂಗ ಬಹುಶಃ ಒಂದು ಕೇವಲ ಮಿಥ್ಯಾ ಕಲ್ಪನೆ. ಈಗಲೂ ಹಾಲಿವುಡ್ ಸಿನಿಮಾಗಳಲ್ಲಿ ಇಂಥ ಕೆಲ ರಾಕ್ಷಸರನ್ನು ತೋರಿಸುವುದುಂಟು. ಇದು ಬಹು ಬಲಶಾಲಿ ಮತ್ತು ನಿರ್ದಯ ಸೈನ್ಯ ಪಡೆಯ ಸಂಕೇತ.

ಇಲ್ಲಿ ದೂತನು ವೃದ್ಧನೂ ದುರ್ಬಲನೂ ಏಕಾಕಿಯೂ ಆಗಿದ್ದನು; ಆದರೆ ತನ್ನ ಹಿಂದೆ ಇಂಥ ಗ್ರೀಕ್ ರಾಕ್ಷಸ ಸೈನ್ಯ ಬೆಂಗಾವಲಾಗಿದೆ ಎಂಬ ಧೈರ್ಯದಿಂದಲೇ ಅವನು ಬಂದಿದ್ದಾನೆ. ಇದನ್ನೇ cinctured with Cyclopean ಎಂದು ಹೇಳುತ್ತಿದ್ದಾರೆ.

ಇಲ್ಲಿ ಕಟಕಿ ನುಡಿ ಇದೆ; irony ಪ್ರಯೋಗವಿದೆ. ದುರ್ಬಲನಾದರೂ ರಾಕ್ಷಸ ಬಲ ಹೊಂದಿದವನು ಎಂಬ ಅರ್ಥದಲ್ಲಿ ಈ ವಾಕ್ಯವನ್ನು ನೋಡಬೇಕು. ॥ 1.20 ॥

ಈಲಿಯನ್ ಕಾವಲುಗಾರನು ಕತ್ತಲಲ್ಲಿ ಕಾಣದಂತೆ ಬಗ್ಗಿ ಅಡಗಿ ಕುಳಿತುಕೊಂಡು, ಸಮುದ್ರದ ದಂಡೆಯಿಂದ ಕತ್ತಲಲ್ಲಿಯೇ ವೇಗವಾಗಿ ತಮ್ಮ ಪಟ್ಟಣದತ್ತ ಬರುತ್ತಿರುವ ಈ ದೂತನನ್ನು ಗಮನಿಸಿದನು. ॥ 1.21 ॥

ಟ್ರಾಯ್ ಪಟ್ಟಣ ಮಲಗಿತ್ತು. ಕಾವಲು ಪಡೆ ಎಚ್ಚೆತ್ತ ಮೇಲೆ ಪಟ್ಟಣಕ್ಕೆ ನಿಧಾನವಾಗಿ ಜೀವ ಬಂದಂತಾಯಿತು. ಜೋರಾದ ಸದ್ದಿಲ್ಲ, ಎಲ್ಲವೂ ಮೆಲುದನಿಯಲ್ಲಿಯೇ. ಮೆಲ್ಲಗೆ ಸೈನ್ಯದ ಓಡಾಟ ಆರಂಭವಾಯಿತು. ಅವರನ್ನು

ಕರೆ, ಇವರನ್ನು ಕೇಳು, ಎಲ್ಲ ಪ್ರಮುಖರು ಸೇರಿ ಪ್ರಯಾಮ್(Priam)ನ ಭವ್ಯ ಅರಮನೆಯ ಬಾಗಿಲು ತಟ್ಟಿದರು. ॥ 1.22 ॥

ಈಗ ಧ್ವನಿ ತುಸು ಜೋರಾಯಿತು: ಲೋಮೆಡಾನ್ (Laomedon) ದ್ವಾರದ ಬಳಿ ಯಾರಿದ್ದೀರಿ? ಈಲಿಯನ್ ರಾಜನನ್ನು ಎಚ್ಚರಿಸಿರಿ. ಗ್ರೀಕರ ಆರ್ಗೋಸ್ (Argos)ದಿಂದ ಟಾಲ್ಥಿಬಿಯಸ್ ರಾಜದೂತ ಇಷ್ಟು ನಸು ಬೆಳಕಿನಲ್ಲಿಯೇ ಬಂದಿದ್ದಾನೆ. ನಮ್ಮ ಟ್ರಾಯ್‌ನ ಹೆಬ್ಬಾಗಿಲ ಹೊರಗಡೆಗೆ ಕಾದಿದ್ದಾನೆ. ॥ 1.23 ॥

ಈಗ ಟ್ರೋಜನ್ ವೀರ ಡೀಫೋಬಸ್ ಹಾಗೂ ಇತರರು ಎಚ್ಚರಾಗಿ ಸಜ್ಜಾಗುವುದನ್ನು ಶ್ರೀ ಅರವಿಂದರು ವರ್ಣಿಸುತ್ತಾರೆ.

ಕರೆ ಜೋರಾಗಿತ್ತು, ತುರ್ತು ಕರೆ ಅದು. ಡೀಫೋಬಸ್ (Diephobus) ನಿದ್ರೆ ಹಾರಿಹೋಯಿತು. ಇವನು ಪ್ರಾಯಮ್ ದೊರೆಯ ಮಗ, ಹೆಸರಾಂತ ಮಹಾ ವೀರ. ಕತ್ತಲೆ ಇನ್ನೂ ಕರಗಿಲ್ಲ, ಪೂರ್ತಿ ಬೆಳಕು ಹರಿದಿಲ್ಲ. ಅವನ ನಿದ್ರೆ ಪೂರ್ತಿ ಮುಗಿದಿಲ್ಲ. ಕಣ್ಣು ತಿಕ್ಕುತ್ತ, ಎದ್ದು ಕುಳಿತ.

ಅವನು ಕನಸಿನಲ್ಲಿ ಎಲ್ಲೆಲ್ಲೋ ಅಲೆದಾಡಿದ್ದ, ದೂರ ದೂರ ಹೋಗಿದ್ದ. ಅನೇಕ ದೃಶ್ಯಗಳನ್ನು ನೋಡಿದ್ದಾನೆ, ಕೆಲವು ಚೆನ್ನಾಗಿವೆ, ಸುಂದರವಾಗಿವೆ, ಮುದ ನೀಡುವಂಥವುಗಳಾಗಿವೆ, ಆದರೆ ಕೆಲವು ಚೆನ್ನಾಗಿಲ್ಲ, ಭಯಾನಕವಾಗಿಯೂ ಇವೆ.

ಸೈನ್ಯದವರು ಎಚ್ಚರಿಸಿದರೂ ಥಟ್ಟನೇ ಸ್ಮೃತಿ ಮರಳಲಿಲ್ಲ. ಮಿದುಳು ತುಸು ಜಡ್ಡುಗಟ್ಟಿದಂತಾಗಿತ್ತು. ಧ್ವನಿ ಕೇಳುತ್ತವೆ, ಆದರೆ ವಿಷಯ ಸರಿಯಾಗಿ ತಿಳಿಯಲೊಲ್ಲದು. ಆದರೆ ಧ್ವನಿ ಕೇಳಿಸಿದ ತಕ್ಷಣ ಎದ್ದು ಕುಳಿತ. ತನ್ನ ಹೊಣೆಗಾರಿಕೆಯ ಅರಿವಾಯಿತು.

ಮೈಮುರಿಯುತ್ತ, ಧಡಪಡಿಸುತ್ತ ಬಾಗಿಲಿನ ಕಡೆ ಧಾವಿಸಿದ. ಕನಸಿನ ಪ್ರಪಂಚದಿಂದ ಹೊರಬಂದು ಸಂಪೂರ್ಣವಾಗಿ ವಾಸ್ತವ ಜಗತ್ತಿಗೆ ಮರಳಿದನು. ಸಿಂಹವು ತನ್ನ ಆಯಾಲ ಮೇಲಿನ ಮಂಜಿನ ಹನಿ ಕೊಡವಿ ಎದ್ದೇಳುವಂತೆ ನಿದ್ರೆಯ ಮಂಪರನ್ನು ಹರಿದು ಸಿದ್ಧನಾಗಿ ಬಾಗಿಲತ್ತ ಧಾವಿಸಿದನು. ॥ 1.24 ॥

(ಸಶೇಷ)

# ದಿನಾಂಕ 7ನೇ ಆಗಸ್ಟ್ 2022, ಭಾನುವಾರ ಬೆಂಗಳೂರಿನ ನಿಮ್ಹಾನ್ಸ್ ಕನ್ವೆನ್ಷನ್ ಸೆಂಟರ್‌ನಲ್ಲಿ ಆಯೋಜಿಸಲಾಗಿರುವ ಮಹರ್ಷಿ ಶ್ರೀ ಅರವಿಂದರ 150ನೇ ಜನ್ಮದಿನದ ವಾರ್ಷಿಕೋತ್ಸವ ಮತ್ತು 75ನೇ ಭಾರತದ ಸ್ವಾತಂತ್ರ್ಯೋತ್ಸವದ ಆಚರಣೆಯ ಸಮಾರಂಭದ ಆಹ್ವಾನ

ಆತ್ಮೀಯ ಸದಸ್ಯರುಗಳೇ,

ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಮತ್ತು ಶ್ರೀ ಅರವಿಂದೊ ಸಂಕೀರ್ಣ ಟ್ರಸ್ಟ್ ಜಂಟಿಯಾಗಿ ದಿನಾಂಕ 7ನೇ ಆಗಸ್ಟ್ 2022 ಭಾನುವಾರ ಬೆಂಗಳೂರಿನ ಹೊಸೂರು ರಸ್ತೆಯಲ್ಲಿರುವ ನಿಮ್ಹಾನ್ಸ್ ಕನ್‌ವೆನ್‌ಷನ್ ಸೆಂಟರ್‌ನಲ್ಲಿ ಭಾರತೀಯ ರಾಷ್ಟ್ರೀಯತೆ ಮತ್ತು ಪುನರ್‌ಜ್ಜೀವನ – ಶ್ರೀ ಅರವಿಂದರು ಕಂಡಂತೆ ರಾಷ್ಟ್ರೀಯ ಸಮಾವೇಶವನ್ನು ಶ್ರೀ ಅರವಿಂದರ 150ನೇ ಜನ್ಮದಿನದ ಆಚರಣೆಯ ಸ್ಮರಣಾರ್ಥ ದಿನಪೂರ್ತಿ ಕಾರ್ಯಕ್ರಮ ಬೆಳಿಗ್ಗೆ 10.00 ರಿಂದ ರಾತ್ರಿ 8.30 ರವರೆಗೂ ಮೂರು ವಿಭಾಗಗಳಲ್ಲಿ ಆಯೋಜಿಸಲಾಗಿದೆ. ಮೊದಲನೇ ವಿಭಾಗದಲ್ಲಿ ಉದ್ಘಾಟನಾ ಸಮಾರಂಭದೊಂದಿಗೆ ಮುಖ್ಯ ಭಾಷಣ ಆನಂತರ, ಊಟದ ವ್ಯವಸ್ಥೆ. ಎರಡನೇ ವಿಭಾಗದಲ್ಲಿ ರಾಷ್ಟ್ರೀಯ ಸಮಾವೇಶದ ಮುಖ್ಯ ವಿಷಯಗಳ ಕುರಿತು ಪ್ರವಚನ ಹಿರಿಯ ಸಾಧಕರುಗಳಿಂದ ಏರ್ಪಾಡು ಮಾಡಲಾಗಿರುತ್ತದೆ. ಮೂರನೇ ವಿಭಾಗದಲ್ಲಿ ವೃತ್ತಿಪರ ಕಲಾವಿದರುಗಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಲಾಗುವುದು.

ಈ ಕಾರ್ಯಕ್ರಮಕ್ಕೆ ತಮ್ಮ ಕೇಂದ್ರ ಹಾಗೂ ಶಾಖೆಗಳಿಂದ ಎಲ್ಲಾ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು, ಸದಸ್ಯರುಗಳು ಹಾಗೂ ಹಿರಿಯ ಸಾಧಕರುಗಳು ಆಗಮಿಸಬೇಕೆಂದು ರಾಜ್ಯ ಸಮಿತಿ ಪರವಾಗಿ ಕೋರಲಾಗಿದೆ.

ಈ ರಾಷ್ಟ್ರೀಯ ಸಮಾವೇಶಕ್ಕೆ ಆಗಮಿಸುವ ಎಲ್ಲಾ ಸದಸ್ಯರುಗಳಿಗೂ ಉಚಿತ ಊಟ ಮತ್ತು ತಂಗಲು ಡಾರ್ಮೆಟ್ರಿ ಸೌಲಭ್ಯವನ್ನು ಕಲ್ಪಿಸಲಾಗುವುದು. ತಂಗಲು ಪ್ರತ್ಯೇಕ ಕೋಣೆ ವ್ಯವಸ್ಥೆ ಇರುವುದಿಲ್ಲ. ಜೆ.ಪಿ. ನಗರ ಕೇಂದ್ರದಿಂದ ಕಾರ್ಯಕ್ರಮ ನಡೆಯುವ ಸ್ಥಳಕ್ಕೆ ಸಾರಿಗೆ ವ್ಯವಸ್ಥೆ ಇರುತ್ತದೆ.

**ವಿಶೇಷ ಸೂಚನೆ:** ಕೇಂದ್ರ ಮತ್ತು ಶಾಖೆಗಳನ್ನು ಪ್ರತಿನಿಧಿಸುವ ಮೂರು ಜನ ಅಧಿಕಾರಯುಕ್ತ ಪ್ರತಿನಿಧಿಗಳಿಗೆ ಬಸ್ಸು ಅಥವಾ ರೈಲಿನ ಪ್ರಯಾಣಕ್ಕೆ ಭರಿಸಿದ ಟಿಕೆಟನ್ನು ಹಾಜರು ಪಡಿಸಿದ್ದಲ್ಲಿ ರಾಜ್ಯ ಸಮಿತಿಯಿಂದ ಮರುಪಾವತಿ ಮಾಡಲಾಗುವುದು.

ದಯವಿಟ್ಟು ತಮ್ಮ ಕೇಂದ್ರ ಹಾಗೂ ಶಾಖೆಗಳ ಸದಸ್ಯರುಗಳಿಗೆ ಸದರಿ ಮಾಹಿತಿಯನ್ನು ಕೂಡಲೇ ರವಾನಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳಲಾಗಿದೆ. ಕಾರ್ಯಕ್ರಮಕ್ಕೆ ಆಗಮಿಸುವ ಸದಸ್ಯರುಗಳ ಸಂಖ್ಯೆಯನ್ನು ಮುಂಚಿತವಾಗಿ ತಿಳಿಸಿದ್ದಲ್ಲಿ ರಾಜ್ಯ ಸಮಿತಿಗೆ ಸೌಲಭ್ಯಗಳನ್ನು ನೀಡಲು ಅನುಕೂಲವಾಗುವುದು.

ಹೆಚ್ಚಿನ ಮಾಹಿತಿಗಾಗಿ ಶ್ರೀ ರವಿಶಂಕರ್ ಎನ್.ಹೆಚ್., ಮೊಬೈಲ್ ಸಂಖ್ಯೆ: 9880295312, ಶ್ರೀಮತಿ ವಾಣಿ ಕೆ., ಮೊಬೈಲ್ ಸಂಖ್ಯೆ: 9886628309, ಶ್ರೀಮತಿ ಮಹಾಲಕ್ಷ್ಮಿ, ಮೊಬೈಲ್ ಸಂಖ್ಯೆ: 9845896431, 080–22449882 ಹಾಗೂ ಇ–ಮೇಲ್ ಐ.ಡಿ.: sactmsf@gmail.com ಮೂಲಕ ಸಂಪರ್ಕಿಸಬಹುದು.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಸಹಿ/–

**ಡಾ॥ ಅಜಿತ್ ಸಬ್ನೀಸ್**

ಅಧ್ಯಕ್ಷರು

# ವಾರ್ತಾಪತ್ರ

## ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 11ನೇ ಜೂನ್ 2022ರ ಶನಿವಾರದಂದು ಶ್ರೀ ಅರವಿಂದರ ಪುಣ್ಯಾವಶೇಷದ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 10.00 ರಿಂದ 10.20 ರವರೆಗೆ ಸಾಮೂಹಿಕ ಧ್ಯಾನವನ್ನು ಏರ್ಪಡಿಸಲಾಗಿತ್ತು. ತತ್ಸಬಂಧ ಬೆಳಗ್ಗೆ 10.30 ರಿಂದ 12.00 ಗಂಟೆಯವರಗೆ "Amrutham Gamaya" ಎಂಬ ವಿಷಯವಾಗಿ ಡಾ॥ ಟಿ. ರಾಮಕೃಷ್ಣ (ಶ್ರೀ ಅರವಿಂದೋ ಸೆಂಟರ್ ಫಾರ್ ಎಜುಕೇಷನ್ ಇನ್ ಹ್ಯೂಮನ್ ವ್ಯಾಲ್ಯೂಸ್, ಕಲ್ಯಾಣ ನಗರ, ಬೆಂಗಳೂರು) ಇವರು ಉಪನ್ಯಾಸ ನೀಡಿದರು. ಉಪನ್ಯಾಸ ಕಾರ್ಯಕ್ರಮದಲ್ಲಿ ಅನೇಕ ಗುರು–ಬಂಧುಗಳು ಮತ್ತು ಶ್ರೀಮಾತಾರವಿಂದರ ಭಕ್ತರು ಭಾಗವಹಿಸಿದ್ದರು.

"On Indian Paintings" ವಿಷಯ ಕುರಿತು ದಿನಾಂಕ 10ನೇ ಜೂನ್ 2022 ರಿಂದ 11ನೇ ಆಗಸ್ಟ್ 2022 ವರೆಗೂ ಶ್ರೀ ಅರವಿಂದ ಸಂಕೀರ್ಣದ ಸಾಂಸ್ಕೃತಿಕ ಸಭಾಭವನದಲ್ಲಿ ಫೋಟೋ ಚಿತ್ರಪ್ರದರ್ಶನ ಆಯೋಜಿಸಲಾಗಿದೆ.

ದಿನಾಂಕ 24ನೇ ಜೂನ್ ಮಧ್ಯಾಹ್ನದಿಂದ 26ನೇ ಜೂನ್ 2022ರ ವರೆಗೂ ಶ್ರೀ ಅರವಿಂದೊ ಸಂಕೀರ್ಣ ಟ್ರಸ್ಟ್ ಮತ್ತು ಶ್ರೀ ಅರವಿಂದೋ ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ ಜಂಟಿಯಾಗಿ ಮೂರು ದಿನಗಳ "ರೀಜನಲ್ ಆರೋ ಯೂತ್ ವರ್ಕ್‌ಶಾಪ್"ನ್ನು ಶ್ರೀ ಅರವಿಂದೋ ಸೊಸೈಟಿ, ಪಾಂಡಿಚೇರಿಯಿಂದ ಆಗಮಿಸಿದ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಶಿವಕುಮಾರ್, ಶ್ರೀ ಶ್ರೀನಿವಾಸ್ ಮುಲುಗು, ಮಿಸ್. ಸ್ನೇಹ ಕೊಂಡಪಲ್ಲಿ ಇವರುಗಳು ನಡೆಸಿಕೊಟ್ಟರು. ತರಬೇತಿ ಕಾರ್ಯಾಗಾರದಲ್ಲಿ ಸಾಫ್ಟ್‌ವೇರ್ ಇಂಜಿನಿಯರ್‌ಗಳು, ಶಿಕ್ಷಕರು ಮತ್ತು ಶ್ರೀ ಅರವಿಂದರ ಭಕ್ತರುಗಳು ಒಟ್ಟು 30 ಸದಸ್ಯರು ಭಾಗವಹಿಸಿ ತರಬೇತಿ ಹೊಂದಿದರು.



ಫೋಟೋ: ಇಮೇಜಿಂಗ್ ಸಾವಿತ್ರಿ

ಜೀವದಾವೇಗ ಪಡೆದ ಉತ್ಕರ್ಷ ಮರುಜನಿಸಿ ಭಾವ ಲಹರಿ
ಅಚಲ ಗುರಿಯೆಡೆಯ ಶೋಧನೆಯ ಚಕ್ರ ಅನುಸರಿಸಿ ಅವಳ ದಾರಿ
ಹಗಲು–ಇರುಳುಗಳ ಕಾರ್ಯ–ತಂತ್ರಗಳ ಅಚಲತೆಯವರೆಗೆ ಪುಟಿದು
ಸಾವಿರದ ಜನತೆ ಫಲ–ಪುಷ್ಪ–ಪತ್ರ–ಆ ಮಣ್ಣು ವೃಕ್ಷ ಮಿಡಿದು

ಮುಖವ ಮುಚ್ಚಿರುವ ಭವಿತವ್ಯದೆಡೆಗೆ ಬಿಡುಗಣ್ಣು ಒಂಟಿಯಾಗಿ
ಅವನ ತೊಂದರೆಯ ಅರಸಿ ಪರಿಹರಿಸಿ ಉಜ್ವಳಿಸಿ ದೈವವಾಗಿ.

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 1 ಪುಟ 6)**

**RNI No. 22511/1971**
No. of Pages **68 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ಫೋಟೊ: ಇಮೇಜಿಂಗ್ ಸಾವಿತ್ರಿ

ಸಾವಿರದ ಸ್ವಪ್ನಕಿದು ಫಲಿತವೀಗ ಅವ್ಯಕ್ತ ಆಂತರಾರ್ಥ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 41)**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.